ಶುಕ್ರವಾರ, ಜನವರಿ 14, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 14 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ

ಸಿನಿಮಾ ಪುರವಣಿ
ಚಂದನವನದ ಹೆದ್ದಾರಿಯಲ್ಲಿ ಸುತ್ತಿದ 'ಉಡಾಳ ಬಾಬು ರಾವ್' ಪ್ರಮೋದ್ ಈಗ ಅಲಂಕಾರ್ ವಿದ್ಯಾರ್ಥಿಯಾಗಿದ್ದಾರೆ

ಸಂಖ್ಯೆ-ಸುದ್ದಿ
ಸರ್ವರಿಗೂ ಎಲ್‌ಪಿಜಿ ಸಂಪರ್ಕ ತಾಳೆಯಾಗದ ಸರ್ಕಾರದ ಲೆಕ್ಕ

ಮಗುವಿನ ಕಸ್ಟಡಿ: ತಾಯಿಗೆ ₹ 50 ಸಾವಿರ ದಂಡ 3B

ಪಾದಯಾತ್ರೆಗೆ ಅಲ್ಪವಿರಾಮ 3B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,235 ▲	18,257 ▲	₹49,400 (ಬೆಂಗಳೂರು)	₹62,600 (ಬೆಂಗಳೂರು)	73.90 ▲

ರಾಜ್ಯದಲ್ಲಿ ಒಂದೇ ದಿನ 25 ಸಾವಿರಕ್ಕೂ ಹೆಚ್ಚು ಕೋವಿಡ್ ಪ್ರಕರಣ

ಎರಡು ದಿನಕ್ಕೊಮ್ಮೆ ದುಪ್ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಕೋವಿಡ್ ಪ್ರಕರಣಗಳು ಪ್ರತಿ ಎರಡು ದಿನಗಳಿಗೊಮ್ಮೆ ದುಪ್ಪಟ್ಟಾಗುತ್ತಿವೆ. ರಾಜ್ಯದಲ್ಲಿ ಕಳೆದ 15 ದಿನಗಳಲ್ಲಿ ಸರಾಸರಿ ಶೇ 36.44 ರಷ್ಟು, ಬೆಂಗಳೂರು ನಗರ ಜಿಲ್ಲೆಯಲ್ಲಿ ಶೇ 32.64 ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 32.65 ರಷ್ಟು ಪ್ರಕರಣಗಳು ಏರಿಕೆ ಆಗಿದೆ.

ರಾಜ್ಯದಲ್ಲಿ ಗುರುವಾರ ಹೊಸ ಪ್ರಕರಣಗಳು 25,005 ದೃಢಪಟ್ಟಿದ್ದು, ಬೆಂಗಳೂರಿನಲ್ಲಿ 18,374 ಪ್ರಕರಣಗಳು ಪತ್ತೆಯಾಗಿವೆ. ಕೋವಿಡ್ ದೃಢ ಪ್ರಮಾಣ ರಾಜ್ಯದಲ್ಲಿ ಸರಾಸರಿ ಶೇ 12.39 ಕ್ಕೆ ಏರಿದೆ. ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 1,15,733 ಕ್ಕೆ ಮುಟ್ಟಿದೆ.

ಮೊದಲ ಅಲೆಯಲ್ಲಿ ಪ್ರಕರಣಗಳ ಸಂಖ್ಯೆ 10 ರಿಂದ 12 ದಿನಕ್ಕೆ ದುಪ್ಪಟ್ಟಾದರೆ, ಎರಡನೇ ಅಲೆಯಲ್ಲಿ 8 ದಿನಗಳಿಗೆ ದುಪ್ಪಟ್ಟಾಗುತ್ತಿತ್ತು. ಆದರೆ, ಮೂರನೇ ಅಲೆಯಲ್ಲಿ ಎರಡರಿಂದ ಎರಡೂವರೆ ದಿನಗಳಲ್ಲೇ ದುಪ್ಪಟ್ಟಾಗುತ್ತಿದೆ. ಡಿಸೆಂಬರ್ 20 ರಂದು ಬೆಂಗಳೂರಿನಲ್ಲಿ 269 ಹಾಗೂ ಉಳಿದ ಭಾಗದಲ್ಲಿ 87 ಸೇರಿ ಒಟ್ಟು 356 ಪ್ರಕರಣಗಳಿದ್ದವು. ಜ.5 ರಂದು ಬೆಂಗಳೂರಿನಲ್ಲಿ 3,605 ಹಾಗೂ ಉಳಿದ ಭಾಗದಲ್ಲಿ 641, ಜ.11 ರಂದು ಬೆಂಗಳೂರಿನಲ್ಲಿ 10,800 ಹಾಗೂ ಉಳಿದ ಕಡೆಗಳಲ್ಲಿ 3,673 ಪ್ರಕರಣಗಳು ವರದಿಯಾಗಿವೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಿಸೆಂಬರ್ ಮೊದಲ ವಾರದಲ್ಲಿ 3,151 ಪ್ರಕರಣಗಳು ದೃಢವಾಗಿತ್ತು. ಆಗ ಆಸ್ಪತ್ರೆಯಲ್ಲಿ ಶೇ 23, ಕೋವಿಡ್ ಕೇರ್ ಕೇಂದ್ರದಲ್ಲಿ ಶೇ 3, ಮನೆಯಲ್ಲಿಯೇ ಪ್ರತ್ಯೇಕ ವಾಸ ಶೇ 74 ರಷ್ಟು ಇದ್ದರು. ಜನವರಿಗೆ 1 ರಿಂದ 11 ರವರೆಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 62,641 ಆಗಿದ್ದು, ಆಸ್ಪತ್ರೆಯಲ್ಲಿ ಶೇ 6, ಕೋವಿಡ್ ಆರೈಕೆ ಕೇಂದ್ರದಲ್ಲಿ ಶೇ 1 ಮತ್ತು ಮನೆ ಪ್ರತ್ಯೇಕ ವಾಸದಲ್ಲಿ ಶೇ 93 ರಷ್ಟು ರೋಗಿಗಳು ಇದ್ದಾರೆ ಎಂದು ವಿವರ ನೀಡಿದರು.

10 ನೇ ಪುಟ ನೋಡಿ



ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಗುರುವಾರ ಆರೋಗ್ಯ ಕಾರ್ಯಕರ್ತರೊಬ್ಬರು ಹೊರ ರಾಜ್ಯದಿಂದ ಬಂದ ಪ್ರಯಾಣಿಕರಿಂದ ಕೋವಿಡ್ ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಿದರು —ಪ್ರಜಾವಾಣಿ ಚಿತ್ರ

ದೇಶದಲ್ಲಿ 2.47 ಲಕ್ಷಕ್ಕೆ ಏರಿದ ಹೊಸ ಪ್ರಕರಣ

ನವದೆಹಲಿ: ದೇಶದಾದ್ಯಂತ ಕೋವಿಡ್ ದೃಢ ಪ್ರಕರಣಗಳು ತೀವ್ರವಾಗಿ ಏರುತ್ತಿದ್ದು, ಗುರುವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ 2,47,417 ಹೊಸ ಪ್ರಕರಣಗಳು ದಾಖಲಾಗಿವೆ. ಇದೇ ಅವಧಿಯಲ್ಲಿ 380 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. 84,825 ಮಂದಿ ಗುಣಮುಖರಾಗಿದ್ದಾರೆ.

ಹಿಂದಿನ ದಿನಕ್ಕೆ ಹೋಲಿಸಿದರೆ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಶೇಕಡ 27ರಷ್ಟು ಹೆಚ್ಚಳವಾಗಿದ್ದು, ಕೋವಿಡ್ ದೃಢ ಪ್ರಮಾಣ ಶೇ 13.11ಕ್ಕೆ ಏರಿಕೆಯಾಗಿದೆ. ಒಟ್ಟು ಓಮೈಕ್ರಾನ್ ಪ್ರಕರಣಗಳ ಸಂಖ್ಯೆ 5,488 ತಲುಪಿದೆ. ಮಹಾರಾಷ್ಟ್ರದಲ್ಲಿ ಅತ್ಯಧಿಕ 46,723 ಕೋವಿಡ್ ಪ್ರಕರಣಗಳು ದಾಖಲಾಗಿವೆ.

ಮಕ್ಕಳಿಗೆ ಶೇ 30 ಹಾಸಿಗೆ ಮೀಸಲು

ಮಕ್ಕಳಲ್ಲಿ ಕೋವಿಡ್ ಸೋಂಕು ಹೆಚ್ಚುತ್ತಿರುವುದರಿಂದ ಜಿಲ್ಲಾಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಶೇ 30 ರಷ್ಟು ಹಾಸಿಗೆಗಳನ್ನು ಮಕ್ಕಳ ಚಿಕಿತ್ಸೆಗಾಗಿ ಮೀಸಲಿಡಲಾಗಿದೆ ಎಂದು ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯನ್ನು ಕೋವಿಡ್ ಸೋಂಕಿತ ಮಕ್ಕಳ ಚಿಕಿತ್ಸೆಗೆ ಮೀಸಲಿಡಲಾಗಿದೆ. ರಾಜ್ಯದ ಎಲ್ಲಾ ಶಾಲೆಗಳಲ್ಲಿ 15 ದಿನಕ್ಕೊಮ್ಮೆ ಮಕ್ಕಳ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಜನರಿಗೆ ಸಮಸ್ಯೆ ಆಗದಂತೆ ಕ್ರಮ: ಪ್ರಧಾನಿ ಸಲಹೆ



ನವದೆಹಲಿ (ಪಿಟಿಐ): ಕೋವಿಡ್ ಹರಡುವಿಕೆ ತಡೆಗೆ ಲಸಿಕೆ ಪಡೆಯುವುದು ಸೇರಿದಂತೆ, ಜನಜೀವನಕ್ಕೆ ತೊಂದರೆ ಆಗದಂತೆ ಸ್ಥಳೀಯವಾಗಿ ಅಗತ್ಯ ಕ್ರಮ ಜರುಗಿಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಸಲಹೆ ಮಾಡಿದರು.

ದೇಶದಲ್ಲಿನ ಕೋವಿಡ್ ಪರಿಸ್ಥಿತಿ ಕುರಿತು ಗುರುವಾರ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸಿದ ಅವರು, ಓಮೈಕ್ರಾನ್ ತಳಿ ತೀವ್ರವಾಗಿ ಹರಡುತ್ತಿದ್ದು, ಸ್ಥಳೀಯವಾಗಿಯೇ ತಡೆಗೆ ಕ್ರಮ ತೆಗೆದುಕೊಳ್ಳಬೇಕು ಎಂದರು.

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಶೀಘ್ರದಲ್ಲೇ ನಿರೀಕ್ಷಿಸಿ..

ಅಮೃತ ನಗರೋತ್ಥಾನಕ್ಕೆ ₹2,400 ಕೋಟಿ ಸಾಲ! 2

ಚಿನಕುರಳಿ
ಪ್ರಕಾಶ್ ಶೆಟ್ಟಿ









ಶುಕ್ರವಾರದ ಉಷ್ಣಾಂಶ 29° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಮುಸುಕಿದ ವಾತಾವರಣ. ನಂತರ ಮೋಡ ಕವಿದ ವಾತಾವರಣ ಇರಲಿದೆ

ಮುನ್ಸೂಚನೆ: ಶನಿವಾರ 28° 19° | ಭಾನುವಾರ 27° 18° | ಸೋಮವಾರ 27° 17°

‘ಪದವಿಯಲ್ಲಿ ಕನ್ನಡ ಭಾಷೆ ಕಡ್ಡಾಯಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಕನ್ನಡ ಭಾಷಾ ವಿಷಯವನ್ನು ಪದವಿಯಲ್ಲಿ ಕಡ್ಡಾಯವಾಗಿ ಬೋಧಿಸಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಗ್ರಹಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಇತ್ತೀಚಿನ ವರ್ಷಗಳಲ್ಲಿ ಕಲಿಕೆ ಮತ್ತು ಕಲಿಸುವ ವ್ಯವಸ್ಥೆಯಲ್ಲಿ ಸಾಕಷ್ಟು ಸ್ಥಿತ್ಯಂತರಗಳಾಗಿವೆ. ವಿವಿಧ ಆಯಾಮದ ಕಾರ್ಪೊರೇಟ್ ಶಿಕ್ಷಣ ವ್ಯವಸ್ಥೆಯಿಂದ ಜನಭಾಷೆಯಾದ ಕನ್ನಡದ ಸ್ಥಾನಮಾನ ಏರುಪೇರಾಗುತ್ತಿರುವುದು ವಿಷಾದನೀಯ. ಇಲ್ಲಿ ಕಲಿಯುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಕನ್ನಡ ಜ್ಞಾನ ಪಡೆಯುವುದು ಅವಶ್ಯ. ಶಿಕ್ಷಣದಲ್ಲಿ ಇಂಗ್ಲಿಷ್‌ನಂತೆ ಕನ್ನಡವನ್ನೂ ಕಡ್ಡಾಯಗೊಳಿಸಬೇಕು. ಇಲ್ಲವಾದಲ್ಲಿ ಹಿಂಬಾಗಿಲ ಮೂಲಕ ನಡೆಯುವ ಭಾಷಾ ಕಲಿಕೆಯ ಮಸಲತ್ತುಗಳನ್ನು ಪರಿಹರಿಸಲು ಸಾಧ್ಯವಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಇಲ್ಲಿನ ಕಾಲೇಜುಗಳಲ್ಲಿ ಅಧ್ಯಯನ ಮಾಡುವ ಪದವಿ ವಿದ್ಯಾರ್ಥಿಗಳು ಕನ್ನಡವನ್ನು ಒಂದು ಭಾಷೆಯನ್ನಾಗಿ ಕಲಿಯುವ ನಿಯಮ ಕಡ್ಡಾಯಗೊಳಿಸುವುದು ಅನಿವಾರ್ಯ. ಈ ನಾಡಿನಲ್ಲಿ ಶಿಕ್ಷಣ ಪಡೆದು ಉದ್ಯೋಗ ಪಡೆಯ ಬಯಸುವವರು ಇಲ್ಲಿನ ಪ್ರಧಾನ ಭಾಷಿಕರೊಡನೆ ವ್ಯವಹಾರ ನಡೆಸಬೇಕಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಭಾಷೆ ಕಲಿಯದವನು ಸಮಾಜದಲ್ಲಿ ಯಾವ ರೀತಿ ಜನಸೇವೆ ಮಾಡಬಲ್ಲ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ’ ಎಂದು ತಿಳಿಸಿದರು.



ಟಿ.ಎಸ್. ನಾಗಾಭರಣ

ಭಾಷೆ ಕಲಿಕೆ ಉತ್ತರದಾಯಿತ್ವ: ‘ಎರಡು ಸಾವಿರ ವರ್ಷಗಳಷ್ಟು ಇತಿಹಾಸ ಹೊಂದಿರುವ ಕನ್ನಡ ಭಾಷೆಯನ್ನು ಕಲಿಯುವುದರಿಂದ ಸಂಸ್ಕೃತದ ವಿದ್ಯಾರ್ಥಿಗಳಿಗೆ ಅಥವಾ ಸಂಸ್ಕೃತದ ಪ್ರಾಧ್ಯಾಪಕರಿಗೆ ಯಾವ ರೀತಿಯ ಹಾನಿಯುಂಟಾಗುತ್ತದೆ? ಕನ್ನಡ ನಾಡಿನ ಸಂಪನ್ಮೂಲಗಳನ್ನು ಬಳಸಿಕೊಂಡು ವಿದ್ಯೆ ಕಲಿಯಲು ಬಂದಿರುವ ಅನ್ಯ ಭಾಷಿಕರು ಈ ನೆಲದ ಜನರ ಭಾಷೆ ಕಲಿಯುವುದು ಅವರ ಉತ್ತರದಾಯಿತ್ವ’ ಎಂದು ಹೇಳಿದರು.

‘ಕನ್ನಡದ ಮಕ್ಕಳಿಗೆ ಕರ್ನಾಟಕದಲ್ಲಿ ಕನ್ನಡದ ಕಲಿಸದೇ ಇನ್ನೆಲ್ಲಿ ಕಲಿಸಬೇಕು? ಇಲ್ಲಿನ ಜನರೊಂದಿಗೆ ಸಂವಹನ ನಡೆಸಲು ಕನ್ನಡ ಅಗತ್ಯವೇ ಹೊರತು ಸಂಸ್ಕೃತವಲ್ಲ. ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿರುವ ಸಂಸ್ಕೃತ ಭಾರತ ಟ್ರಸ್ಟ್‌ನ ಪ್ರಮುಖರು ಮತ್ತು ಇತರರು ಇದನ್ನು ಆಲೋಚಿಸಬೇಕು’ ಎಂದು ತಿಳಿಸಿದರು.

ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಇದ್ದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣೆ ಮತ್ತು ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಜ.14ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಗ್ಗನಹಳ್ಳಿ, ಲಕ್ಷ್ಮಣ ನಗರ, ಸಂಜೀವಿನಿ ನಗರ, ವಿಘ್ನೇಶ್ವರ ನಗರ, ಸುಂಕದಕಟ್ಟೆ, ರಾಜೀವ್ ಗಾಂಧಿ ನಗರ, ಭೈರವೇಶ್ವರ ನಗರ, ಹನುಂಮತರಾಯನಪಾಳ್ಯ, ಆರ್.ಎಚ್.ಸಿ.ಎಸ್. ಲೇಔಟ್, ಅನ್ನಪೂರ್ಣೇಶ್ವರಿ ನಗರ, ಪಾಪರೆಡ್ಡಿಪಾಳ್ಯ, ಕಾವೇರಿಪುರ, ಭವಾನಿಗರ ಸುತ್ತಮುತ್ತ ಪ್ರದೇಶಗಳು.

ಡೆಲಿವರಿ ವ್ಯಕ್ತಿಯ ಪತ್ನಿಗೆ ಜೊಮ್ಯಾಟೊ ಉದ್ಯೋಗ

ನವದೆಹಲಿ (ಪಿಟಿಐ): ಜೊಮ್ಯಾಟೊ ಡೆಲಿವರಿ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದ ಸಲೀಲ್ ತ್ರಿಪಾಠಿ ಅವರ ಪತ್ನಿ ಸುಚೇತಾ ತ್ರಿಪಾಠಿ ಅವರಿಗೆ ಉದ್ಯೋಗ ನೀಡುವುದಾಗಿ ಜೊಮ್ಯಾಟೊ ಕಂಪನಿ ತಿಳಿಸಿದೆ. ಸಲೀಲ್ ಅವರು ಹಿಂದಿನ ವಾರ ರಸ್ತೆ ಅಪಘಾತವೊಂದರಲ್ಲಿ ಮೃತಪಟ್ಟಿದ್ದರು.

ಸುಚೇತಾ ಅವರಿಗೆ ವಿಮಾ ಪರಿಹಾರ ಮೊತ್ತವಾಗಿ ₹ 10 ಲಕ್ಷ, ಜೊಮ್ಯಾಟೊ ಸಿಬ್ಬಂದಿ ಒಗ್ಗೂಡಿಸಿ ನೀಡಿರುವ ₹ 12 ಲಕ್ಷವನ್ನು ಕೂಡ ನೀಡಲಾಗುವುದು ಎಂದು ಕಂಪನಿ ಹೇಳಿದೆ.

ಈಗಾಗಲೇ ಅನುಮೋದಿಸಿರುವ ಕಾಮಗಾರಿಗಳಿಗೆ ₹9 ಸಾವಿರ ಕೋಟಿ ಬಿಡುಗಡೆಗೆ ಬಾಕಿ

ಅಮೃತ ನಗರೋತ್ಥಾನಕ್ಕೆ ₹2,400 ಕೋಟಿ ಸಾಲ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆ’ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ₹ 6,000 ಕೋಟಿ ವಿಶೇಷ ಅನುದಾನ ಒದಗಿಸಲು ₹2,400 ಕೋಟಿ ಸಾಲ ಪಡೆಯಲು ತೀರ್ಮಾನಿಸಲಾಗಿದೆ.

ಪಾಲಿಕೆಗೆ ವಿಶೇಷ ಅನುದಾನ ಒದಗಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಕಳೆದ ಗುರುವಾರ ಒಪ್ಪಿಗೆ ನೀಡಿತ್ತು. 2021ರ ಆಗಸ್ಟ್ 15ರಂದು ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಈ ಯೋಜನೆ ಪ್ರಕಟಿಸಿದ್ದರು. ಯೋಜನೆಯ ಅವಧಿಯನ್ನು ಐದು ವರ್ಷಗಳ ಬದಲಿಗೆ ಮೂರು ವರ್ಷಗಳಿಗೆ ಸೀಮಿತಗೊಳಿಸಿ ಅನುಷ್ಠಾನಕ್ಕೆ ತರಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದ್ದರು.

ಐದು ವರ್ಷಗಳಲ್ಲಿ ಅನುಷ್ಠಾನಕ್ಕೆ ಸಲಹೆ: ನಗರಾಭಿವೃದ್ಧಿ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿದ್ದ ಹಣಕಾಸು ಇಲಾಖೆ, ಯೋಜನೆಯನ್ನು ಮೂರು ವರ್ಷಗಳ ಬದಲು ಐದು ವರ್ಷಗಳಲ್ಲಿ ಅನುಷ್ಠಾನ ಮಾಡಬೇಕು ಎಂದೂ ಸಲಹೆ ನೀಡಿತ್ತು. ರಾಜ್ಯ ಸರ್ಕಾರವು ಪ್ರತಿವರ್ಷ ₹2 ಸಾವಿರ ಕೋಟಿ ಅನುದಾನ ನೀಡಬೇಕು ಎಂದು ಪಾಲಿಕೆ ಬೇಡಿಕೆ ಇಟ್ಟಿದೆ. ಆದರೆ, ಬೆಂಗಳೂರು ನವ ನಗರೋತ್ಥಾನ ಯೋಜನೆಯಡಿ ಈಗಾಗಲೇ ಅನುಮೋದಿಸಿರುವ ಕಾಮಗಾರಿಗಳಿಗೆ ₹9 ಸಾವಿರ ಕೋಟಿಗಳ ಅನುದಾನ ಬಿಡುಗಡೆ ಬಾಕಿ ಇದೆ. ಹಾಗಾಗಿ, ಈ ಪ್ರಸ್ತಾವನೆಯನ್ನು ಕೆಲವು ಮಾರ್ಪಾಡುಗಳೊಂದಿಗೆ ಅನುಷ್ಠಾನಕ್ಕೆ ಹಣಕಾಸು ಇಲಾಖೆ ಒಪ್ಪಿಗೆ ನೀಡಿತ್ತು.

ವಿಶೇಷ ಮೂಲಸೌಕರ್ಯ ಯೋಜನೆಯ ಕ್ರಿಯಾಯೋಜನೆ

ವರ್ಷ	ಮೊತ್ತ (₹ಕೋಟಿಗಳಲ್ಲಿ)
2016-17	7,300
2017-18	2,541
2018-19	20
2019-20	9,451
2020-21	1,019
2021-22	1,010
ಒಟ್ಟು	21,342

ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಮೊತ್ತ (₹ಕೋಟಿಗಳಲ್ಲಿ)

ಅನುದಾನ	2016-17	2017-18	2018-19	2019-20	2020-21	2021-22	ಒಟ್ಟು
ಎಸ್‌ಎಫ್‌ಸಿ	214.48	234.60	220.59	91.25	0	0	761.12
ನಗರೋತ್ಥಾನ	1000	865	115.38	0	0	0	1980
ಕೆರೆಗಳು	50	50	5	0	0	0	105
ವಿಶೇಷ ಮೂಲಸೌಕರ್ಯ	1079	2031	2280	1435	2500	1500	10825
ಎಸ್‌ಎಫ್‌ಸಿ (ಹೆಚ್ಚುವರಿ ಅನುದಾನ)	0	0	0	13.75	0	0	13.75
ಒಟ್ಟು	2,343.68	3,180	2,620	1,540	2,500	1,500	13,685

ಒಟ್ಟು ಯೋಜನಾ ಮೊತ್ತದಲ್ಲಿ ಶೇ 40ರಷ್ಟನ್ನು (₹2,400 ಕೋಟಿ) ಕೆಯುಐಡಿಎಫ್‌ಸಿಯ ‘ಕರ್ನಾಟಕ ವಾಟರ್ ಆ್ಯಂಡ್ ಸ್ಯಾನಿಟೈಸೇಷನ್ ಪೂಲ್ಡ್ ಫಂಡ್ ಟ್ರಸ್ಟ್’ನಿಂದ ಸಾಲ ಪಡೆಯಬೇಕು. ಶೇ 10ರಷ್ಟನ್ನು ಬಿಬಿಎಂಪಿಯ ಸ್ವಂತ ಸಂಪನ್ಮೂಲದಿಂದ ಭರಿಸಬೇಕು ಎಂದು ಹಣಕಾಸು ಇಲಾಖೆ ತಿಳಿಸಿತ್ತು. ರಾಜ್ಯ ಸರ್ಕಾರ ಪ್ರತಿವರ್ಷ ₹1 ಸಾವಿರ ಕೋಟಿಯಂತೆ ₹3 ಸಾವಿರ ಕೋಟಿ ಅನುದಾನ ನೀಡಲಿದೆ. ₹2,400 ಕೋಟಿ ಸಾಲವನ್ನು (ಶೇ 9 ಬಡ್ಡಿ ಪ್ರತ್ಯೇಕ) ಬಿಬಿಎಂಪಿಯೇ ಪಾವತಿಸಬೇಕು.

‘ಪಾಲಿಕೆಗೆ ಕಳೆದ ಕೆಲವು ವರ್ಷಗಳಿಂದ ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತಿರುವ ಮೊತ್ತ ₹1 ಸಾವಿರ ಕೋಟಿಯಷ್ಟು ಮಾತ್ರ. 9 ಸಾವಿರ ಕೋಟಿ ಬಿಡುಗಡೆಗೆ ಬಾಕಿ ಇದೆ. ಕಾಮಗಾರಿ ನಡೆಸಿರುವ ಗುತ್ತಿಗೆದಾರರಿಗೆ ₹1,500 ಕೋಟಿಯನ್ನು ಪಾಲಿಕೆ ಪಾವತಿಸಬೇಕಿದೆ. ಗುತ್ತಿಗೆದಾರರು ಈ ಬಗ್ಗೆ ಹಲವು ಸಲ ಪ್ರತಿಭಟನೆ ನಡೆಸಿ ಎಚ್ಚರಿಕೆ ನೀಡಿದ್ದಾರೆ. ಇದೀಗ, ಅಮೃತ ನಗರೋತ್ಥಾನ ಯೋಜನೆಯ ಹೆಸರಿನಲ್ಲಿ ರಾಜ್ಯ ಸರ್ಕಾರ ಮತ್ತಷ್ಟು ಹೊರೆಯನ್ನು ಪಾಲಿಕೆ ಮೇಲೆ ಹಾಕಲು ಮುಂದಾಗಿದೆ’ ಎಂದು ಪಾಲಿಕೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

‘ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಗರದ ಅಭಿವೃದ್ಧಿಗೆ ₹7,100 ಕೋಟಿ ಯೋಜನೆಗಳನ್ನು ಪ್ರಕಟಿಸಲಾಯಿತು. ಈಜೀಪುರ ಮೇಲ್ಸೇತುವೆ, ಶಿವಾನಂದ ವೃತ್ತದ ಉಕ್ಕಿನ ಮೇಲ್ಸೇತುವೆ, ಪಶ್ಚಿಮ ಕಾರ್ಡ್ ರಸ್ತೆಯ ಮೇಲ್ಸೇತುವೆ ಯೋಜನೆಗಳು ಇದರಲ್ಲಿ ಸೇರಿದ್ದವು. ಈ ಯೋಜನೆಗಳು ಐದು ವರ್ಷಗಳು ಕಳೆದರೂ ಪೂರ್ಣವಾಗಿಲ್ಲ. ಕಾಂಗ್ರೆಸ್ ಸರ್ಕಾರ ಟೆಂಡರ್ ಕರೆದು ಕಾರ್ಯಾದೇಶ ನೀಡಿ ಸ್ವಲ್ಪ ಅನುದಾನ ಬಿಡುಗಡೆ ಮಾಡಿತ್ತು. ಬಳಿಕ ಬಂದ ಸರ್ಕಾರಗಳು ಬೇರೆ ಯೋಜನೆಗಳತ್ತ ಗಮನ ಹರಿಸಿದವು. ಹಾಗಾಗಿ, ಈ ಯೋಜನೆಗಳು ಕುಂಟುತ್ತಾ ಸಾಗಿವೆ. ಅಮೃತ ನಗರೋತ್ಥಾನ ಯೋಜನೆಯ ಸ್ಥಿತಿಯೂ ಇದೇ ರೀತಿ ಆಗದಿದ್ದರೆ ಸಾಕು’ ಎಂದು ಮತ್ತೊಬ್ಬ ಅಧಿಕಾರಿ ಅಭಿಪ್ರಾಯಪಟ್ಟರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕಾರ್ಮಿಕರ ಹೋರಾಟಕ್ಕೆ ಮೇಧಾ ಪಾಟ್ಕರ್ ಬೆಂಬಲ

ಕೆಲಸದಿಂದ ವಜಾಗೊಳಿಸಿರುವ ಐಟಿಐ ಆಡಳಿತ ಮಂಡಳಿ ಕ್ರಮಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮನ್ನು ಕಾನೂನು ಬಾಹಿರವಾಗಿ ಕೆಲಸದಿಂದ ವಜಾಗೊಳಿಸಿರುವ ಐಟಿಐ ಆಡಳಿತ ಮಂಡಳಿಯ ಕ್ರಮವನ್ನು ಖಂಡಿಸಿ ಕಾರ್ಮಿಕರು ಸತತ 45 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಕಾರ್ಮಿಕರ ಹೋರಾಟಕ್ಕೆ ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್ ಬೆಂಬಲ ಸೂಚಿಸಿದ್ದಾರೆ.

‘ಭಾರತದ ಮೊದಲ ಸಾರ್ವಜನಿಕ ವಲಯದ ಉದ್ದಿಮೆಯಾಗಿರುವ ಐಟಿಐ ಲಿಮಿಟೆಡ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರು, ಸಂಘಟನೆಯೊಂದನ್ನು ಕಟ್ಟಿಕೊಂಡು ಆ ಮೂಲಕ ತಮ್ಮ ಕಾನೂನುಬದ್ಧ ಹಕ್ಕುಗಳಿಗಾಗಿ ಒತ್ತಾಯಿಸಿದ್ದಾರೆ. ಈ ಕಾರಣಕ್ಕೆ ಸುಮಾರು 5 ಹಾಗೂ 30 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದ 80 ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ವಜಾ ಮಾಡಲಾಗಿದೆ. ಇದನ್ನು ಪ್ರಶ್ನಿಸಿ ಅವರೆಲ್ಲಾ ದೂರವಾಣಿ ನಗರದ ಐಟಿಐ ಗೇಟ್ ಎದುರು ಪ್ರತಿಭಟನೆ ನಡೆಸುತ್ತಿದ್ದಾರೆ. ಮೇಧಾ ಅವರು ಶುಕ್ರವಾರ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಧರಣಿ ನಿರತರ ಜೊತೆ ಸಮಾಲೋಚನೆ ನಡೆಸಲಿದ್ದಾರೆ’ ಎಂದು ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ರಾಜ್ಯ ಸಮಿತಿ ಸದಸ್ಯೆ ಮೈತ್ರೇಯಿ ಕೃಷ್ಣನ್ ಹೇಳಿದರು.



ಪ್ರತಿಭಟನೆಯಲ್ಲಿ ಪಾಲ್ಗೊಂಡಿರುವ ಕಾರ್ಮಿಕರು

‘ಐಟಿಐ ಲಿಮಿಟೆಡ್, ಭಾರತದ ದೂರಸಂಪರ್ಕ ಹಾಗೂ ಸಂವಹನ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಸೂಕ್ಷ್ಮ ಹಾಗೂ ರಕ್ಷಣಾ ಸಂಬಂಧಿತ ಯೋಜನೆಗಳಲ್ಲಿ ಪ್ರಮುಖ ಪಾತ್ರ ನಿಭಾಯಿಸುತ್ತದೆ. ವಜಾಗೊಂಡಿರುವ ಕಾರ್ಮಿಕರು ಈ ಯೋಜನೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕೋವಿಡ್ ಮೊದಲ ಅಲೆಯ ವೇಳೆ 3 ಸಾವಿರಕ್ಕೂ ಅಧಿಕ ವೆಂಟಿಲೇಟರ್ ಹಾಗೂ ಫೇಸ್‌ಶೀಲ್ಡ್ ತಯಾರಿಕೆಯಲ್ಲಿ ಭಾಗಿಯಾಗಿದ್ದಾರೆ. ಸುದೀರ್ಘ ಸೇವೆ ಸಲ್ಲಿಸಿದ್ದರೂ ಕೂಡ ಅವರನ್ನು ‘ಗುತ್ತಿಗೆ ಕಾರ್ಮಿಕರು’ ಎಂದು ಬಿಂಬಿಸಲಾಗುತ್ತಿದೆ. ಅಗತ್ಯ ಮೂಲ ಸೌಕರ್ಯಗಳನ್ನು ನಿರಾಕರಿಸಲಾಗಿದೆ’ ಎಂದು ದೂರಿದರು.

‘ವಜಾಗೊಳಿಸಿರುವ ಎಲ್ಲಾ ಕಾರ್ಮಿಕರನ್ನೂ ಮರು ನೇಮಕ ಮಾಡಿಕೊಳ್ಳುವಂತೆ ಐಟಿಐ ಆಡಳಿತ ಮಂಡಳಿಗೆ ಪ್ರಾದೇಶಿಕ ಕಾರ್ಮಿಕ ಆಯುಕ್ತರು ಸೂಚನೆ ನೀಡಿದ್ದಾರೆ. ಸಂಘಟನೆ ಕಟ್ಟಿ ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ ಹೋರಾಡುತ್ತಿರುವುದನ್ನು ಸಹಿಸದ ಆಡಳಿತ ಮಂಡಳಿ ಆಯುಕ್ತರ ಸೂಚನೆಗೂ ಮನ್ನಣೆ ನೀಡುತ್ತಿಲ್ಲ. ಇದನ್ನು ಅರಿತಿರುವ ಮೇಧಾ ಪಾಟ್ಕರ್ ಅವರು ಕಾರ್ಮಿಕರ ಹಕ್ಕುಗಳಿಗೆ ಧ್ವನಿಗೂಡಿಸಿದ್ದಾರೆ. ಅವರ ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ’ ಎಂದರು.

‘ಐಟಿಐ ಆಡಳಿತ ಮಂಡಳಿ ನಮ್ಮನ್ನು ಗುಲಾಮರಂತೆ ಕಾಣುತ್ತಿದೆ. ಮಹಿಳೆಯರನ್ನು ಶೋಷಣೆ ಮಾಡುತ್ತಿದೆ. ಕಾರ್ಮಿಕರ ಹಕ್ಕುಗಳನ್ನು ದಮನ ಮಾಡುತ್ತಿದೆ’ ಎಂದು ಪ್ರತಿಭಟನಕಾರರು ದೂರಿದರು.

20ರಿಂದ ಸ್ನಾತಕೋತ್ತರ ಪದವಿ ಪ್ರವೇಶ ಪ್ರಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ಪದವಿ ಪ್ರವೇಶ ಪ್ರಕ್ರಿಯೆ ದಿನಾಂಕಗಳನ್ನು ಬೆಂಗಳೂರು ವಿಶ್ವವಿದ್ಯಾಲಯ ಮರುಪರಿಷ್ಕರಿಸಿದೆ.

2021ರ ನವೆಂಬರ್ 9 ಮತ್ತು 29 ಹಾಗೂ ಡಿಸೆಂಬರ್ 13, 17, 18ರಂದು ಪ್ರವೇಶ ಪ್ರಕ್ರಿಯೆಗೆ ದಿನಾಂಕಗಳನ್ನು ನಿಗದಿಪಡಿಸಲಾಗಿತ್ತು. ಈ ದಿನಾಂಕಗಳನ್ನು ಮರುಪರಿಷ್ಕರಿಸಿದ್ದು, ಜ.20ರಿಂದ ಪ್ರಕ್ರಿಯೆ ಆರಂಭಿಸಲು ಉದ್ದೇಶಿಸಲಾಗಿದೆ.

ಜ.20 ಮತ್ತು 21ರಂದು ಆಫ್‌ಲೈನ್ ಮುಖಾಂತರ ವಿಜ್ಞಾನ ವಿಷಯಗಳ ಪ್ರವೇಶ ಪ್ರಕ್ರಿಯೆ ನಡೆಯಲಿದೆ. ಜ.24 ಮತ್ತು 25ರಂದು ಆಫ್‌ಲೈನ್ ಮೂಲಕ ಕಲಾ, ಶಿಕ್ಷಣ ಮತ್ತು ದೈಹಿಕ ಶಿಕ್ಷಣ ವಿಷಯಗಳ ಪ್ರವೇಶ ಪ್ರಕ್ರಿಯೆಯನ್ನು ನಿಗದಿಪಡಿಸಲಾಗಿದೆ.

ಜ.20 ಮತ್ತು 21 ಹಾಗೂ ಜ.24 ಮತ್ತು 25ರಂದು ಆಫ್‌ಲೈನ್ ಮುಖಾಂತರ ವಾಣಿಜ್ಯ ವಿಷಯಗಳ ಪ್ರವೇಶ ಪ್ರಕ್ರಿಯೆ ನಡೆಯಲಿದೆ.

ಆಫ್‌ಲೈನ್ ಕೌನ್ಸೆಲಿಂಗ್‌ನ ವೇಳಾಪಟ್ಟಿ ಮತ್ತು ಸ್ಥಳವನ್ನು ಶೀಘ್ರ ಪ್ರಕಟಿಸಲಾಗುವುದು ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ರಾಷ್ಟ್ರಕವಿ ಕುವೆಂಪು ಅವರ 117ನೇ ಹುಟ್ಟುಹಬ್ಬ ಹಾಗೂ ಪ್ರಶಸ್ತಿಗಳ ಪ್ರದಾನ: ಕೆ. ಮರುಳಸಿದ್ದಪ್ಪ, ಅಧ್ಯಕ್ಷತೆ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಮುಖ್ಯ ಅತಿಥಿ: ರತ್ನಾಕಾಳೇಗೌಡ, ಪ್ರಶಸ್ತಿ ಪುರಸ್ಕೃತರು: ಎಲ್.ಎನ್. ಮುಕುಂದರಾಜ್, ಯಶಸ್ವಿನಿ ಕೆ.ಆರ್., ಸಂಗಮೇಶ ಉಪಾಸೆ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಗರ್ತಿಕೆರೆ ರಾಘವೇಂದ್ರ, ಪ್ರಶಸ್ತಿ ಪ್ರದಾನ: ವಿ. ಸುನೀಲ್ ಕುಮಾರ್, ಪ್ರಶಸ್ತಿ ಪುರಸ್ಕೃತರ ಪರಿಚಯ ಹಾಗೂ ಪುಸ್ತಕ ಅನಾವರಣ: ಎನ್. ಮಂಜುಳಾ, ಮುಖ್ಯ ಅತಿಥಿಗಳು: ಲಲಿತಾ ಶ್ರೀನಿವಾಸನ್, ಎಸ್. ರಂಗಪ್ಪ, ಆಯೋಜನೆ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Sites

Anjanapura

ANJANAPURA WANTED Sites, JP Nagar, 8 and 9th Phase, Banashankari 5th & 6th Stage Viveshwaraya Layout Kempegowda Layout any measurement. Ph: 9845132011/ 9663554448

REAL ESTATE SELLING

Commercial Building

Banaswadi

BRAND NEW Retail Commercial Building for Sale, HBR ORR, Banaswadi, Expected 80Cr, Stoyds. 9845003469/6364910678

Indiranagar

COMMERCIAL BUILDING for Sale, 100 feet Road, Indiranagar, 60x90, Expected 24Cr. 45x90, Expected 12Cr. Stoyds. 9845003469/ 6364910678

Flat

Vasanth Nagar

2 BHK flat for sale at palace cross Road, Vasanthnagar, East facing, 1 Covered car park. Gated community, 1262 sqft. 9845493251/ 9449009325

Sites

Kumaraswamy Layout

EAST FACING 30 x 40 BDA site with house in ISRO Layout Bangalore, Owner 9591411133

Jayanagar

VISVESHWARAIAH LAYOUT- BDA 4TH BLOCK-30x40 North Facing Site for Sale immediately. 8660044518

Mysore

FOR SALE Sites Plots and Houses in Mysore Interested Buyers Contact: 9663428273

JOB OPPORTUNITIES

Accounts & Finance

INDE CONSULTING Invites applications from Graduates /PG for position of Accounts Executive. With morethan 1 year of Experience in Finance/ Audit/ Accounts. At Jayanagar, Bangalore. Mob-9902006065/ 080-26650690 CV to: indeconsultingas@gmail.com

General

OPPORTUNITY FOR Retired Officials, Bankers,NRI, Teachers, Professionals, Homemakers, CAs. Earn salary+ Incentives. 8095301555

Teachers/ Professors

HINDI TEACHER FOR HIGH SCHOOL NEAR JP_NAGAR METRO STATION. SHOULD SPEAK KANNADA. WHATSAPP CV 9980944566

Part-Time Jobs

REPUTED MNC Company Provide Work From Home to 30 to 35K at Malleswaram: 7019215243/ 9886641282

BEAUTY & HEALTH

Health Clinic

ANU SPA Massage Therapy Available near Ring Road, Bharath Petrol Bunk, Koramangala. Contact No: 9035930397

BUSINESS

Business Offers

Finance

NRI'S INVESTMENT And Finance Available On Low Interest Against Properties, Land And Building, Sites, Flats, Converted And Agriculture Lands Call: 7411265189

PERSONAL

Change of Name

RAMANI VASRAM BHAI BHOJA BHAI, JC681768K, SUB/ ASH, Vill- Changa, Jamnagar, Gujarat, changed my Son's name MANOJ VASARAMBHAI to MANOJ KHARA, 10/01/2022, Notary K.V. Mani, Bangalore

AFFIDAVIT

I, **SHAIWANTHI,** D/o. S.N. Murali Mohan, aged about 47 years, residing at No.1/1, Raja Ram Mohan Roy Road, Richmond Circle, Bengaluru - 560 025, hereby declare that all names **SHAIVANTHI, SAKALA MURALIMOHAN SHAIWANTHI, SHAIVANTHI VASANADU and SHYVANTHI** belongs to one and the same person. Vide affidavit dated 23-12-2021 sworn before notary T.C. Thimmaraja, Bangalore

I, ARYAN KARTHEE residing at No.673, 201, 2nd Floor, 11th B Main, Jayanagar 5th Block, Bangalore-560041 have changed my name to SANKALP KARTHEE JAJEE affidavit dated 14.12.2021 notary V.Anjanappa, Bangalore.

I, RATHNA, W/o Late S. Srinivasa, R/o, #61/2, 2nd Main, Padmanabhanagar, Bangalore-70 declare that my and my husband's name has been wrongly mentioned as Seetha & Srinias/ Srinivas in my husband's Death Certificate, I further state that my Correct name is RATHNA & My Husband's Correct name is S. SRINIVASA, Vide affidavit dated 12/01/2022 before Notary G. Dakshahini, Bangalore

I, KALPANA. K Spouse of No. JC-670047A, Rank: Ex-Nb Sub, Name: P. Manjunath, residing at #88 (West), 2nd main road, Varadarajaswamy Layout, Singapura, Vidyaranyapura, Bangalore- 560097 have changed my name from KALPANA. K to KALPANA. M vide affidavit dated 13/01/2022 before notary Meer Hassan., Bangalore.

ARATHI PAULIN MERY, W/o, 6493650W, HAV/MT, ANTHONI SAMY D, Door #20/458, South Kalam, Vill-Muthapudaiyanpatti, Kannudayanpatti, Manappari, Tiruchirappalli, Tamil Nadu, changed name from ARATHI PAULIN MERY to ARATHI PAULIN MARY A, 10/01/2022, Notary K.V. Mani, Bangalore

I, SIMYUYANMANASE residing at No.165, Flat.203, Mahalasha residency, 13th Main, HMT Layout, Vidyaranyapura, Bangalore-560097 have changed my name to SIMYUYAN MANASE RAJENDRA affidavit dated 12.01.2022 notary V.Anjanappa, Bangalore.

I, BHARATHI SHARAVANA KUMAR resident of No.19/1, 2nd Main Road, Munihanumaiah Colony, Lottegallahalli, Bangalore-560094 have changed my name to BHARATHI ESWARAN vide affidavit dated 12/01/2022 sworn before notary L.Veena, Bangalore

ANTHONI SAMY D, 6493650W, HAV/MT, Door #20/458, South Kalam, Vill-Muthapudaiyanpatti, Kannudayanpatti, Manappari, Tiruchirappalli, Tamil Nadu, changed Son's name REBIYAN JOSEWA to REBIYAN JOSHUA ANTHONISAMY, 10/01/2022, Notary K.V. Mani, Bangalore

I, PRAKRUTHI Ram, wife of Shri. Prathik Ram, aged about 26years, residing at #12/1, "Prarthana", 6th Cross, Shivanandanagar, Moodalapalya, Bengaluru-560072, have changed my name from Prakruthi Ranganath to Prakruthi Ram vide Affidavit dated 08-12-2021 sworn before Notary Shri. V.Rangaraju, Bengaluru.

Lost

LOST

Smt. RUPALI V.I. W/o. Venkatesh K.I. aged about 41 Years, residing at flat No. A902, Hoysala Ace Phase 1 Apts, Sahakarnagar, Bangalore have lost the original sale deeds dated 04-02-1985, and Sale Deed pertaining to property bearing No. 222, Visveswaraya Nagar, HMT Layout, Gangenahalli, Bangalore-560032, and further the said property belongs to Smt SHAMIM BEGUM registered in the office of the Sub-Registrar. Gandhinagar, Bangalore, registered as No.3179, Volume -3731, pages 192 to 199 and Second Sale Deed, dated 04-08-1987, registered as No 3351, Volume No.653, pages 81 to 88 pertaining to my previous vendor and owner, Sri BABU RAO, the original sale deeds were lost while travelling from my residence Sahakarnagar to Hebbal, dated 6-12-2021 and time of travel 10:30AM.
Anyone who finds the above two original sale deeds **Contact: Smt. RUPALI V.I. Mobile No. 9916687061**

PUBLIC NOTICE

PUBLIC NOTICE

Our client intends to enter into an agreement for joint development of all that piece and parcel of the property bearing Municipal Nos. 383/381/145/237/331 and 206/330 both situated in Whitefield Main Road, Whitefield, Ward No. 84, Whitefield, Bangalore morefully detailed in the Schedule below and hereinafter referred to as "Schedule Property", with M/s. Ezzy Whitefield, a partnership firm, having its registered office at Grace Orbit, 3rd Floor, No. 7/5, Clarke Road, Richards Town, Bangalore - 560 005. Any person or persons asserting any right, title, interest or claim in the Schedule Property or any part thereof, in any manner whatsoever or having any claim against the Schedule Property or the documents thereof or against the Owners or objecting to such transaction with our clients, should write to the undersigned within fifteen days from the date of issuance of this notice with all documentary proof on which they are basing and asserting their rights with regard to Schedule Property or any part thereof, after which period our clients shall proceed on the basis that there are no claims of whatsoever nature with regard to the Schedule Property.

SCHEDULE

All that piece and parcel of the land with residential properties known as "Roma Villa" bearing Municipal No.383/381/145/237/331 and "Cleome" bearing Municipal No. 206/330, both situated on Whitefield Main Road, Whitefield, Ward No. 84-Whitefiled, Bangalore together in all measuring about 25,299 square feet and bounded as follows :

East : Whitefield Main Road,
West : Inner Circle Road,
North : Private Property bearing Municipal No. 332; and
South : Whitefield Institute

R. SUNITHA
Advocate,
ASLF Law Offices, No. 34, 7th Cross, Vasanth Nagar, Cunningham Road, Bangalore - 560 052
Ph. No. 91-80-42423000

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

'ಅಲ್ಪಸಂಖ್ಯಾತ ನಿಗಮಕ್ಕೆ ₹ 300 ಕೋಟಿ ಮೀಸಲಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮಕ್ಕೆ 2022-23ರ ಬಜೆಟ್‌ನಲ್ಲಿ ₹ 300 ಕೋಟಿ ಅನುದಾನ ನೀಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಲಾಗುವುದು' ಎಂದು ನಿಗಮದ ಅಧ್ಯಕ್ಷ ಮುಖ್ತಾರ ಹುಸೇನ ಫಕ್ರುದ್ದೀನ್ ಪಠಾಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಕಳೆದ ಬಜೆಟ್‌ನಲ್ಲಿ ₹ 55 ಕೋಟಿ ಅನುದಾನ ನೀಡಲಾಗಿದ್ದು, ಶಿಕ್ಷಣ, ಅರಿವು ಸಾಲ ಯೋಜನೆ ಸೇರಿದಂತೆ ವಿವಿಧ ಯೋಜನೆಗಳಿಗೆ ಇನ್ನೂ ₹ 48 ಕೋಟಿ ಅನುದಾನದ ಅಗತ್ಯವಿದೆ' ಎಂದರು.

'ಪ್ರಸಕ್ತ ವರ್ಷದಲ್ಲಿ, ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸದ ಉದ್ದೇಶಕ್ಕೆ ಶೇ 4ರಷ್ಟು ಸಾಲ ಸೌಲಭ್ಯ, ವಸತಿ ನಿರ್ಮಾಣಕ್ಕೆ ₹ 5 ಲಕ್ಷ ಸಾಲ, ವ್ಯಾಪಾರ, ವಾಣಿಜ್ಯ ಕೈಗೊಳ್ಳುವ ಉದ್ದೇಶಗಳಿಗೆ ₹ 10 ಲಕ್ಷ ಒದಗಿಸುವ ಯೋಜನೆಯನ್ನು ಜಾರಿ ತರಲು ಉದ್ದೇಶಿಸಲಾಗಿದೆ' ಎಂದರು.

ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ನೀಡಲಾಗುವ 2021-22ನೇ ಸಾಲಿನ ಕಿತ್ತೂರು ರಾಣಿ ಚನ್ನಮ್ಮ ಜಿಲ್ಲಾ ಮಟ್ಟದ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

'ಕ್ರೀಡೆ, ಕಲೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರು ಹಾಗೂ ಸಂಸ್ಥೆಗಳಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. 18 ವರ್ಷ ಮೇಲ್ಪಟ್ಟವರು ಪ್ರಶಸ್ತಿಗೆ ಅರ್ಹರಾಗಿದ್ದಾರೆ. ಸಂಸ್ಥೆಗಳು ಸದರಿ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷ ಸೇವೆ ಸಲ್ಲಿಸಿರಬೇಕು' ಎಂದು ಪ್ರಕಟಣೆ ತಿಳಿಸಿದೆ.

ಅರ್ಹರು 'ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಡಾ.ಎಂ.ಎಚ್.ಮರಿಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಪಕ್ಕ, ಬೆಂಗಳೂರು-560029' ವಿಳಾಸಕ್ಕೆ ಇದೇ 14ರೊಳಗೆ ಭರ್ತಿ ಮಾಡಿದ ಅರ್ಜಿಗಳ ಮೂರು ಪ್ರತಿಯಲ್ಲಿ ಸಲ್ಲಿಸಬೇಕು.

ಹೊಸ ಯುವ ನೀತಿ ಬಜೆಟ್‌ನಲ್ಲಿ ಘೋಷಣೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಯುವನೀತಿಯನ್ನು ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆ. ಯುವ ಜನರ ಕ್ರಿಯಾಶೀಲತೆಗೆ ಉತ್ತೇಜನ ನೀಡುವ ಹಲವು ಯೋಜನೆಗಳು ಇದ್ದು, ಅವುಗಳನ್ನು ಮುಂಬರುವ ಬಜೆಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬುಧವಾರ ಸ್ವಾಮಿ ವಿವೇಕಾನಂದರ 159 ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ವರ್ಚುವಲ್ ಆಗಿ ಭಾಗವಹಿಸಿ ಮಾತನಾಡಿದರು.

ಯುವ ಜನರಿಗೆ ತತ್ವಾಧಾರಿತವಾದ ವೈಚಾರಿಕ ನೆಲೆಯಲ್ಲಿ ಹೆಚ್ಚಿನ ಬೆಂಬಲ, ಪ್ರೋತ್ಸಾಹ ನೀಡಲು ಸರ್ಕಾರ ಸಿದ್ಧವಿದೆ. ಇದಕ್ಕಾಗಿ ವಿಶೇಷ ಯೋಜನೆ ರೂಪಿಸುತ್ತಿದ್ದು, ಉನ್ನತ ಮಟ್ಟದಲ್ಲಿ ಸಮಾಲೋಚನೆಗಳು ನಡೆದಿವೆ. ಅವುಗಳನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗುವುದು ಎಂದರು.

'ವಿವೇಕಾನಂದರು ಯುಗ ಪುರುಷರಾಗಿದ್ದರು. ಅವರು ದೇಶದ ಯುವ ಸಮೂಹದ ಮೇಲೆ ಅಪಾರ ನಂಬಿಕೆ ಇಟ್ಟುಕೊಂಡಿದ್ದರು. ವಿವೇಕಾನಂದರ ಚಿಂತನೆಗಳಿಗೆ ತಕ್ಕಂತೆ ನಮ್ಮ ಸರ್ಕಾರವು ಯುವಜನರ ಭವಿಷ್ಯವನ್ನು ರೂಪಿಸಲಿದೆ. ಸ್ವತಃ ನಾನು ವಿವೇಕಾನಂದರ ವಿಚಾರಗಳ ವಿದ್ಯಾರ್ಥಿಯಾಗಿದ್ದೇನೆ. ಅವರದು ಕಾಲ ಮತ್ತು ದೇಶಗಳನ್ನು ಮೀರಿದ ಚಿಂತನೆಗಳಾಗಿದ್ದವು. ಪ್ರತಿದಿನವೂ ಅವರು ಹೊಸ ಹಾದಿಯಲ್ಲಿ ಮುನ್ನಡೆಯುತ್ತಿದ್ದರು. ಮನುಷ್ಯ ಭೌತಿಕವಾಗಿ ಕಣ್ಮರೆಯಾದರೂ ಚಿರಂತನವಾಗಿ ಹೇಗೆ ಬದುಕಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ' ಎಂದು ಬೊಮ್ಮಾಯಿ ಹೇಳಿದರು.

ವಿವೇಕಾನಂದರಿಗೆ ರಾಮಕೃಷ್ಣ ಪರಮಹಂಸರು ಅನುಭಾವಿ ಗುರುವಾಗಿ ಸಿಕ್ಕಿದರು. ತಮ್ಮ ಶಿಷ್ಯನಿಗೆ ಪರಮಹಂಸರು ಒಳ್ಳೆಯ ಹೆಸರನ್ನೇ ಇಟ್ಟರು. ಎಲ್ಲೆಲ್ಲಿ ವಿವೇಕ ಇರುತ್ತದೆಯೋ ಅಲ್ಲೆಲ್ಲ ಆನಂದವಿರುತ್ತದೆ. ಇದು ವಿವೇಕಾನಂದರಿಗೆ ಅನ್ವರ್ಥವಾಗುತ್ತದೆ ಎಂದು ಅವರು ವ್ಯಾಖ್ಯಾನಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಮಾತನಾಡಿ, ರಾಜ್ಯವು ಇಂದು ಗುಣಮಟ್ಟದ ಶಿಕ್ಷಣ ಮತ್ತು ಉದ್ಯಮಶೀಲತೆಗೆ ಹೆಸರಾಗಿದ್ದು, ವಿವೇಕಾನಂದರ ಆಶಯದಂತೆ ಜಾಗತಿಕ ನಾಯಕತ್ವವನ್ನು ಸೃಷ್ಟಿಸುತ್ತಿದೆ. ಅಕ್ಷರ ಕಲಿಕೆಯಷ್ಟೇ ಶಿಕ್ಷಣವಲ್ಲ. ವಿದ್ಯೆಯಲ್ಲಿ ಆಧ್ಯಾತ್ಮಿಕ, ನೈತಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಆಯಾಮಗಳು ಇರಬೇಕು ಎಂದೂ ಅಭಿಪ್ರಾಯಪಟ್ಟರು.

ಬೆಂಗಳೂರಿನ ರಾಮಕೃಷ್ಣ ಮಠದ ಸ್ವಾಮಿ ತದ್ಯುಕ್ತಾನಂದ ಮಹಾರಾಜ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕ್ರೀಡಾ ಮತ್ತು ಯುವ ಜನ ಸಬಲೀಕರಣ ಸಚಿವ ನಾರಾಯಣಗೌಡ ಮತ್ತು ಹಿರಿಯ ಅಧಿಕಾರಿಗಳು, ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಯುವಜನರಿಗಾಗಿ ಇರುವ ವಿವಿಧ ಯೋಜನೆಗಳ ಕುರಿತ ಸಮಗ್ರ ಮಾಹಿತಿ ಒಳಗೊಂಡ 'ಯುವಜನ ಕಣಜ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.



ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ನಡೆದ ಸ್ವಾಮಿ ವಿವೇಕಾನಂದರ 159 ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪುಷ್ಪಾರ್ಚನೆ ಸಲ್ಲಿಸಿದರು. ಸಚಿವರಾದ ನಾರಾಯಣಗೌಡ ಮತ್ತು ಡಾ.ಸಿ.ಎನ್.ಅಶ್ವತ್ಥನಾರಾಯಣ ಇದ್ದರು

ಕೋವಿಡ್: ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವಂತೆ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳಿಗೆ ಬಿಬಿಎಂಪಿ ಸಲಹೆ

‘3ಕ್ಕಿಂತ ಹೆಚ್ಚು ಪ್ರಕರಣ, ಕಂಟೈನ್‌ಮೆಂಟ್ ವಲಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಮೂರಕ್ಕಿಂತ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾದರೆ ಏಳು ದಿನಗಳ ಕಾಲ ಆಯಾ ಸೀಮಿತ ಪ್ರದೇಶವನ್ನು ಕಂಟೈನ್‌ಮೆಂಟ್ ವಲಯವನ್ನಾಗಿ ಘೋಷಿಸಲಾಗುವುದು ಎಂದು ಬಿಬಿಎಂಪಿ ತಿಳಿಸಿದೆ.

ನಗರದಲ್ಲಿ ಕಳೆದ ಹತ್ತು ದಿನಗಳಿಂದ ನಿರಂತರವಾಗಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಈ ನಿಯಂತ್ರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಮುಖ್ಯ ಆಯುಕ್ತ ಗೌರವ ಗುಪ್ತ ತಿಳಿಸಿದ್ದಾರೆ.

ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳಿಗೆ (ಆರ್‌ಡಬ್ಲ್ಯುಎ) ಮತ್ತು ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ವಸತಿ ಸೊಸೈಟಿಗಳಿಗೆ ಈ ಬಗ್ಗೆ ಹಲವು ಸಲಹೆಗಳನ್ನು ಸುತ್ತೋಲೆಯಲ್ಲಿ ಅವರು ನೀಡಿದ್ದಾರೆ.

ಮೂರಕ್ಕಿಂತ ಹೆಚ್ಚು ಸೋಂಕು ಪ್ರಕರಣಗಳು ವರದಿಯಾಗುವ 100 ಮೀಟರ್ ಸುತ್ತಮುತ್ತಲಿನ ಪ್ರದೇಶ ಅಥವಾ ಆಯಾ ಮಹಡಿಯ ಮೇಲಿನ ಮತ್ತು ಕೆಳಗಿನ ಪ್ರದೇಶಗಳು ಅಥವಾ ಸಂಪೂರ್ಣ ಬ್ಲಾಕ್ ಅಥವಾ ಸಣ್ಣ ಅಪಾರ್ಟ್‌ಮೆಂಟ್ ಸಮುಚ್ಚಯಗಳನ್ನು ಕಂಟೈನ್‌ಮೆಂಟ್ ವಲಯವನ್ನಾಗಿ ಘೋಷಿಸಲಾಗುವುದು ಎಂದು ಆರ್‌ಡಬ್ಲ್ಯುಎಗಳಿಗೆ ತಿಳಿಸಲಾಗಿದೆ.

ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಿದರೆ ಅಲ್ಲಿನ ಎಲ್ಲ ನಿವಾಸಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುವುದು. ವಿವರವಾದ ಸಂಪರ್ಕಿತರ ಪತ್ತೆಗೆ ಕ್ರಮ ಕೈಗೊಳ್ಳಲಾಗುವುದು. ಎಲ್ಲ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರು ಪರೀಕ್ಷೆಗೆ ಒಳಗಾಗುವುದು ಉತ್ತಮ. ಸೋಂಕು ಲಕ್ಷಣಗಳಿದ್ದರೆ ಕಡ್ಡಾಯವಾಗಿ ಪರೀಕ್ಷೆ ಮಾಡಿಸಿಕೊಳ್ಳ ಬೇಕು. ಪರೀಕ್ಷೆಯ ಫಲಿತಾಂಶ ಬರುವವರೆಗೂ ಎಲ್ಲ ಸಂಪರ್ಕಿತರು ಪ್ರತ್ಯೇಕವಾಗಿ ವಾಸಿಸಬೇಕು ಎಂದು ಸೂಚಿಸಲಾಗಿದೆ. ಸೋಂಕಿತ ವ್ಯಕ್ತಿ ವಾಸಿಸುವ ಸ್ಥಳದಲ್ಲಿ ಕ್ವಾರಂಟೈನ್ ಪೋಸ್ಟರ್‌ಗಳನ್ನು ಆರೋಗ್ಯ ಅಧಿಕಾರಿಗಳು ಅಂಟಿಸುತ್ತಾರೆ. ಸೋಂಕಿನ ಲಕ್ಷಣಗಳಿರುವ ವ್ಯಕ್ತಿಯ ಬಗ್ಗೆ ಅಥವಾ ಸೋಂಕು ದೃಢಪಟ್ಟ ವ್ಯಕ್ತಿಯ ಜತೆ ಸಂಪರ್ಕಕ್ಕೆ ಬಂದ ವ್ಯಕ್ತಿಗಳ ಬಗ್ಗೆ ನಿವಾಸಿ ಕ್ಷೇಮಾಭಿವೃದ್ಧಿ ಸಂಘವು ವಲಯ ಆರೋಗ್ಯ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಬೇಕು ಎಂದು ಕೋರಲಾಗಿದೆ.

ಯಾವುದೇ ನಿವಾಸಿ ಅಥವಾ ಕುಟುಂಬದ ಸದಸ್ಯರು ಅಂತರರಾಷ್ಟ್ರೀಯ ಪ್ರವಾಸ ಕೈಗೊಂಡಿದ್ದರೆ ಅಥವಾ ಕೇರಳ, ಮಹಾರಾಷ್ಟ್ರ, ಗೋವಾಕ್ಕೆ ತೆರಳಿದ್ದರೆ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಬೇಕು. ಕೊರಿಯರ್ ಸೇರಿದಂತೆ ವಿವಿಧ ಸೇವೆಗಳನ್ನು ಒದಗಿಸುವವರು ಮುಖ್ಯ ಗೇಟ್ ಬಳಿಯೇ ಸಂಬಂಧಪಟ್ಟವರಿಗೆ ಉತ್ಪನ್ನಗಳನ್ನು ವಿತರಿಸುವುದು ಉತ್ತಮ. 60 ವರ್ಷ ಮೇಲ್ಪಟ್ಟ ಎಲ್ಲ ವ್ಯಕ್ತಿಗಳು ಹಾಗೂ ವಿವಿಧ ಕಾಯಿಲೆಗಳಿಂದ ಬಳಲುತ್ತಿರುವವರ ಆರೋಗ್ಯದ ಮೇಲೆ ನಿಗಾವಹಿಸಬೇಕು. ಸೋಂಕಿತ ವ್ಯಕ್ತಿಗೆ ದೂರವಾಣಿ, ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಿಸುವ ಮೂಲಕ ಆತ್ಮಸ್ಥೈರ್ಯ ತುಂಬಬೇಕು ಎಂದು ಸಲಹೆ ನೀಡಲಾಗಿದೆ.

ನಿವಾಸಿಗಳಿಗೆ ಸಲಹೆಗಳು

- ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಎಲ್ಲರೂ ಸಾಮಾನ್ಯವಾಗಿ ಉಪಯೋಗಿಸುವ ರೈಲಿಂಗ್ಸ್ ಮುಂತಾದ ಸ್ಥಳಗಳನ್ನು ಸೋಡಿಯಂ ಹೈಪೊಕ್ಲೋರೈಟ್, ಬ್ಲೀಚಿಂಗ್ ಪುಡಿ ಅಥವಾ ಇತರ ಯಾವುದಾದರೂ ಪರಿಣಾಮಕಾರಿ ಸೋಂಕು ನಿವಾರಕಗಳಿಂದ ಸ್ವಚ್ಛಗೊಳಿಸಬೇಕು. ಈ ಮೂಲಕ ನೈರ್ಮಲ್ಯ ಕಾಪಾಡಿಕೊಳ್ಳಬೇಕು.
- ಉದ್ಯಾನಗಳಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಈ ಸ್ಥಳಗಳಲ್ಲಿ ಸಭೆಗಳನ್ನು ನಡೆಸಲು ಬಳಸಬಾರದು.
- ಲಸಿಕೆ ಪಡೆಯುವಂತೆ ಮತ್ತು ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುವಂತೆ ಅರಿವು ಮೂಡಿಸಲು ನಿವಾಸಿಗಳ ಕ್ಷೇಮಾಭಿವೃದ್ಧಿಗಳ ಸಂಘಗಳು ವಾಟ್ಸ್‌ಆ್ಯಪ್, ಟೆಲಿಗ್ರಾಂ ಮುಂತಾದವುಗಳನ್ನು ಬಳಸಿಕೊಳ್ಳಬೇಕು. ಬಿಬಿಎಂಪಿ ಹಂಚಿಕೊಳ್ಳುವ ಅಧಿಕೃತ ಮಾಹಿತಿಯನ್ನು ಮಾತ್ರ ನೀಡಬೇಕು.
- ಜಿಮ್, ಕ್ರೀಡಾ ಸೌಲಭ್ಯಗಳು, ಈಜುಕೊಳ ಬಳಕೆ ತಪ್ಪಿಸಬೇಕು.
- ಬಯಲು ಮತ್ತು ಆಟವಾಡುವ ಸ್ಥಳಗಳಲ್ಲಿ ಮಕ್ಕಳು ಮಾಸ್ಕ್ ಧರಿಸುವಂತೆ ಪೋಷಕರು ಮತ್ತು ಸಂಘದ ಸದಸ್ಯರು ಎಚ್ಚರವಹಿಸಬೇಕು.
- ಕ್ಲಬ್ ಹೌಸ್ ಅಥವಾ ಸಭಾಂಗಣಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವುದನ್ನು ತಪ್ಪಿಸಬೇಕು. ಅನಿವಾರ್ಯವಾಗಿ ನಡೆದರೂ 50 ಸದಸ್ಯರನ್ನು ಮೀರಬಾರದು.
- ಲಿಫ್ಟ್‌ಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಬೇಕು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

13,53,331 ಒಟ್ಟು ಸೋಂಕಿತರು (13,34,957 ನಿನ್ನೆಯ ವಿವರ)

90,893	12,46,001	16,436
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	18,374 ▲
ಗುಣಮುಖ	1,132 ▲
ಸಾವು	03 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕಂಟೈನ್‌ಮೆಂಟ್ ವಲಯಕ್ಕೆ ಪರಿಗಣಿಸುವ ಅಂಶಗಳು



- ಮಹಡಿಯಲ್ಲಿ ಒಂದು ಪ್ರಕರಣ ಪತ್ತೆಯಾದರೆ ಆಯಾ ಮನೆ ಹಾಗೂ ಮಹಡಿಯೊಂದರಲ್ಲಿ ಮೂರು ಪ್ರಕರಣಗಳು ವರದಿಯಾದರೆ ಇಡೀ ಮಹಡಿಯನ್ನು ಕಂಟೈನ್‌ಮೆಂಟ್ ವಲಯವನ್ನಾಗಿ ಘೋಷಿಸಲಾಗುವುದು.
- ಒಂದು ಕಟ್ಟಡದಲ್ಲಿ 10 ಪ್ರಕರಣಗಳು ವರದಿಯಾದರೆ ಆ ಒಂದು ಮಹಡಿ ಅಥವಾ ವಿವಿಧ ಮಹಡಿಗಳು ಅಥವಾ ಇಡೀ ಕಟ್ಟಡವನ್ನು ಕಂಟೈನ್‌ಮೆಂಟ್ ವಲಯವನ್ನಾಗಿ ಘೋಷಿಸಲಾಗುವುದು.
- 50ರಿಂದ 100 ಮನೆಗಳಿರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ 50 ಪ್ರಕರಣಗಳು ವರದಿಯಾದರೆ ಅಥವಾ 100ಕ್ಕೂ ಹೆಚ್ಚು ಮನೆಗಳಿರುವ ಕಟ್ಟಡದಲ್ಲಿ 100 ಪ್ರಕರಣಗಳು ವರದಿಯಾದರೆ ಕಂಟೈನ್‌ಮೆಂಟ್ ವಲಯಕ್ಕೆ ಪರಿಗಣಿಸಲಾಗುವುದು.

ವಾರಾಂತ್ಯ ಕರ್ಫ್ಯೂಗೆ ವಿರೋಧ

ಬೆಂಗಳೂರು: ವಾರಾಂತ್ಯ ಕರ್ಫ್ಯೂ ರದ್ದುಪಡಿಸುವಂತೆ ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

‘ಶೀಘ್ರ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿಯಾಗಿ ವಾರಾಂತ್ಯ ಕರ್ಫ್ಯೂ ರದ್ದುಪಡಿಸುವಂತೆ ಕೋರುತ್ತೇವೆ. ಸರ್ಕಾರ ಯಾವುದೇ ರೀತಿ ಕ್ರಮಕೈಗೊಳ್ಳದಿದ್ದರೆ ಮುಂದಿನ ವಾರದಿಂದ ಹೋಟೆಲ್‌ಗಳ ಹೊರಗೆ ವಹಿವಾಟು ನಡೆಸುವುದು ಅನಿವಾರ್ಯವಾಗುತ್ತದೆ’ ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಗುರುವಾರ ತಿಳಿಸಿದರು.

‘ಈಗಾಗಲೇ ಹೋಟೆಲ್ ಉದ್ಯಮ ತೀವ್ರ ಸಂಕಷ್ಟದ ಸ್ಥಿತಿಯಲ್ಲಿದೆ. ಆದರೆ, ಸರ್ಕಾರ ನಮ್ಮ ಸಂಕಷ್ಟಕ್ಕೆ ಸ್ಪಂದಿಸುವ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಅವೈಜ್ಞಾನಿಕ ನಿಯಮಗಳನ್ನು ಜಾರಿಗೊಳಿಸುತ್ತಿದೆ. ಹೀಗಾಗಿ, ಸರ್ಕಾರಕ್ಕೆ ಒಂದು ವಾರ ಗಡುವು ನೀಡುತ್ತಿದ್ದೇವೆ. ಇದೇ ಶನಿವಾರ ಮತ್ತು ಭಾನುವಾರ ಕರ್ಫ್ಯೂ ನಿಯಮಗಳನ್ನು ಪಾಲಿಸಲಾಗುವುದು’ ಎಂದು ತಿಳಿಸಿದರು.

‘ಎಲ್ಲ ಹೋಟೆಲ್ ಮಾಲೀಕರ ಜತೆ ಗುರುವಾರ ಸಭೆ ಮಾಡಿದ್ದೇವೆ. ವಾರಾಂತ್ಯದ ಕರ್ಫ್ಯೂ ವಿರುದ್ಧ ಕಾನೂನು ಹೋರಾಟ ಮಾಡುವ ಬಗ್ಗೆಯೂ ಚಿಂತನೆ ಮಾಡಲಾಗಿದೆ. ಬೀದಿ ವ್ಯಾಪಾರಿಗಳಿಗೆ ಅವಕಾಶ ನೀಡಿರುವುದರಿಂದ ನಾವು ಸಹ ಹೋಟೆಲ್ ಹೊರಗೆ ವಹಿವಾಟು ನಡೆಸುತ್ತೇವೆ’ ಎಂದು ಹೇಳಿದರು.

‘ಸರ್ಕಾರಕ್ಕೆ ಲೈಸನ್ಸ್ ಶುಲ್ಕ ಮತ್ತು ತೆರಿಗೆಯನ್ನು ನಿರಂತರವಾಗಿ ಪಾವತಿಸಬೇಕು. ಆದರೆ, ಹೋಟೆಲ್ ಉದ್ಯಮದ ಬಗ್ಗೆ ಸರ್ಕಾರ ಈಗಲಾದರೂ ಕಾಳಜಿ ತೋರದಿದ್ದರೆ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ’ ಎಂದು ತಿಳಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ವರ್ಲ್ಡೋಮೀಟರ್, ಕೋವಿಡ್19 ಇಂಡಿಯಾ

	ವಿಶ್ವ	ಭಾರತ
ಒಟ್ಟು ಪ್ರಕರಣ	31.85 ಕೋಟಿ	3.63 ಕೋಟಿ
ಸಕ್ರಿಯ ಪ್ರಕರಣ	4.95 ಕೋಟಿ	11.17 ಲಕ್ಷ
ಗುಣಮುಖ	26.34 ಕೋಟಿ	3.47 ಕೋಟಿ
ಸಾವು	55.34 ಲಕ್ಷ	4.85 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	32.38 ಲಕ್ಷ	2.47 ಲಕ್ಷ
ಗುಣಮುಖ	10.83 ಲಕ್ಷ	84,825
ಸಾವು	8,425	380

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 8.29 ಲಕ್ಷ ಅಮೆರಿಕ; 3.61 ಲಕ್ಷ ಫ್ರಾನ್ಸ್; 1.29 ಲಕ್ಷ ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು: 2.06 ಕೋಟಿ ಅಮೆರಿಕ; 40.45 ಲಕ್ಷ ಫ್ರಾನ್ಸ್; 36.73 ಲಕ್ಷ ಬ್ರಿಟನ್

ಎಲ್ಲಿ ಹೆಚ್ಚು ಸಾವು (ಒಟ್ಟು): 1.41 ಲಕ್ಷ ಮಹಾರಾಷ್ಟ್ರ; 50,252 ಕೇರಳ; 36,905 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 70.34 ಮಹಾರಾಷ್ಟ್ರ; 51.13 ಕೇರಳ; 28.47 ತಮಿಳುನಾಡು

ಭಾರತದ ಕೋವಿಡ್ ಸಂಖ್ಯೆ ವಿವರ: ಗುರುವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಸುದ್ದಿ 2 ನಿಮಿಷ

ರೋಲರ್ ಸ್ಕೇಟಿಂಗ್‌ನಲ್ಲಿ ಸಾಧನೆ

ಯಲಹಂಕ: ಭಾರತೀಯ ರೋಲರ್ ಸ್ಕೇಟಿಂಗ್ ಸಂಸ್ಥೆಯು ನವದೆಹಲಿಯಲ್ಲಿ ಆಯೋಜಿಸಿದ್ದ 59ನೇ ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದ ನಾರಾಯಣ ಇ-ಟೆಕ್ನೊ ಶಾಲೆಯ 3ನೇ ತರಗತಿ ವಿದ್ಯಾರ್ಥಿ ಎಸ್. ಸೂರಜ್ ಅವರು 3 ಚಿನ್ನದ ಪದಕ ಗೆದ್ದಿದ್ದಾರೆ.

200 ಮತ್ತು 500 ಮೀಟರ್ ರಿಂಕ್ ರೇಸ್ ಹಾಗೂ 1-ಲ್ಯಾಪ್ ರೋಡ್ ರೇಸ್ ವಿಭಾಗದಲ್ಲಿ ಸೂರಜ್ ಈ ಸಾಧನೆ ಮಾಡಿದ್ದಾರೆ. ಕಳೆದ ನವೆಂಬರ್‌ನಲ್ಲಿ ನಡೆದಿದ್ದ 22ನೇ ಜಿಲ್ಲಾಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಬೆಂಗಳೂರು ಜಿಲ್ಲೆ ಪ್ರತಿನಿಧಿಸಿ 3 ಚಿನ್ನದ ಪದಕ ಗೆಲ್ಲುವ ಮೂಲಕ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದರು.

ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆ ಆಯೋಜಿಸಿದ್ದ 37ನೇ ರಾಜ್ಯಮಟ್ಟದ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ 1 ಚಿನ್ನ ಮತ್ತು 2 ಬೆಳ್ಳಿ ಪದಕ ಗೆದ್ದು ರಾಷ್ಟ್ರ-ಮಟ್ಟಕ್ಕೆ ಅರ್ಹತೆ ಪಡೆದಿದ್ದರು.



ಯಲಹಂಕ ಉಪನಗರದ ಶರತ್ ಮತ್ತು ಸವಿತಾ ದಂಪತಿಯ ಮಗ ಸೂರಜ್, ಜೂನ್ 2018ರಲ್ಲಿ ಯಲಹಂಕದ ಬೃಂದಾವನ ರೋಲರ್ ಸ್ಕೇಟಿಂಗ್ ಕ್ಲಬ್‌ನಲ್ಲಿ ತರಬೇತಿ ಆರಂಭಿಸಿದ್ದರು. ತರಬೇತುದಾರ ನಾಗೇಶ್ ಮತ್ತು ಮಧುಚಂದ್ರ ಅವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುತ್ತಿದ್ದಾರೆ.

ನೈಸ್ ರಸ್ತೆ: ರಾತ್ರಿ ವೇಳೆ ದ್ವಿಚಕ್ರ ವಾಹನಗಳ ಸಂಚಾರಕ್ಕೆ ನಿರ್ಬಂಧ

ಬೆಂಗಳೂರು: ನೈಸ್ ರಸ್ತೆಯಲ್ಲಿ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 5 ಗಂಟೆವರೆಗೆ ದ್ವಿಚಕ್ರ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದ್ದು, ಈ ಬಗ್ಗೆ ನೈಸ್ ಎಂಟರ್‌ಪ್ರೈಸಸ್ ಪತ್ರಿಕಾ ಪ್ರಕಟಣೆ ಹೊರಡಿಸಿದೆ.

‘ನೈಸ್ ರಸ್ತೆಯಲ್ಲಿ ಇತ್ತೀಚಿನ ದಿನಗಳಲ್ಲಿ ಅಪಘಾತಗಳು ಹೆಚ್ಚುತ್ತಿದ್ದು, ನಿರ್ಲಕ್ಷ್ಯ ವಹಿಸುತ್ತಿರುವ ಆಡಳಿತ ಮಂಡಳಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ’ ಎಂಬುದಾಗಿ ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಅವರು ಪೊಲೀಸರಿಗೆ ಸೂಚನೆ ನೀಡಿದ್ದರು. ನೈಸ್ ಆಡಳಿತ ಮಂಡಳಿಗೂ ಎಚ್ಚರಿಕೆ ರವಾನಿಸಿದ್ದರು.

‘ಇದರಿಂದ ಎಚ್ಚೆತ್ತ ಆಡಳಿತ ಮಂಡಳಿ, ಅಪಘಾತಗಳಿಗೆ ಕಾರಣ ಎನ್ನಲಾದ ದ್ವಿಚಕ್ರ ವಾಹನಗಳ ರಾತ್ರಿ ಸಂಚಾರಕ್ಕೆ ಜ. 16ರಿಂದ ನಿರ್ಬಂಧ ವಿಧಿಸಲು ಮುಂದಾಗಿದೆ.

‘ಜಂಟಿ ಕಮಿಷನರ್ ಅವರ ಸೂಚನೆಯಂತೆ ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 5 ಗಂಟೆವರೆಗೆ ದ್ವಿಚಕ್ರ ವಾಹನಗಳ ರಾತ್ರಿ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ’ ಎಂದು ಆಡಳಿತ ಮಂಡಳಿಯು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

31,24,524 ಒಟ್ಟು ಸೋಂಕಿತರು (30,99,519 ನಿನ್ನೆಯ ವಿವರ)

1,15,733 ಸಕ್ರಿಯ ಪ್ರಕರಣಗಳು

29,70,365 ಗುಣಮುಖರಾದವರು

38,397 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	25,005 ▲
ಗುಣಮುಖ	2,363 ▲
ಸಾವು	08 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಡೆಲ್ಟಾ ಅಲೆ: 2.40 ಲಕ್ಷ ಮಂದಿ ಸಾವು’

ವಿಶ್ವಸಂಸ್ಥೆ (ಪಿಟಿಐ): ಭಾರತದಲ್ಲಿ ಕೊರೊನಾ ವೈರಸ್‌ನ ಡೆಲ್ಟಾ ತಳಿಯಿಂದಾಗಿ ಕಾಣಿಸಿಕೊಂಡಿದ್ದ ಕೋವಿಡ್–19 ಪಿಡುಗಿನಿಂದ ಕಳೆದ ವರ್ಷ ಏಪ್ರಿಲ್‌ನಿಂದ ಜೂನ್ ವರೆಗಿನ ಅವಧಿಯಲ್ಲಿ 2.40 ಲಕ್ಷ ಜನರು ಸಾವಿಗೀಡಾಗಿದ್ದರು ಎಂದು ವಿಶ್ವಸಂಸ್ಥೆ ಗುರುವಾರ ಹೇಳಿದೆ.

ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ‘ವಿಶ್ವ ಆರ್ಥಿಕ ಸ್ಥಿತಿ ಹಾಗೂ ಮುನ್ನೋಟ’ ಎಂಬ ವರದಿಯಲ್ಲಿ ಈ ವಿಷಯ ಪ್ರಸ್ತಾಪಿಸಲಾಗಿದೆ.

ಡೆಲ್ಟಾ ತಳಿಯ ಅಲೆಯು ಭಾರತದ ಆರ್ಥಿಕತೆ ಪುನಶ್ಚೇತನಕ್ಕೆ ಅಡ್ಡಿಯುಂಟು ಮಾಡಿತ್ತು. ಬರುವ ದಿನಗಳಲ್ಲಿ ಮತ್ತೆ ಅಂತಹ ಸನ್ನಿವೇಶ ನಿರ್ಮಾಣವಾಗುವ ಸಾಧ್ಯತೆಗಳಿವೆ ಎಂದೂ ಎಚ್ಚರಿಸಿದೆ.

ನಕಲಿ ಅಂಕಪಟ್ಟಿ: ‘ವಿದ್ಯಾ ಭಾರತಿ’ ಮೇಲೆ ದಾಳಿ

ಬೆಂಗಳೂರು: ನಕಲಿ ಅಂಕಪಟ್ಟಿ ಸೃಷ್ಟಿಸಿ ಮಾರಾಟ ಮಾಡುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ಈ ಸಂಬಂಧ ಆರೋಪಿ ಚಂದನ್‌ಕುಮಾರ್ ಎಂಬಾತನನ್ನು ಬಂಧಿಸಿದ್ದಾರೆ.

‘ವಿದ್ಯಾಭಾರತಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಟೆಕ್ನಾಲಜಿ’ ಹೆಸರಿನಲ್ಲಿ ನಕಲಿ ಸಂಸ್ಥೆ ತೆರೆದಿದ್ದ ಆರೋಪಿಗಳು, ಅಂಕಪಟ್ಟಿ ಸೃಷ್ಟಿಸಿ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಎಂ.ಜಿ. ರಸ್ತೆಯಲ್ಲಿರುವ ಸಂಸ್ಥೆ ಕಚೇರಿ ಮೇಲೆ ದಾಳಿ ಮಾಡಲಾಯಿತು’ ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಸಂಸ್ಥೆಯ ಬೆಂಗಳೂರು ಕಚೇರಿ ವ್ಯವಸ್ಥಾಪಕನಾಗಿದ್ದ ಬಿಹಾರದ ಚಂದನ್‌ಕುಮಾರ್‌ನನ್ನು ಬಂಧಿಸಲಾಗಿದೆ. ಸಂಸ್ಥೆಯ ಕಚೇರಿಯಲ್ಲಿದ್ದ 54 ನಕಲಿ ಅಂಕಪಟ್ಟಿ, ಪ್ರಮಾಣ ಪತ್ರಗಳು, ಲ್ಯಾಪ್‌ಟಾಪ್ ಹಾಗೂ 3 ಮೊಬೈಲ್‌ಗಳನ್ನು ದಾಳಿ ವೇಳೆ ಜಪ್ತಿ ಮಾಡಲಾಗಿದೆ’ ಎಂದರು.

ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ ಅಂಕಪಟ್ಟಿ: ‘ಕಚೇರಿಯಲ್ಲೇ ಕಾಲ್ ಸೆಂಟರ್ ತೆರೆದಿದ್ದ ಆರೋಪಿಗಳು, ಅದಕ್ಕಾಗಿ ಪ್ರತ್ಯೇಕ ಉದ್ಯೋಗಿಗಳನ್ನು ನೇಮಿಸಿಕೊಂಡಿದ್ದರು. ‘ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಪದವಿ ಶಿಕ್ಷಣ ಪೂರೈಸಲು ಸಹಾಯ ಮಾಡುತ್ತೇವೆ’ ಎಂಬುದಾಗಿ ಸಂಸ್ಥೆಯಿಂದ ಜಾಹೀರಾತು ನೀಡಲಾಗುತ್ತಿತ್ತು’ ಎಂದು ಅಧಿಕಾರಿ ಹೇಳಿದರು.

‘ಜಾಹೀರಾತು ನಂಬಿದ್ದ ಅಭ್ಯರ್ಥಿಗಳು, ಸಂಸ್ಥೆಯ ಕಾಲ್ ಸೆಂಟರ್‌ಗೆ ಕರೆ ಮಾಡುತ್ತಿದ್ದರು. ಅಭ್ಯರ್ಥಿಗಳ ವಿವರ ಸಂಗ್ರಹಿಸುತ್ತಿದ್ದ ಉದ್ಯೋಗಿಗಳು, ‘ತರಗತಿಗೆ ಹೋಗದಿದ್ದರೂ ಅಂಕಪಟ್ಟಿ ನೀಡಲಾಗುವುದು. ಅದಕ್ಕೆ ಕೆಲ ಶುಲ್ಕ ಪಾವತಿಸಬೇಕು’ ಎನ್ನುತ್ತಿದ್ದರು.

‘ಅಂಕಪಟ್ಟಿ ಸಿಗಬಹುದೆಂದು ಅಭ್ಯರ್ಥಿಗಳು, ₹20 ಸಾವಿರದಿಂದ ₹60 ಸಾವಿರದವರೆಗೆ ಹಣ ಪಾವತಿಸುತ್ತಿದ್ದರು. ಸಂಸ್ಥೆಯಿಂದ ನಕಲಿ ಅಂಕಪಟ್ಟಿಗಳನ್ನು ಅಭ್ಯರ್ಥಿಗಳಿಗೆ ನೀಡಲಾಗುತ್ತಿತ್ತು. ಅದೇ ಅಂಕಪಟ್ಟಿ ಬಳಸಿ ಕೆಲವರು, ಖಾಸಗಿ ಕಂಪನಿಯಲ್ಲಿ ಕೆಲಸ ಪಡೆದುಕೊಂಡಿರುವ ಮಾಹಿತಿಯೂ ಇದೆ’ ಎಂದರು.

‘ಎಸ್ಸೆಸ್ಸೆಲ್ಸಿ, ಪಿಯುಸಿ, ಸ್ನಾತಕ, ಸ್ನಾತಕೋತ್ತರ ಪದವಿ ಹಾಗೂ ಎಂಜಿನಿಯರಿಂಗ್ ಪದವಿ ನಕಲಿ ಅಂಕಪಟ್ಟಿಗಳು ಕಚೇರಿಯಲ್ಲಿ ಸಿಕ್ಕಿವೆ. ಕೆಲ ಆರೋಪಿಗಳು ಪರಾರಿಯಾಗಿದ್ದಾರೆ. ಕೃತ್ಯದ ಬಗ್ಗೆ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದ್ದು, ತನಿಖೆ ಮುಂದುವರಿದಿದೆ’ ಎಂದೂ ಸಿಸಿಬಿ ಅಧಿಕಾರಿ ತಿಳಿಸಿದರು.

ಡ್ರಗ್ಸ್ ಸಾಗಣೆ; ನೈಜೀರಿಯಾ ಪ್ರಜೆ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಸಾಗಿಸುತ್ತಿದ್ದ ನೈಜೀರಿಯಾ ಪ್ರಜೆಯನ್ನು ಪೊಲೀಸರು ಬಂಧಿಸಿದ್ದಾರೆ.

‘ಜೋಹಾಚಿನ್ ಒನೇಬುಚಿ (43) ಬಂಧಿತ. ಆತನಿಂದ ₹ 9 ಲಕ್ಷ ಮೌಲ್ಯದ ಕೊಕೇನ್ ಹಾಗೂ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ತನ್ನದೇ ದೇಶದ ಪ್ರಜೆಗಳಿಂದ ಡ್ರಗ್ಸ್ ಖರೀದಿಸುತ್ತಿದ್ದ ಆರೋಪಿ, ಅದನ್ನು ನಗರದ ಹಲವು ಮಧ್ಯವರ್ತಿಗಳಿಗೆ ಪೂರೈಸುತ್ತಿದ್ದ. ಪರಿಚಯಸ್ಥ ಗ್ರಾಹಕರಿಗೂ ಮಾರಾಟ ಮಾಡುತ್ತಿದ್ದ.’

‘ಬ್ಯಾಗ್‌ನಲ್ಲಿ ಡ್ರಗ್ಸ್ ತುಂಬಿಕೊಂಡಿದ್ದ ಆರೋಪಿ, ಎಚ್‌ಬಿಆರ್ ಲೇಔಟ್ ಬಳಿ ಕಾಣಿಸಿಕೊಂಡಿದ್ದ. ಆತನ ನಡೆಯಿಂದ ಅನುಮಾನಗೊಂಡ ಸ್ಥಳೀಯರೊಬ್ಬರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋದ ಸಿಬ್ಬಂದಿ, ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಡ್ರಗ್ಸ್ ಸಾಗಣೆ ಪತ್ತೆಯಾಯಿತು’ ಎಂದರು.

‘ವೀಸಾ ಅವಧಿ ಪೂರ್ಣಗೊಂಡಿದ್ದರೂ ಆರೋಪಿ ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ. ಹಲವು ತಿಂಗಳಿನಿಂದ ಆತ ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಇದ್ದು, ತನಿಖೆ ಮುಂದುವರಿದಿದೆ’ ಎಂದೂ ಪೊಲೀಸರು ಮಾಹಿತಿ ನೀಡಿದರು.

ಕಟಕಟೆಯಲ್ಲಿ ದಾಖಲೆ ಪರಿಶೀಲನೆ ತಗಾದೆ ಇತ್ಯರ್ಥ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪ್ರಕರಣದಲ್ಲಿ 61 ಸಾಕ್ಷಿಗಳ ವಿಚಾರಣೆ ಅಂತ್ಯ
- 2016ರಿಂದ ಜೈಲಿನಲ್ಲಿರುವ ಏಕೈಕ ಆರೋಪಿ

ಬೆಂಗಳೂರು: ‘ಕ್ರಿಮಿನಲ್ ಪ್ರಕರಣಗಳಲ್ಲಿ ಸಹಾಯಕ ತನಿಖಾಧಿಕಾರಿಗಳು ನ್ಯಾಯಾಲಯದ ಕಟಕಟೆಯಲ್ಲಿ ನಿಂತು ಸಾಕ್ಷ್ಯ ನುಡಿಯುವಾಗ ದಾಖಲೆ ಪರಿಶೀಲಿಸಿ ಉತ್ತರ ನೀಡುವುದರಿಂದ ಯಾವುದೇ ಕಾನೂನಾತ್ಮಕ ತೊಡಕು ಉದ್ಭವಿಸುವುದಿಲ್ಲ’ ಎಂದು ಇಲ್ಲಿನ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

‘ಕಟಕಟೆಯಲ್ಲಿ ನಿಂತು ಉತ್ತರ ನೀಡುವಾಗ ಎನ್‌ಐಎ ಸಹಾಯಕ ತನಿಖಾಧಿಕಾರಿಗೆ ದಾಖಲೆ ಪರಿಶೀಲಿಸಿ ಉತ್ತರ ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ. ಆತ ಕೇವಲ ತನ್ನ ನೆನಪಿನ ಆಧಾರದಲ್ಲಿಯೇ ಉತ್ತರಿಸಬೇಕು’ ಎಂದು ಆರೋಪಿ ಪರ ವಕೀಲ ಮುಜಫ್ಫರ್ ಅಹಮದ್ ಅವರು ಎತ್ತಿದ್ದ ತಕರಾರನ್ನು ನ್ಯಾಯಾಧೀಶ ಡಾ.ಕಸನಪ್ಪ ನಾಯಕ ಸ್ಪಷ್ಟವಾಗಿ ತಳ್ಳಿ ಹಾಕಿದ್ದಾರೆ.

ಆಕ್ಷೇಪಕ್ಕೆ ಪ್ರತಿಯಾಗಿ ಎನ್‌ಐಎ ಪರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್, ಸುಪ್ರೀಂ ಕೋರ್ಟ್ ಮತ್ತು ಹಲವು ಹೈಕೋರ್ಟ್ ತೀರ್ಪುಗಳನ್ನು ಉಲ್ಲೇಖಿಸುವ ಮೂಲಕ, ‘ಸಹಾಯಕ ತನಿಖಾಧಿಕಾಧಿಕಾರಿಗಳೂ ದಾಖಲೆ ಪರಿಶೀಲಿಸಿ ಉತ್ತರ ನೀಡಲು ಕಾನೂನಿನಲ್ಲಿ ಅವಕಾಶವಿದೆ’ ಎಂದು ಆರೋಪಿ ಪರ ವಕೀಲರ ಆಕ್ಷೇಪಣೆಯನ್ನು ವಿರೋಧಿಸಿದ್ದರು.

‘ಭಾರತೀಯ ಸಾಕ್ಷ್ಯ ಅಧಿನಿಯಮ–1872ರ ಕಲಂ 159ರ ಅನುಸಾರ ಸಾಮಾನ್ಯ ಪ್ರಕರಣಗಳಲ್ಲಿ, ಕಟಕಟೆಯಲ್ಲಿ ಸಾಕ್ಷ್ಯ ನುಡಿಯುವಾಗ ತನಿಖಾಧಿಕಾರಿಗಳಿಗೆ ಮಾತ್ರವೇ ದಾಖಲೆ ಪರಿಶೀಲಿಸಿ ಉತ್ತರಿಸಲು ಅವಕಾಶವಿದೆ. ಸಹಾಯಕ ತನಿಖಾಧಿಕಾರಿಗಳಿಗೆ ಈ ಅವಕಾಶವಿಲ್ಲ. ಆದರೆ, ಎನ್‌ಐಎ ಪ್ರಕರಣಗಳಲ್ಲಿ ಮಾತ್ರ ಇದು ಅಪವಾದ’ ಎಂಬ ಅಂಶವನ್ನು ಪ್ರಸನ್ನ ಕುಮಾರ್ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಿದ್ದರು.

ಇದರಿಂದಾಗಿ ಮುಖ್ಯ ಪ್ರಕರಣದ ವಿಚಾರಣೆಗೆ ತೊಡಕು ಉಂಟು ಮಾಡಿದ್ದ ಈ ಅಂಶದ ಮೇಲೆಯೇ ಪ್ರತ್ಯೇಕ ವಿಚಾರಣೆ ನಡೆಸಿದ ನ್ಯಾಯಾಧೀಶರು ಈ ಕುರಿತಂತೆ ತಮ್ಮ ಆದೇಶವನ್ನು ಪ್ರಕಟಿಸಿದ್ದಾರೆ.

‘ಎನ್‌ಐಎ ಕಾಯ್ದೆ–2008ರ ಅನುಸಾರ ಪಿಎಸ್‌ಐ ದರ್ಜೆಗಿಂತಲೂ ಮೇಲಿನವರು ತನಿಖಾ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಈ ತನಿಖಾಧಿಕಾರಿಗಳು ನಿತ್ಯದ ಕೆಲಸದಲ್ಲಿ ಹಲವಾರು ಪ್ರಕರಣಗಳ ಕುರಿತು ತಮ್ಮ ಕೆಲಸ ನಿರ್ವಹಿಸುತ್ತಿರುತ್ತಾರೆ. ಹೀಗಾಗಿ, ಕಟಕಟೆಯಲ್ಲಿ ನಿಂತು ಸಾಕ್ಷ್ಯ ನುಡಿಯುವಾಗ ಅಥವಾ ಕೇಳಿದ ಪ್ರಶ್ನೆಗೆ ಉತ್ತರಿಸುವಾಗ ಸಂಬಂಧಿಸಿದ ಕೇಸಿನ ಫೈಲ್ ಅನ್ನು ಪರಿಶೀಲಿಸಿ ಉತ್ತರ ನೀಡುವುದು ಕಾನೂನಿಗೆ ವಿರುದ್ಧವಲ್ಲ’ ಎಂದು ನ್ಯಾಯಾಧೀಶರು ಆದೇಶದಲ್ಲಿ ತಿಳಿಸಿದ್ದಾರೆ.

ಪ್ರಕರಣವೇನು?: ಚರ್ಚ್ ಸ್ಟ್ರೀಟ್‌ನ ಕೋಕೊನಟ್ ಗ್ರೋವ್ ರೆಸ್ಟೋರೆಂಟ್ ಮುಂಭಾಗ 2014ರ ಡಿಸೆಂಬರ್ 28ರಂದು ರಾತ್ರಿ 8.30ರ ವೇಳೆಯಲ್ಲಿ ಬಾಂಬ್ ಸ್ಫೋಟ ಸಂಭವಿಸಿತ್ತು. ಘಟನೆಯಲ್ಲಿ ಚೆನ್ನೈನ ಭವಾನಿ (38) ಎಂಬುವರು ಮೃತಪಟ್ಟು ಮೂವರು ಗಾಯಗೊಂಡಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಆಲಂ ಝೇಬ್ ಆಫ್ರಿದಿಯನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು 2016ರ ಜನವರಿ 29ರಂದು ಬೆಂಗಳೂರಿನಲ್ಲಿ ಬಂಧಿಸಿದ್ದರು.

ಆರೋಪಿ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆ–1967, ಭಾರತೀಯ ದಂಡ ಸಂಹಿತೆ–1860 ಹಾಗೂ ಸ್ಫೋಟಕ ವಸ್ತುಗಳ ಕಾಯ್ದೆ–1908ರ ವಿವಿಧ ಕಲಂಗಳಡಿ ದೋಷಾರೋಪ ಹೊರಿಸಲಾಗಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿ ಇರಿಸಿ ವಿಚಾರಣೆ ನಡೆಸಲಾಗುತ್ತಿದೆ.

‘ಅಹಮದಾಬಾದ್ ನಿವಾಸಿಯಾದ ಈತ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ಉಗ್ರ ಸಂಘಟನೆಯ ಸದಸ್ಯ ಹಾಗೂ ಪ್ಯಾಲೆಸ್ತೇನಿಯರ ಪರ ಅನುಕಂಪ ಹೊಂದಿದ್ದ. ಬಾಂಬ್ ಸ್ಫೋಟಿಸಿದ ದಿನ ಕೋಕೊನಟ್ ಗ್ರೋವ್‌ಗೆ ಇಸ್ರೇಲ್ ರಾಜತಾಂತ್ರಿಕ ಪ್ರತಿನಿಧಿಗಳು ಬರುವವರಿದ್ದರು. ಆಫ್ರಿದಿ ಈ ಕುರಿತು ಖಚಿತ ಮಾಹಿತಿ ಹೊಂದಿದ್ದ’ ಎಂದು ದೋಷಾರೋಪ ಪಟ್ಟಿಯಲ್ಲಿ ಹೇಳಲಾಗಿತ್ತು. ವಿಚಾರಣೆ 2017ರಿಂದ ಆರಂಭವಾಗಿದ್ದು, ಈತನಕ 61 ಜನ ಸಾಕ್ಷಿಗಳ ವಿಚಾರಣೆ ನಡೆದಿದೆ.

ಸಾಕ್ಷ್ಯ ಅಧಿನಿಯಮ: ಕಲಂ 159 ಏನು ಹೇಳುತ್ತದೆ?

ಯಾವುದೇ ಒಬ್ಬ ಸಾಕ್ಷಿದಾರನನ್ನು ನ್ಯಾಯಾಲಯದ ಕಟಕಟೆಯಲ್ಲಿ ಪ್ರಶ್ನಿಸಿದಾಗ ಅವನು ಆ ಘಟನೆ ಘಟಿಸುವ ಕಾಲದಲ್ಲಿ ನೆನಪಿನ ಸಲುವಾಗಿ ಮಾಡಿಟ್ಟುಕೊಂಡ ಯಾವುದಾರೊಂದು ಗುರುತನ್ನಾಗಲೀ ಅಥವಾ ತನ್ನ ಬರವಣಿಗೆಯನ್ನಾಗಲೀ ಪರೀಕ್ಷಿಸಿ ನೆನಪು ಮಾಡಿಕೊಂಡು ಸಾಕ್ಷಿ ಹೇಳುವುದಕ್ಕೆ ನ್ಯಾಯಾಲಯ ಅನುಮತಿ ಕೊಡುವಂತೆ 159ನೇ ಕಲಂ ನಿರ್ದೇಶಿಸುತ್ತದೆ.

‘ಬೆತ್ತಲೆ ವಿಡಿಯೊ ಬ್ಲ್ಯಾಕ್‌ಮೇಲ್’ಗೆ ಹೆದರಿ ವೈದ್ಯ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಬರ್ ವಂಚಕರ ‘ಬೆತ್ತಲೆ ವಿಡಿಯೊ’ ಬ್ಲ್ಯಾಕ್‌ಮೇಲ್‌ಗೆ ಹೆದರಿ ನಗರದ ವೈದ್ಯರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ಬೆಂಗಳೂರು ನಗರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದ 30 ವರ್ಷದ ವೈದ್ಯ, ಹಳಿ ಮೇಲೆ ರೈಲಿಗೆ ತಲೆಕೊಟ್ಟು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಘಟನಾ ಸ್ಥಳದಲ್ಲಿ ದೊರೆತ ಮರಣಪತ್ರ ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ. ಪೋಷಕರ ವಿನಂತಿ ಮೇರೆಗೆ ವೈದ್ಯನ ಹೆಸರು ಗೋಪ್ಯವಾಗಿರಿಸಲಾಗಿದೆ’ ಎಂದು ರೈಲ್ವೆ ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

> **ವೈದ್ಯ ಆತ್ಮಹತ್ಯೆ ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿದೆ. ಬೆತ್ತಲೆ ಬ್ಲ್ಯಾಕ್‌ಮೇಲ್ ಮಾಡಿದ್ದ ಆರೋಪಿ ಬಗ್ಗೆ ಸುಳಿವು ಸಿಕ್ಕಿದ್ದು, ಆತನ ಬಂಧನಕ್ಕೆ ಬಲೆ ಬೀಸಲಾಗಿದೆ**
> **ಡಿ.ಆರ್. ಸಿರಿಗೌರಿ,** ರೈಲ್ವೆ ಪೊಲೀಸ್ ಎಸ್ಪಿ

‘ಹಲವು ಸಾಮಾಜಿಕ ಮಾಧ್ಯಮಗಳಲ್ಲಿ ವೈದ್ಯ ಖಾತೆಗಳನ್ನು ತೆರೆದಿದ್ದರು. ಯುವತಿ ಹೆಸರಿನಲ್ಲಿ ನಕಲಿ ಖಾತೆ ತೆರೆದಿದ್ದ ಸೈಬರ್ ವಂಚಕರು, ಅದೇ ಖಾತೆಯಿಂದ ವೈದ್ಯನಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದರು. ಅದನ್ನು ಸ್ವೀಕರಿಸಿದ್ದ ವೈದ್ಯ, ಆ ಖಾತೆಯಿಂದ ಬಂದ ಸಂದೇಶಗಳಿಗೆ ಪ್ರತಿಕ್ರಿಯಿಸಲಾರಂಭಿಸಿದ್ದರು’ ಎಂದೂ ಹೇಳಿದರು.

‘ಯುವತಿಯೊಬ್ಬರ ಫೋಟೊ ಬಳಸಿ ಸಂದೇಶ ಕಳುಹಿಸುತ್ತಿದ್ದ ವಂಚಕರು, ನಗ್ನ ವಿಡಿಯೊ ಬಳಸಿ ರಾತ್ರಿ ಸಮಯದಲ್ಲಿ ಕರೆ ಮಾಡಿದ್ದರು. ವೈದ್ಯ ಕೂಡ ಪ್ರಚೋದನೆಗೆ ಒಳಗಾಗಿ ತಮ್ಮ ಬಟ್ಟೆ ಕಳಚಿ ನಗ್ನರಾಗಿದ್ದರು. ಅದೇ ವಿಡಿಯೊವನ್ನು ಆರೋಪಿಗಳು ಚಿತ್ರೀಕರಿಸಿಕೊಂಡು ಕೇಳಿದಷ್ಟು ಹಣ ಕೊಡಬೇಕು. ಇಲ್ಲದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಹರಿಬಿಡುತ್ತೇವೆ’ ಎಂದು ಬ್ಲ್ಯಾಕ್‌ಮೇಲ್ ಮಾಡಿದ್ದರು. ಇದಕ್ಕೆ ಹೆದರಿದ್ದ ವೈದ್ಯ, ಆರಂಭದಲ್ಲಿ ಸ್ವಲ್ಪ ಹಣ ಕೊಟ್ಟಿದ್ದರು’ ಎಂದೂ ಅಧಿಕಾರಿ ವಿವರಿಸಿದರು.

ಚಿತ್ರಾವಳಿ



ನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಕ್ಯಾಲೆಂಡರ್ ಅನ್ನು ಶಾಸಕ ಜಿ.ಟಿ. ದೇವೇಗೌಡ ಬಿಡುಗಡೆ ಮಾಡಿದರು. ನಿರ್ದೇಶಕರಾದ ಎಂ.ಎಸ್. ರಾಜೇಂದ್ರಕುಮಾರ್, ಲಕ್ಷ್ಮೀನಾರಾಯಣ್ ಎಸ್, ಕಾರ್ಯದರ್ಶಿ ತೇಜಸ್ವಿನಿ, ಉಪಾಧ್ಯಕ್ಷ ಶಿವಣ್ಣ, ನಿರ್ದೇಶಕ ಮೋಹನ್‌ಕುಮಾರ್ ಇದ್ದರು



ಗಂಗಾರಾಮ್ ಸಂಗೀತ್‌ನ ಸದಸ್ಯರಾದ ಗೀತಾ ಸಿಂಧೆ ಬೆನಗಿ ಅವರು ರಚಿಸಿ ನಿರ್ದೇಶಿಸಿರುವ ‘ಅವ್ವನ ಕೌದಿ’ ವಿಡಿಯೊ ಧ್ವನಿ ಸುರುಳಿಯನ್ನು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಅವರು ಬಿಡುಗಡೆ ಮಾಡಿದರು. ವಿಜಯ ಬೆನಗಿ, ವಿನಯ್ ಶಿಂಧೆ ಹಾಗೂ ಶ್ರದ್ಧಾ ಬೆನಗಿ ಇದ್ದಾರೆ.

ಕಲಾ ಪ್ರದರ್ಶನ ಅವಧಿ ವಿಸ್ತರಣೆ

ಬೆಂಗಳೂರು: ಕೇಂದ್ರ ಲಲಿತಕಲಾ ಅಕಾಡೆಮಿಯು ಇಲ್ಲಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಹಮ್ಮಿಕೊಂಡಿರುವ ಎರಡನೇ ಆವೃತ್ತಿಯ ‘ಪ್ರಿಂಟ್ ಬಿನಾಲೆ ಇಂಡಿಯಾ’ ಅಂತರರಾಷ್ಟ್ರೀಯ ಕಲಾ ಪ್ರದರ್ಶನವನ್ನು ಇದೇ 30ರವರೆಗೆ ವಿಸ್ತರಿಸಲಾಗಿದೆ.

‘ದಕ್ಷಿಣ ಭಾರತದಲ್ಲಿ ಇದೇ ಮೊದಲ ಬಾರಿಗೆ ಈ ಪ್ರದರ್ಶನವನ್ನು ನಡೆಸಲಾಗುತ್ತಿದೆ. ಜ.10ರಿಂದ ಪರಿಷತ್ತಿನ 12 ಗ್ಯಾಲರಿಗಳಲ್ಲಿ ಆಯೋಜಿಸಲಾಗಿದೆ’ ಎಂದು ಸಂಯೋಜಕ ಚಿ.ಸು.ಕೃಷ್ಣ ಸೆಟ್ಟಿ ಹೇಳಿದರು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಪ್ರೊ.ಕೆ.ಎಸ್ ಅಪ್ಪಾಜಯ್ಯ ಇದ್ದರು.

ಜೀವ ಬೆದರಿಕೆ: ರಕ್ಷಣೆ ಕೋರಿದ ಪಿಡಿಒ

ಬೆಂಗಳೂರು: ‘ಜನಪರ ಕೆಲಸಗಳನ್ನು ಮಾಡುತ್ತಿರುವ ನನಗೆ ಹಲವರಿಂದ ಜೀವ ಬೆದರಿಕೆ ಇದೆ. ರಾಜ್ಯ ಸರ್ಕಾರ ಸೂಕ್ತ ರಕ್ಷಣೆ ಒದಗಿಸಬೇಕು’ ಎಂದು ಸೇವೆಯಿಂದ ಅಮಾನತುಗೊಂಡಿರುವ ಬೀದರ್ ತಾಲ್ಲೂಕಿನ ಚಾಂಬೋಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಮಂಗಲಾ ಕಾಂಬಳೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ಜನವಾಡ, ಚಿಲ್ಲರ್ಗಿ ಹಾಗೂ ಚಾಂಬೋಳ ಗ್ರಾಮ ಪಂಚಾಯಿತಿಗಳ ಪಿಡಿಒ ಆಗಿದ್ದ ವೇಳೆ ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದ್ದೇನೆ.’ ಎಂದರು.

‘ಜನವಾಡ ಹಾಗೂ ಚಿಲ್ಲರ್ಗಿ ಗ್ರಾಮ ಪಂಚಾಯಿತಿಗಳಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆದಿತ್ತು. ಅದರಲ್ಲಿ ಮೇಲಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು ಭಾಗಿಯಾಗಿದ್ದರು. ಈ ಸಂಬಂಧ ದೂರು ದಾಖಲಿಸಲು ಪೊಲೀಸರು ನಿರಾಕರಿಸಿದ್ದರು ’ ಎಂದು ಆರೋಪಿಸಿದರು.

ಮಹಿಳೆ ಹತ್ಯೆ ಪ್ರಕರಣ: ಆರೋಪಿ ಬಂಧಿಸಿದ ಪೊಲೀಸರು

ಪ್ರೇಯಸಿ ಕೊಂದು, ಮೃತದೇಹಕ್ಕೆ ಸ್ನಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನ ಜೊತೆ ಸಹಜೀವನ ನಡೆಸುತ್ತಿದ್ದ ಮಹಿಳೆಯನ್ನು ಸುತ್ತಿಗೆಯಿಂದ ಹೊಡೆದು ಕೊಂದು, ಆಸ್ಪತ್ರೆಯಲ್ಲಿ ಅನಾರೋಗ್ಯ ನಾಟಕವಾಡಿದ್ದ ಆರೋಪಿ ಮಂಜುನಾಥ್ (40) ಎಂಬಾತನನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮಳವಳ್ಳಿಯ ಮಂಜುನಾಥ್, ಕೆಲಸ ಅರಸಿ ನಗರಕ್ಕೆ ಬಂದಿದ್ದ. ಇಲ್ಲಿಯ ನಿರ್ಮಾಣ ಹಂತದ ಕಟ್ಟಡಗಳಲ್ಲಿ ಸೆಂಟ್ರಿಂಗ್ ಕೆಲಸ ಮಾಡಲಾರಂಭಿಸಿದ್ದ. ತನ್ನ ಜೊತೆ ವಾಸವಿದ್ದ ಮಂಜುಳಾ (35) ಎಂಬುವರನ್ನು ಬುಧವಾರ ರಾತ್ರಿ ಕೊಲೆ ಮಾಡಿದ್ದ. ಪುರಾವೆಗಳನ್ನು ಆಧರಿಸಿ ಆತನನ್ನು ಬಂಧಿಸಲಾಗಿದ್ದು, ಪ್ರಕರಣದ ತನಿಖೆ ಮುಂದುವರಿದಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಮಂಜುನಾಥ್

‘ಅವಿವಾಹಿತನಾದ ಮಂಜುನಾಥ್, ವಿವಾಹಿತೆಯಾದ ಮಂಜುಳಾ ಜೊತೆ ಸ್ನೇಹವಿಟ್ಟುಕೊಂಡಿದ್ದ. ಅವರಿಬ್ಬರ ನಡುವೆ ಸಲುಗೆ ಏರ್ಪಟ್ಟಿತ್ತು. ಇಬ್ಬರು ಪರಸ್ಪರ ಒಪ್ಪಿ, ಬೀರೇಶ್ವರನಗರದಲ್ಲಿರುವ ಬಾಡಿಗೆ ಮನೆಯಲ್ಲಿ ಒಟ್ಟಿಗೆ ವಾಸವಿದ್ದರು. ಮಹಿಳೆ ಶೀಲದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದ ಆರೋಪಿ, ಜಗಳ ತೆಗೆದು ಕೊಲೆ ಮಾಡಿದ್ದಾನೆ. ಈ ಬಗ್ಗೆ ಆತ ಹೇಳಿಕೆ ನೀಡಿದ್ದಾನೆ’ ಎಂದೂ ತಿಳಿಸಿದರು.

ನಾಪತ್ತೆಯಾಗಿದ್ದ ಗಂಡ: ‘ಕೊಲೆಯಾದ ಮಂಜುಳಾ ಅವರ ಗಂಡ ಎರಡು ವರ್ಷಗಳ ಹಿಂದೆಯೇ ನಾಪತ್ತೆಯಾಗಿದ್ದಾರೆ. ಗಂಡನಿಗಾಗಿ ಹುಡುಕಾಟ ನಡೆಸುತ್ತಿದ್ದ ಮಂಜುಳಾ, ತನ್ನಿಬ್ಬರು ಮಕ್ಕಳ ಜೊತೆ ಸಂಬಂಧಿಕರ ಮನೆಯಲ್ಲಿ ವಾಸವಿದ್ದರು. ಗಂಡನ ಸುಳಿವು ಸಿಕ್ಕಿರಲಿಲ್ಲ’ ಎಂದು ಪೊಲೀಸ್ ಅಧಿಕಾರಿ ವಿವರಿಸಿದರು.

‘ಮಕ್ಕಳನ್ನು ಸಂಬಂಧಿಕರ ಮನೆಯಲ್ಲಿ ಬಿಟ್ಟಿದ್ದ ಮಂಜುಳಾ, ಪ್ರತ್ಯೇಕವಾಗಿ ನೆಲೆಸಿದ್ದರು. ಜೀವನ ನಿರ್ವಹಣೆಗಾಗಿ ಹಲವೆಡೆ ಸಣ್ಣಪುಟ್ಟ ಕೆಲಸ ಮಾಡಲಾರಂಭಿಸಿದ್ದರು’ ಎಂದೂ ಹೇಳಿದರು.

ಸ್ನೇಹಿತೆ ಮೂಲಕ ಪರಿಚಯ: ‘ಮಂಜುಳಾ ಅವರಿಗೆ ಮಹಿಳೆಯೊಬ್ಬರ ಪರಿಚಯವಾಗಿ ಸ್ನೇಹವಾಗಿತ್ತು. ಮಹಿಳೆ ಜೊತೆ ಒಡನಾಟವಿಟ್ಟುಕೊಂಡಿದ್ದ ಮಂಜುಳಾ, ಮನೆಗೂ ಆಗಾಗ ಹೋಗಿ ಬರುತ್ತಿದ್ದರು. ಅದೇ ಮಹಿಳೆಯ ಸ್ನೇಹಿತನಾಗಿದ್ದ ಮಂಜುನಾಥ್ ಸಹ ಮನೆಗೆ ಬಂದು ಹೋಗುತ್ತಿದ್ದ. ಅಲ್ಲಿಯೇ ಅವರಿಬ್ಬರಿಗೂ ಪರಿಚಯವಾಗಿತ್ತು’ ಎಂದು ಅಧಿಕಾರಿ ಮಾಹಿತಿ ನೀಡಿದರು.

‘ಮಂಜುಳಾ ಜೊತೆ ಸಲುಗೆ ಬೆಳೆಸಿದ್ದ ಮಂಜುನಾಥ್, ಸಹಜೀವನ ನಡೆಸಲು ಮುಂದಾಗಿದ್ದ. ಅದಕ್ಕಾಗಿಯೇ ಅವರಿಬ್ಬರು ಬಾಡಿಗೆ ಮನೆ ಮಾಡಿದ್ದರು. ಇಬ್ಬರೂ ಮದ್ಯವ್ಯಸನಿಗಳಾಗಿದ್ದರು. ನಿತ್ಯವೂ ಒಟ್ಟಿಗೆ ಮದ್ಯ ಕುಡಿಯುತ್ತಿದ್ದರು. ಈ ಬಗ್ಗೆ ಸ್ಥಳೀಯರು ಹೇಳಿಕೆ ನೀಡಿದ್ದಾರೆ’ ಎಂದೂ ಅಧಿಕಾರಿ ಹೇಳಿದರು.

‘ಮಂಜುಳಾ ಶೀಲದ ಬಗ್ಗೆ ಮಂಜುನಾಥ್ ಅನುಮಾನ ವ್ಯಕ್ತಪಡಿಸಿದ್ದ. ಇದೇ ಕಾರಣಕ್ಕೆ ಅವರಿಬ್ಬರ ನಡುವೆ ಹಲವು ಬಾರಿ ಜಗಳವಾಗಿತ್ತು. ಬುಧವಾರ ರಾತ್ರಿಯೂ ಜಗಳವಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು.’

‘ಕೋಪಗೊಂಡಿದ್ದ ಮಂಜುನಾಥ್, ಮಂಜುಳಾ ಅವರ ಪಕ್ಕೆಲುಬು ಹಾಗೂ ತೊಡೆಗೆ ಸುತ್ತಿಗೆಯಿಂದ ಹೊಡೆದಿದ್ದ. ಇದರಿಂದ ತೀವ್ರ ಗಾಯಗೊಂಡು ಮಂಜುಳಾ ಮೃತಪಟ್ಟಿದ್ದಾರೆ’ ಎಂದೂ ವಿವರಿಸಿದರು.

ಆಸ್ಪತ್ರೆಯಲ್ಲಿ ನಾಟಕ: ‘ಮಂಜುಳಾ ಮೃತಪಡುತ್ತಿದ್ದಂತೆ ಅವರ ಮೃತದೇಹವನ್ನು ಆರೋಪಿ ಸ್ನಾನದ ಕೊಠಡಿಗೆ ತೆಗೆದುಕೊಂಡು ಹೋಗಿದ್ದ. ಸ್ನಾನ ಮಾಡಿಸಿ ಹೊಸ ಬಟ್ಟೆ ತೊಡಿಸಿದ್ದ. ಅದೇ ಸ್ಥಿತಿಯಲ್ಲೇ ಆಸ್ಪತ್ರೆಯೊಂದಕ್ಕೆ ಮೃತದೇಹ ಹೊತ್ತೊಯ್ದಿದ್ದ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಅನಾರೋಗ್ಯದಿಂದಾಗಿ ನನ್ನ ಸ್ನೇಹಿತೆ ಮಂಜುಳಾ, ತೀವ್ರ ಅಸ್ವಸ್ಥಗೊಂಡು ತಲೆ ಸುತ್ತಿ ಬಿದ್ದಿದ್ದಾರೆ’ ಎಂಬುದಾಗಿ ಆರೋಪಿ, ವೈದ್ಯರಿಗೆ ಸುಳ್ಳು ಹೇಳಿದ್ದ. ತಪಾಸಣೆ ನಡೆಸಿದ್ದ ವೈದ್ಯರು, ಮೃತದೇಹ ಮೇಲಿದ್ದ ಗಾಯದ ಗುರುತು ಗಮನಿಸಿದ್ದರು. ಠಾಣೆಗೆ ಮಾಹಿತಿ ನೀಡಿದ್ದರು. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ’ ಎಂದೂ ತಿಳಿಸಿದರು.

ಪ್ರಸ್ತಾವನೆ ಹಂತದಲ್ಲೇ ಇರುವ ಸಿಗ್ನಲ್ ರಹಿತ ಕಾರಿಡಾರ್ ಯೋಜನೆ • ಭರವಸೆ ನೀಡಿ ಮರೆತರು

ಗೊರಗುಂಟೆಪಾಳ್ಯ ಜಂಕ್ಷನ್ ಕಗ್ಗಂಟು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಗೊರಗುಂಟೆಪಾಳ್ಯ ಎಂದ ಕೂಡಲೇ ಕಣ್ಮುಂದೆ ಬರುವುದು ರಕ್ಕಸ ರೂಪದ ಸಂಚಾರ ದಟ್ಟಣೆಯ ಸಿಗ್ನಲ್‌ಗಳು. ಈ ದಟ್ಟಣೆ ಸೀಳಿ ಸಿಗ್ನಲ್ ರಹಿತ ಕಾರಿಡರ್ ರೂಪಿಸುವ ಕನಸು ಸದ್ಯಕ್ಕೆ ಸಾಕಾರಗೊಳ್ಳುವ ಲಕ್ಷಣಗಳಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮಗಳು ಮಾಡಿರುವ ಎಡವಟ್ಟಿನಿಂದ ಈಗ ಬಿಬಿಎಂಪಿ ಅಧಿಕಾರಿಗಳು ತಿಣುಕಾಡುವಂತಾಗಿದೆ.

20ಕ್ಕೂ ಹೆಚ್ಚು ಜಿಲ್ಲೆಗಳು ವಾಹನಗಳು ರಾಜಧಾನಿಗೆ ತಲುಪಲು ಇರುವ ಪ್ರಮುಖ ರಸ್ತೆ ಇದು. ಮುಂಬೈ ಮತ್ತು ಪುಣೆಯಿಂದ ಬರುವ ವಾಹನಗಳು ಇದೇ ಹೆದ್ದಾರಿ ಮೂಲಕ ಸಾಗಬೇಕು. ಹೆಬ್ಬಾಳ ಮೂಲಕ ಹೈದರಾಬಾದ್ ರಸ್ತೆ ಕಡೆಗೆ ಹೋಗಬೇಕಿರುವ ವಾಹನಗಳು, ವಿಮಾನ ನಿಲ್ದಾಣದ ಕಡೆಗೆ ಹೋಗಬೇಕಿರುವ ವಾಹನಗಳಿಗೂ ಇದೇ ಪ್ರಮುಖ ಹೆದ್ದಾರಿ.

ನಾಗಸಂದ್ರದಿಂದ ಆರಂಭವಾಗುವ ಶಿವಕುಮಾರಸ್ವಾಮೀಜಿ ಮೇಲ್ಸೇತುವೆ ಗೊರಗುಂಟೆಪಾಳ್ಯದಲ್ಲಿ ಕೊನೆಗೊಳ್ಳುತ್ತದೆ. ಮೇಲ್ಸೇತುವೆ ಮೇಲೆ ಮತ್ತು ಕೆಳಗೆ ಬರುವ ಎಲ್ಲ ವಾಹನಗಳು ಈ ಜಂಕ್ಷನ್‌ನಲ್ಲಿ ಒಗ್ಗೂಡುತ್ತವೆ. ಬಳಿಕ ರಿಂಗ್ ರಸ್ತೆಗೆ (ರಾಜ್‌ಕುಮಾರ್ ಸಮಾಧಿ ರಸ್ತೆ) ಬಲ ತಿರುವು ಪಡೆಯುವ ಸಿಗ್ನಲ್‌ನಿಂದ ಆರಂಭವಾಗುವ ಸಂಚಾರ ದಟ್ಟಣೆ ಸಮಸ್ಯೆ, ಗೊರಗೊಂಟೆ ಪಾಳ್ಯ ಮೆಟ್ರೊ ರೈಲು ನಿಲ್ದಾಣ ದಾಟುವ ತನಕ ಮುಂದುವರಿಯುತ್ತದೆ.

ಯಶವಂತಪುರ ಕಡೆಯಿಂದ ಬರುವ ವಾಹನಗಳು ಹೆಬ್ಬಾಳ ಕಡೆಗೆ ಬಲ ತಿರುವು ಪಡೆದುಕೊಳ್ಳಬೇಕೆಂದರೆ ಮುಂದೆ ಸಾಗಿ ವಾಪಸ್ ಬಂದು ಸಾಗಬೇಕಾಗಿದೆ. ರಾಜಕುಮಾರ್ ಸಮಾಧಿ ರಸ್ತೆಯಿಂದ ಬರುವ ವಾಹನಗಳು ಹೆಬ್ಬಾಳ ಕಡೆಗೆ ಹೋಗಬೇಕೆಂದರೂ 10ರಿಂದ 15 ನಿಮಿಷ ಸಿಗ್ನಲ್‌ನಲ್ಲಿ ನಿಲ್ಲಬೇಕಾಗಿದೆ. ಇನ್ನು ರಸ್ತೆ ದಾಟುವ ಪಾದಚಾರಿಗಳ ಪಾಡಂತೂ ಹೇಳ ತೀರದಾಗಿದೆ. ವಾರಾಂತ್ಯ ಮತ್ತು ಹಬ್ಬದ ಸಂದರ್ಭಗಳಲ್ಲಿ ಎರಡು ಸಿಗ್ನಲ್ ದಾಟಲು ಗಂಟೆಗಟ್ಟಲೆ ಸಮಯ ಬೇಕಾಗುತ್ತದೆ. ಗುರುವಾರ ಸ್ಥಳಕ್ಕೆ ಭೇಟಿ ನೀಡಿದ್ದ 'ಪ್ರಜಾವಾಣಿ' ತಂಡಕ್ಕೆ ಸಂಚಾರ ದಟ್ಟಣೆಯ ನರಕ ದರ್ಶನವಾಯಿತು.

'ಕೆಳಸೇತುವೆ ನಿರ್ಮಾಣ ಮಾಡಿ ಸಿಗ್ನಲ್ ರಹಿತ ಕಾರಿಡಾರ್ ಮಾಡುವುದಾಗಿ ಹಲವು ವರ್ಷಗಳಿಂದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಹೇಳುತ್ತಿದ್ದಾರೆ. ಕಾಂಗ್ರೆಸ್ ಶಾಸಕರಾಗಿದ್ದ ಮುನಿರತ್ನ ಅವರು ರಾಜೀನಾಮೆ ನೀಡಿ ಬಿಜೆಪಿ ಸೇರ್ಪಡೆಯಾಗುವ ಸಂದರ್ಭದಲ್ಲಿ ಕೆಳಸೇತುವೆ (ಗ್ರೇಡ್ ಸಪರೇಟರ್) ಯೋಜನೆ ವಿಳಂಬ ಆಗುತ್ತಿರುವುದನ್ನೂ ಉಲ್ಲೇಖಿಸಿದ್ದರು. ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದು ಎರಡೂವರೆ ವರ್ಷಗಳು ಕಳೆದಿವೆ. ಯೋಜನೆಯ ರೂಪರೇಷೆಯೇ ಇನ್ನೂ ಅಂತಿಮವಾದಂತಿಲ್ಲ' ಎಂದು ಜಾಲಹಳ್ಳಿ ನಿವಾಸಿ ಟ್ಯಾಕ್ಸಿ ಚಾಲಕ ಚಂದ್ರಶೇಖರ್ ಬೇಸರ ವ್ಯಕ್ತಪಡಿಸುತ್ತಾರೆ.

'2021ರ ಫೆಬ್ರುವರಿ 12ರಂದು ಕ್ಷೇತ್ರದ ಶಾಸಕರು, ಬಿಬಿಎಂಪಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ₹2 ಸಾವಿರ ಕೋಟಿ ಮೊತ್ತದ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿ ಹೋಗಿದ್ದರು. ಬಳಿಕ ಯೋಜನೆ ಮುಂದುವರಿದಂತೆ ಕಾಣಿಸುತ್ತಿಲ್ಲ. ಶಾಸಕರಿಗೂ ಈ ಬಗ್ಗೆ ಹೆಚ್ಚಿನ ಆಸಕ್ತಿ ಇಲ್ಲ' ಎಂದು ಹೇಳಿದರು.



ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ –ಪ್ರಜಾವಾಣಿ ಚಿತ್ರ/ರಂಜು ಪಿ.

ಸಮನ್ವಯತೆ ಇಲ್ಲದೆ ದೊಡ್ಡದಾದ ಸಮಸ್ಯೆ

ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿರುವ ಪ್ರಮುಖ ಜಂಕ್ಷನ್‌ಗಳಲ್ಲಿ ಇದು ಪ್ರಮುಖ ಜಂಕ್ಷನ್ ಆಗಿದೆ. ಸಮಗ್ರ ನಗರ ಯೋಜನೆ ರೂಪಿಸಿಕೊಳ್ಳದೆ, ಮುಂದಾಲೋಚನೆ ಇಲ್ಲದೆ, ಇಲಾಖೆಗಳ ನಡುವೆ ಪರಸ್ಪರ ಸಮನ್ವಯತೆ ಇಲ್ಲದೆ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುವುದು ಗೊರಗುಂಟೆಪಾಳ್ಯವನ್ನು ವಾಹನ ದಟ್ಟಣೆಯ ಕೇಂದ್ರವನ್ನಾಗಿಸಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ಮೇಲ್ಸೇತುವೆಯನ್ನು 500 ಮೀಟರ್ ಮುಂದುವರಿಸಿ ಗೊರಗುಂಟೆ ಪಾಳ್ಯ ದಾಟಿಸಿದ್ದರೆ ಸಮಸ್ಯೆ ಉದ್ಭವಿಸುತ್ತಿರಲಿಲ್ಲ.

ಇನ್ನೊಂದೆಡೆ, ಮೆಟ್ರೊ ರೈಲು ಮಾರ್ಗವನ್ನು ರಸ್ತೆ ಮಧ್ಯದಲ್ಲೇ ನಿರ್ಮಿಸಲಾಗಿದೆ. ಜಂಕ್ಷನ್ ಬಳಿಯೇ ರೈಲು ನಿಲ್ದಾಣ ನಿರ್ಮಿಸಲಾಗಿದೆ. ಈಗ ಕೆಳಸೇತುವೆ (ಗ್ರೇಡ್ ಸಪರೇಟರ್) ನಿರ್ಮಿಸಿ ಸಿಗ್ನಲ್ ರಹಿತ ಕಾರಿಡಾರ್ ಮಾಡಲು ಈಗ ಜಾಗವೇ ಇಲ್ಲವಾಗಿದೆ. ಇದು ಬಿಡಿಸಲಾಗದ ಕಗ್ಗಂಟಾಗಿ ಪರಿಣಮಿಸಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ.

ಹೊರ ವಲಯ ಒಳ ಬೇಗುದಿ

'₹200 ಕೋಟಿ ವೆಚ್ಚದ ಪರಿಹಾರ ಮಾರ್ಗ'

ಲಭ್ಯವಿರುವ ಜಾಗದಲ್ಲೇ ಕಡಿಮೆ ಖರ್ಚಿನಲ್ಲಿ ಸಿಗ್ನಲ್ ರಹಿತ ಕಾರಿಡಾರ್ ನಿರ್ಮಿಸುವ ಯೋಜನೆಯೊಂದನ್ನು ಬಿಬಿಎಂಪಿ ಅಧಿಕಾರಿಗಳು ಸಿದ್ಧಪಡಿಸಿದ್ದಾರೆ.

'ರಾಜಾಜಿನಗರದಲ್ಲಿ ಮೆಟ್ರೊ ಮಾರ್ಗದ ಆಜುಬಾಜಿನಲ್ಲಿ ನಿರ್ಮಿಸಿರುವ ಎರಡು ಮೇಲ್ಸೇತುವೆ ಮಾದರಿಯಲ್ಲೇ ಇಲ್ಲಿಯೂ ಎರಡು ಮೇಲ್ಸೇತುವೆ ಅಭಿವೃದ್ಧಿಪಡಿಸಲು ಸಾಧ್ಯವಿದೆ' ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ರಸ್ತೆ ಮೂಲಸೌಕರ್ಯ) ಬಿ.ಎಸ್. ಪ್ರಹ್ಲಾದ್ ಹೇಳಿದರು.

'ಹೆಬ್ಬಾಳ ಕಡೆಯಿಂದ ಬರುವ ವಾಹನಗಳು ತಾಜ್ ಹೋಟೆಲ್ ತನಕ ಬರುವ ಬದಲು ಹಿಂದೆಯೇ ಎಡ ತಿರುವು ಪಡೆಯಲು ರಸ್ತೆ ಅಭಿವೃದ್ಧಿಪಡಿಸಲು ಅವಕಾಶ ಇದೆ. ಈ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗುತ್ತಿದೆ' ಎಂದು ತಿಳಿಸಿದರು.

ಪಾದಯಾತ್ರೆಗೆ ಅಲ್ಪವಿರಾಮ

11 ದಿನದ ಕಾಂಗ್ರೆಸ್ ಪಾದಯಾತ್ರೆ ನಾಲ್ಕೇ ದಿನಕ್ಕೆ ಮೊಟಕು

• ಆರ್.ಜಿತೇಂದ್ರ

ರಾಮನಗರ: ನಾಲ್ಕು ದಿನಗಳ ಕಾಲ ಕಾಂಗ್ರೆಸ್ ನೇತೃತ್ವದಲ್ಲಿ ನಡೆದ ಮೇಕೆದಾಟು ಪಾದಯಾತ್ರೆಗೆ ಗುರುವಾರ ಅಲ್ಪವಿರಾಮ ಬಿದ್ದಿದೆ. ಮುಂದೊಂದು ದಿನ ರಾಮನಗರದಿಂದಲೇ ನಡಿಗೆ ಮುಂದುವರಿಸುವ ಘೋಷಣೆಯನ್ನೂ ಮಾಡಲಾಗಿದೆ.

ಹೈಕೋರ್ಟ್ ಆಕ್ಷೇಪ ಮತ್ತು ಹೈಕಮಾಂಡ್ ಸೂಚನೆ ಮೇರೆಗೆ ಪಾದಯಾತ್ರೆಯನ್ನು ಅನಿವಾರ್ಯವಾಗಿ ಅರ್ಧಕ್ಕೆ ಮೊಟಕುಗೊಳಿಸುವ ತೀರ್ಮಾನಕ್ಕೆ ಬರಲಾಯಿತು ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.


ರಾಮನಗರ ಕಾಂಗ್ರೆಸ್ ಕಚೇರಿ ಮುಂಭಾಗ ಬೆಳಿಗ್ಗೆಯಿಂದಲೇ ನಾಟಕೀಯ ಬೆಳವಣಿಗೆಗಳು ನಡೆದವು. ಸರ್ಕಾರದ ಜೊತೆಗೆ ಕಾಂಗ್ರೆಸ್ ಸಂಘರ್ಷಕ್ಕೆ ಇಳಿಯಬಹುದು ಎನ್ನುವ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಆದರೆ, ಮಧ್ಯಾಹ್ನ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಜನರ ಆರೋಗ್ಯದ ಹಿತದೃಷ್ಟಿಯಿಂದ ಮೇಕೆದಾಟು ಪಾದಯಾತ್ರೆಗೆ ಸದ್ಯ ವಿರಾಮ ನೀಡುತ್ತಿದ್ದೇವೆ' ಎಂದು ಘೋಷಿಸಿದರು. ಬಳಿಕ ಕಾಂಗ್ರೆಸ್ ಕಚೇರಿಯ ಹೊರಗೆ ಬಂದು, ಪಾದಯಾತ್ರೆಗೆ ಸಹಕರಿಸಿದ ಜನರಿಗೆ, ಕಾರ್ಯಕರ್ತರಿಗೆ ಧನ್ಯವಾದ ತಿಳಿಸಿದರು.

ಹೈಕಮಾಂಡ್ ಸೂಚನೆ: ಕೋವಿಡ್ ನಿಯಂತ್ರಣದಲ್ಲಿ ಕೇಂದ್ರ ಸರ್ಕಾರದ ವೈಫಲ್ಯ ಕುರಿತು ಕಾಂಗ್ರೆಸ್ ದೇಶದಾದ್ಯಂತ ಅಭಿಯಾನ ನಡೆಸುತ್ತಿದೆ. ಹೀಗಿರುವಾಗ ಕರ್ನಾಟಕದಲ್ಲಿ ಹಮ್ಮಿಕೊಂಡಿರುವ ಪಾದಯಾತ್ರೆಯಿಂದ ಸೋಂಕು ಹೆಚ್ಚಾದಲ್ಲಿ ಪಕ್ಷಕ್ಕೆ ಅಪಕೀರ್ತಿ. ಹೀಗಾಗಿ, ಸದ್ಯ ಪಾದಯಾತ್ರೆ ಕೈಬಿಡುವುದು ಒಳಿತು ಎಂದು ಕಾಂಗ್ರೆಸ್ ಹೈಕಮಾಂಡ್ ರಾಜ್ಯ ನಾಯಕರಿಗೆ ಸ್ಪಷ್ಟ ಸಂದೇಶ ರವಾನಿಸಿತ್ತು. ಸ್ವತಃ ರಾಹುಲ್ ಗಾಂಧಿ ಅವರೇ, ಶಿವಕುಮಾರ್ ಅವರಿಗೆ ಕರೆ ಮಾಡಿ ಈ ಬಗ್ಗೆ ಮಾತನಾಡಿದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಬೆಳಿಗ್ಗೆ 11ರ ವೇಳೆಗೆ ಕಾಂಗ್ರೆಸ್ ಕಚೇರಿಗೆ ಧಾವಿಸಿದ ಸಿದ್ದರಾಮಯ್ಯ, ಡಿಕೆಶಿ ಜೊತೆಗೂಡಿ ಪಕ್ಷದ ಇತರೇ ಮುಖಂಡರ ಜತೆ ಸಾಧಕ–ಬಾಧಕಗಳ ಬಗ್ಗೆ ಸಮಾಲೋಚನೆ ನಡೆಸಿದರು.

'ರಾಜ್ಯದಲ್ಲಿ ಸದ್ಯ ಕೋವಿಡ್ ಸೋಂಕು ಮಿತಿಮೀರಿದೆ. ಒಂದು ವೇಳೆ ಇದು ಇನ್ನಷ್ಟು ಉಲ್ಬಣ ಆದಲ್ಲಿ ಅದಕ್ಕೆ ಸರ್ಕಾರ ಕಾಂಗ್ರೆಸ್ ಪಕ್ಷವನ್ನೇ ಹೊಣೆಯಾಗಿಸಲಿದೆ. ಹೀಗಾಗಿ ಸದ್ಯಕ್ಕೆ ಪಾದಯಾತ್ರೆ ನಿಲ್ಲಿಸೋಣ' ಎಂದು ಸಲಹೆ ನೀಡಿದರು. ಆದರೆ, ಇದಕ್ಕೆ ಬೇಸರ ವ್ಯಕ್ತಪಡಿಸಿದ ಶಿವಕುಮಾರ್, 'ಜನರನ್ನು ಸೇರಿಸದಿದ್ದರೆ ಬೇಡ. ನಾವು ಐದು ಮಂದಿಯಾದರೂ ನಡಿಗೆ ಮುಂದುವರಿಸೋಣ' ಎಂದರು. ನ್ಯಾಯಾಲಯದಲ್ಲಿ ಶುಕ್ರವಾರ ನಡೆಯಲಿರುವ ಪಿಐಎಲ್ ವಿಚಾರಣೆ ಬಗ್ಗೆಯೂ ಚರ್ಚಿಸಲಾಯಿತು. ಅಂತಿಮವಾಗಿ, ಸದ್ಯಕ್ಕೆ ಪಾದಯಾತ್ರೆ ಕೈಬಿಡುವ ನಿರ್ಧಾರಕ್ಕೆ ಬರಲಾಯಿತು.

'ಎಲ್ಲರ ವಿಶ್ವಾಸ ಪಡೆದು ಮೇಕೆದಾಟು ಜಾರಿ'



ಬೆಂಗಳೂರು: 'ಎಲ್ಲರನ್ನು ವಿಶ್ವಾಸ ಪಡೆದು ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಸಿದ್ಧನಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿರೋಧ ಪಕ್ಷದವರಿಗೆ ಭರವಸೆ ನೀಡಿದ್ದಾರೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಬಹಿರಂಗ ಪತ್ರ ಬರೆದಿರುವ ಬೊಮ್ಮಾಯಿ, 'ಸದ್ಯ ನಾವೆಲ್ಲರೂ ಒಗ್ಗೂಡಿ ಕೋವಿಡ್ ಅನ್ನು ಎದುರಿಸಬೇಕಿದೆ. ಮುಂಬರುವ ದಿನಗಳಲ್ಲಿ ಒಂದಾಗಿ ಮೇಕೆದಾಟು ಯೋಜನೆ ಅನುಷ್ಠಾನದ ಕುರಿತು ಕ್ರಮ ಕೈಗೊಳ್ಳೋಣ' ಎಂದು ಪ್ರತಿಪಾದಿಸಿದ್ದಾರೆ.

'ಕೊರೊನಾ ಮಹಾಮಾರಿಯ ಮೂರನೇ ಅಲೆ ತೀವ್ರವಾಗಿ ಅಪ್ಪಳಿಸಿರುವುದರಿಂದ ಜನಜೀವನ, ವಿಶೇಷವಾಗಿ ಮಕ್ಕಳ ಮೇಲೆ ದುಷ್ಪರಿಣಾಮ ಬೀರಿದೆ. ಈ ಸಂದರ್ಭದಲ್ಲಿ ಹೆಚ್ಚು ಜನರನ್ನು ಸೇರಿಸಿ ಪಾದಯಾತ್ರೆ ಮುಂತಾದವುಗಳನ್ನು ಮಾಡುವುದು ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಸರಿಯಲ್ಲ. ಈಗಾಗಲೇ ಹೈಕೋರ್ಟ್ ಕೂಡ ಈ ಬಗ್ಗೆ ತೀವ್ರವಾದ ಅಂಥ ಅಭಿಪ್ರಾಯ ನೀಡಿತ್ತು. ಇದು ಜನಾಭಿಪ್ರಾಯ ಕೂಡ ಆಗಿತ್ತು ' ಎಂದೂ ಅವರು ಹೇಳಿದ್ದಾರೆ.

4 ದಿನ, 60 ಕಿ.ಮೀ ಹೆಜ್ಜೆ

ಇದೇ 9ರಂದು ಆರಂಭವಾದ ಪಾದಯಾತ್ರೆಯು 12ರವರೆಗೆ ಪೂರ್ಣ ಪ್ರಮಾಣದಲ್ಲಿ ನಡೆಯಿತು. ಒಟ್ಟಾರೆ 60.5 ಕಿಲೊಮೀಟರ್‌ಗಳಷ್ಟು ಪಾದಯಾತ್ರೆ ನಡೆಯಿತು. ಮೊದಲ ದಿನ ಕನಕಪುರ ತಾಲ್ಲೂಕಿನ ಸಂಗಮದಲ್ಲಿ ಪಾದಯಾತ್ರೆ ಆರಂಭಗೊಂಡು ಡಿಕೆಶಿ ಸ್ವಗ್ರಾಮವಾದ ದೊಡ್ಡಾಲಹಳ್ಳಿವರೆಗೆ 15 ಕಿ.ಮೀ ಸಾಗಿ ಬಂತು.

ಎರಡನೇ ದಿನದಂದು ದೊಡ್ಡಾಲಹಳ್ಳಿಯಿಂದ ಕನಕಪುರ ನಗರದವರೆಗೆ 16 ಕಿ.ಮೀ, ಮೂರನೇ ದಿನ ಕನಕಪುರದಿಂದ ಚಿಕ್ಕೇನಹಳ್ಳಿವರೆಗೆ 14.5 ಕಿ.ಮೀ ಹಾಗೂ ನಾಲ್ಕನೇ ದಿನ ಚಿಕ್ಕೇನಹಳ್ಳಿಯಿಂದ ರಾಮನಗರ ಟೌನ್‌ವರೆಗೆ 15 ಕಿ.ಮೀ. ಕ್ರಮಿಸಿತು. ಸಂಗಮದಿಂದ ಆರಂಭವಾದ 11 ದಿನದ ಪಾದಯಾತ್ರೆಯನ್ನು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದವರೆಗೆ ನಡೆಸಲು ಉದ್ದೇಶಿಸಲಾಗಿತ್ತು. ಒಟ್ಟಾರೆ 123 ಕಿ.ಮೀ. ಕ್ರಮಿಸಬೇಕಾಗಿತ್ತು.

ಇನ್ನಷ್ಟು ಸುದ್ದಿಗಳು | 4

ದ್ವೇಷ ಭಾಷಣ: ಜಿತೇಂದ್ರ ತ್ಯಾಗಿ ಬಂಧನ

ಡೆಹ್ರಾಡೂನ್ (ಪಿಟಿಐ): ಧರ್ಮ ಸಂಸದ್‌ನ ದ್ವೇಷ ಭಾಷಣ ಪ್ರಕರಣ ಸಂಬಂಧ ಗುರುವಾರ ಹರಿದ್ವಾರ ಜಿಲ್ಲೆಯ ರೂರ್ಕಿಯಲ್ಲಿ ಪೊಲೀಸರು ವಾಸೀಂ ರಿಜ್ವಿ ಅಲಿಯಾಸ್ ಜಿತೇಂದ್ರ ನಾರಾಯಣ ತ್ಯಾಗಿ ಅವರನ್ನು ಬಂಧಿಸಿದ್ದಾರೆ.

ಹಿಂದೂ ಧರ್ಮಕ್ಕೆ ಮತಾಂತರಗೊಂಡ ನಂತರ ರಿಜ್ವಿ, ಜಿತೇಂದ್ರ ನಾರಾಯಣ ತ್ಯಾಗಿ ಎಂದು ಹೆಸರು ಬದಲಿಸಿಕೊಂಡಿದ್ದರು. ಇವರು ಸೇರಿದಂತೆ ದ್ವೇಷ ಭಾಷಣ ಸಂಬಂಧಿಸಿದಂತೆ 10 ಮಂದಿ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಮತಾಂತರಕ್ಕೂ ಮುನ್ನ ಇವರು ಉತ್ತರ ಪ್ರದೇಶದ ಶಿಯಾ ವಕ್ಫ್ ಮಂಡಳಿಯ ಮುಖ್ಯಸ್ಥರಾಗಿದ್ದರು.

ತನಿಖೆ ಮುಂದುವರಿದಂತೆ ಇನ್ನಷ್ಟು ಜನರನ್ನು ಬಂಧಿಸಲಾಗುವುದು ಎಂದು ಹರಿದ್ವಾರದ ಎಸ್.ಪಿ.ತಿಳಿಸಿದ್ದಾರೆ. ದ್ವೇಷ ಭಾಷಣ ಪ್ರಕರಣ ಕುರಿತಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂಬ ಬಗ್ಗೆ ಉತ್ತರಾಖಂಡ ಸರ್ಕಾರದ ಮೇಲೆ ತೀವ್ರ ಒತ್ತಡವಿತ್ತು. ಕ್ರಮ ಜರುಗಿಸುವಲ್ಲಿ ವಿಳಂಬ ಧೋರಣೆ ಕುರಿತು ಸುಪ್ರೀಂ ಕೋರ್ಟ್ ಕೂಡಾ ತರಾಟೆಗೆ ತೆಗೆದುಕೊಂಡಿತ್ತು.





ರಾಜಾಜಿನಗರದ ಇಸ್ಕಾನ್‌ನಲ್ಲಿ ದೇವಾಲಯದ ಆಡಳಿತ ಮಂಡಳಿ ಸದಸ್ಯರ ಸಮ್ಮುಖದಲ್ಲಿ ವೈಕುಂಠ ಏಕಾದಶಿ ಆಚರಣೆ ಮಾಡಲಾಯಿತು (ಎಡ ಚಿತ್ರ), ವೈಕುಂಠ ಏಕಾದಶಿ ಪ್ರಯುಕ್ತ ವೈಯಾಲಿಕಾವಲ್‌ನ ತಿರುಪತಿ ತಿರುಮಲ ದೇಗುಲದಲ್ಲಿ ಭಕ್ತರು ಸರದಿಯಲ್ಲಿ ದೇವರ ದರ್ಶನ ಪಡೆದುಕೊಂಡರು – ಪ್ರಜಾವಾಣಿ ಚಿತ್ರಗಳು

ವೈಕುಂಠ ಏಕಾದಶಿ ಆಚರಣೆ • ಪ್ರಮುಖ ದೇವಾಲಯಗಳಲ್ಲಿ ಸಾರ್ವಜನಿಕರ ಪ್ರವೇಶ ನಿರ್ಬಂಧ

ನಗರದೆಲ್ಲೆಡೆ ಗೋವಿಂದ ನಾಮ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ಬಂಧದ ನಡುವೆಯೂ ನಗರದ ವಿವಿಧ ದೇವಾಲಯಗಳಲ್ಲಿ ಗುರುವಾರ ಶ್ರದ್ಧಾ ಭಕ್ತಿಯಿಂದ ವೈಕುಂಠ ಏಕಾದಶಿಯನ್ನು ಆಚರಿಸಲಾಯಿತು. ಇಸ್ಕಾನ್ ಸೇರಿದಂತೆ ಕೆಲ ದೇವಾಲಯಗಳಲ್ಲಿ ಆನ್‌ಲೈನ್ ದರ್ಶನಕ್ಕೆ ಮಾತ್ರ ಅವಕಾಶ ನೀಡಿದರೆ, ವೈಯಾಲಿಕಾವಲ್‌ನ ತಿರುಪತಿ ತಿರುಮಲ ದೇಗುಲ (ಟಿಟಿಡಿ) ಒಳಗೊಂಡಂತೆ ವಿವಿಧ ದೇವಾಲಯಗಳಲ್ಲಿ ಭಕ್ತರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು.

ಪುಷ್ಪಾಲಂಕಾರದಿಂದ ಕಂಗೊಳಿಸುತ್ತಿದ್ದ ದೇವಾಲಯಗಳು ಮುಂಜಾನೆಯೇ ಬಾಗಿಲು ತೆರೆದಿದ್ದವು. ವೈಕುಂಠ ದ್ವಾರದ ಮೂಲಕ ಸಾಗಿದ ಭಕ್ತರು, ದೇವರ ದರ್ಶನ ಪಡೆದರು. ಭಕ್ತರು ಸರದಿಯಲ್ಲಿ ಅಂತರ ಕಾಯ್ದುಕೊಳ್ಳಲು ದೇವಾಲಯಗಳ ಆವರಣದಲ್ಲಿ ಗುರುತು ಹಾಕಲಾಗಿತ್ತು. ವಿಷ್ಣುವಿಗೆ ಪ್ರಿಯವಾದ ತುಳಸಿ ಮಾಲೆಗಳ ಮಾರಾಟ ಮಳಿಗೆಗಳು ಎಲ್ಲ ದೇವಸ್ಥಾನಗಳ ಬಳಿ ಕಂಡುಬಂದವು.

ಮಹಾಲಕ್ಷ್ಮೀ ಲೇಔಟ್‌ನಲ್ಲಿರುವ ಶ್ರೀನಿವಾಸ ದೇವಸ್ಥಾನ, ಕೋಟೆ ವೆಂಕಟೇಶ್ವರಸ್ವಾಮಿ, ಶ್ರೀನಿವಾಸನಗರದ ಲಕ್ಷ್ಮೀವೆಂಕಟೇಶ್ವರ ದೇವಾಲಯ, ಜೆ.ಪಿ. ನಗರ ತಿರುಮಲಗಿರಿ ಲಕ್ಷ್ಮೀವೆಂಕಟೇಶ್ವರಸ್ವಾಮಿ ದೇವಸ್ಥಾನ, ಮಾಗಡಿ ರಸ್ತೆಯ ಎಂ.ಜಿ.ರೈಲ್ವೆ ಕಾಲೊನಿಯ ವೆಂಕಟೇಶ್ವರಸ್ವಾಮಿ ದೇವಸ್ಥಾನ, ಕೆಂಗೇರಿಯ ಬೆಟ್ಟನಪಾಳ್ಯದ ಸ್ತಂಭದ ಲಕ್ಷ್ಮೀರಂಗನಾಥಸ್ವಾಮಿ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಏಕಾದಶಿ ಆಚರಣೆ ಸರಳವಾಗಿ ನಡೆಯಿತು.

ವೆಂಕಟೇಶ್ವರನ ಮೂರ್ತಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ವೈಕುಂಠ ದ್ವಾರದ ಪೂಜೆ, ಅಷ್ಟೋತ್ತರ ಶತನಾಮಾವಳಿ ಸೇವೆ, ಮಂತ್ರ ಪುಷ್ಪ ಸೇವೆ, ಅಷ್ಟಾವಧಾನ ಸೇವೆ ಸೇರಿದಂತೆ ಬೆಳಿಗ್ಗೆಯಿಂದ ರಾತ್ರಿಯವರೆಗೆ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು. ಇಸ್ಕಾನ್, ಕೋಟೆ ವೆಂಕಟರಮಣ, ಜೆ.ಪಿ. ನಗರದ ತಿರುಮಲಗಿರಿ ದೇವಸ್ಥಾನ ಸೇರಿದಂತೆ ಕೆಲವು ದೊಡ್ಡ ದೇಗುಲಗಳಲ್ಲಿ ಈ ಬಾರಿ ಭಕ್ತರಿಗೆ ಪ್ರವೇಶ ನಿಷೇಧಿಸಲಾಗಿತ್ತು. ಹೀಗಾಗಿ, ಬಡಾವಣೆಗಳ ದೇವಾಲಯಗಳಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿತ್ತು.

ಪ್ರತಿ ವರ್ಷ ವೈಕುಂಠ ಏಕಾದಶಿಯಂದು ವೆಂಕಟೇಶ್ವರ ದೇವಾಲಯಗಳಲ್ಲಿ ಭಕ್ತರಿಗೆ ಪ್ರಸಾದವಾಗಿ ಲಡ್ಡು ವಿತರಣೆ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ಕೋವಿಡ್‌ನಿಂದಾಗಿ ಭಕ್ತರಿಗೆ ಪ್ರಸಾದ ವಿತರಣೆ ನಡೆಯಲಿಲ್ಲ. ಕೆಲವು ದೇವಾಲಯಗಳಲ್ಲಿ ಮನೆಗೆ ಕೊಂಡೊಯ್ಯಲು ಪೊಟ್ಟಣದಲ್ಲಿ ಲಡ್ಡುಗಳನ್ನು ನೀಡಲಾಯಿತು.

ಸೂರ್ಯ ರಶ್ಮಿ ಸ್ಪರ್ಶ ಇಂದು

ಮಕರ ಸಂಕ್ರಾಂತಿಯ ಮುನ್ನಾದಿನವಾದ ಶುಕ್ರವಾರ ಸಂಜೆ 5.14ಕ್ಕೆ ಸೂರ್ಯ ರಶ್ಮಿಯು ಗವಿಪುರದಲ್ಲಿರುವ ಗವಿಗಂಗಾಧರೇಶ್ವರ ದೇಗುಲದ ಶಿವಲಿಂಗವನ್ನು ಸ್ಪರ್ಶಿಸಲಿದೆ. ದಕ್ಷಿಣಾಯಣ ಪಥ ಮುಗಿಸಿ ಉತ್ತರಾಯಣಕ್ಕೆ ಸಾಗುವ ಸೂರ್ಯ, ತನ್ನ ಪಥ ಬದಲಿಸುವ ಸಂದರ್ಭದಲ್ಲಿ ಮೂರು ನಿಮಿಷಗಳು ಶಿವಲಿಂಗವನ್ನು ಆವರಿಸಲಿದ್ದಾನೆ. ದೇವಾಲಯವು ಈಗಾಗಲೇ ಸಿದ್ಧತೆಯನ್ನು ಮಾಡಿಕೊಂಡಿದ್ದು, ಕೋವಿಡ್ ಕಾರಣ ಈ ಬಾರಿ ಭಕ್ತಾದಿಗಳ ಪ್ರವೇಶಕ್ಕೆ ಅವಕಾಶವಿಲ್ಲ.

5 ಲಕ್ಷ ಮಂದಿ ವೀಕ್ಷಣೆ

ಇಸ್ಕಾನ್‌ನಲ್ಲಿ ಆನ್‌ಲೈನ್ ಮೂಲಕ ಧಾರ್ಮಿಕ ಕಾರ್ಯಕ್ರಮಗಳ ನೇರಪ್ರಸಾರ ವೀಕ್ಷಣೆಗೆ ವ್ಯವಸ್ಥೆ ಕಲ್ಪಿಸಲಾಗಿತ್ತು. ದೇವಾಲಯದಲ್ಲಿ ಬೆಳಿಗ್ಗೆ 3 ಗಂಟೆಗೆ ಶ್ರೀನಿವಾಸ ಗೋವಿಂದನಿಗೆ ಸುಪ್ರಭಾತ ಸೇವೆಯೊಂದಿಗೆ ಉತ್ಸವ ಪ್ರಾರಂಭವಾಯಿತು. ನಂತರ ವೇದ ಮಂತ್ರ ಪಠಣದೊಂದಿಗೆ ಪಂಚಾಮೃತ ಅಭಿಷೇಕ ನಡೆಯಿತು. ಉತ್ಸವ ಮೂರ್ತಿಗಳ ಮೆರವಣಿಗೆ, ಶ್ರೀಕೃಷ್ಣ, ರುಕ್ಮಿಣಿ ಮತ್ತು ಸತ್ಯಭಾಮೆ ಕಲ್ಯಾಣೋತ್ಸವ ಸೇರಿದಂತೆ ವಿವಿಧ ಆಚರಣೆಗಳು ನಡೆದವು. ದೇವಾಲಯದಲ್ಲಿ ನಡೆದ ಧಾರ್ಮಿಕ ಆಚರಣೆಯನ್ನು ಆನ್‌ಲೈನ್ ವೇದಿಕೆಯಲ್ಲಿ 5 ಲಕ್ಷಕ್ಕೂ ಅಧಿಕ ಮಂದಿ ವೀಕ್ಷಿಸಿದರು.

'ವಾಸಯೋಗ್ಯ ಪ್ರಮಾಣಪತ್ರ ಪಡೆಯದಿರುವುದು ಬಿಲ್ಡರ್ಸ್ ವೈಫಲ್ಯ'



ನವದೆಹಲಿ (ಪಿಟಿಐ): 'ವಾಸಯೋಗ್ಯ ಪ್ರಮಾಣಪತ್ರವನ್ನು ಪಡೆಯಲು ಕಟ್ಟಡ ನಿರ್ಮಾಣಗಾರರು(ಬಿಲ್ಡರ್ಸ್) ವಿಫಲವಾದರೆ, ಅವರು ತಮ್ಮ ಸೇವೆ ನೀಡುವಲ್ಲಿ ವಿಫಲರಾಗಿದ್ದಾರೆ ಎಂದೇ ಪರಿಗಣಿಸಬೇಕಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

1986ರ ಗ್ರಾಹಕ ಸಂರಕ್ಷಣೆ ಕಾಯ್ದೆಯಂತೆ, ವಾಸಯೋಗ್ಯ ಪ್ರಮಾಣಪತ್ರ ದೊರಕದ ಕಾರಣ ವಸತಿ ಖರೀದಿದಾರರು ಹೆಚ್ಚುವರಿ ತೆರಿಗೆ, ನೀರಿನ ಶುಲ್ಕ ಪಾವತಿಸಬೇಕಾಗಿ ಬಂದರೆ ಆ ಹೆಚ್ಚುವರಿ ವೆಚ್ಚವನ್ನು ಭರಿಸುವುದೂ ಕಟ್ಟಡ ನಿರ್ಮಾಣಗಾರನ ಹೊಣೆ ಎಂದು ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ಎ.ಎಸ್. ಬೋಪಣ್ಣ ಅವರಿದ್ದ ಪೀಠವು ಹೇಳಿದೆ.

ಕಟ್ಟಡ ನಿರ್ಮಾಣಗಾರನ ವೈಫಲ್ಯದಿಂದಾಗಿ ನಗರಸಭೆಗೆ ಪಾವತಿಸಿದ ಅಧಿಕ ಶುಲ್ಕವನ್ನು ವಾಪಸ್ ನೀಡಬೇಕು ಎಂಬ ಕುರಿತಂತೆ ಸಹಕಾರ ವಸತಿ ಸಂಘವೊಂದರ ದೂರು ವಜಾ ಮಾಡಿದ್ದ ಅರ್ಜಿಯ ವಿಚಾರಣೆ ವೇಳೆ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು. ಸಂಘದ ಅರ್ಜಿಯನ್ನು ರಾಷ್ಟ್ರೀಯ ಗ್ರಾಹಕ ವ್ಯಾಜ್ಯ ವೇದಿಕೆ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಸಂಘ ಮೇಲ್ಮನವಿ ಸಲ್ಲಿಸಿತ್ತು.

'ಇದು ಸಹಜವಾದ ತೆರಿಗೆ ಸಂಗ್ರಹ ಪ್ರಕ್ರಿಯೆ. ಗ್ರಾಹಕ ವ್ಯಾಜ್ಯವಲ್ಲ' ಎಂದು ಅರ್ಜಿಯ ವಜಾಗೊಳಿಸುವಾಗ ಗ್ರಾಹಕ ವ್ಯಾಜ್ಯ ವೇದಿಕೆಯು ತಿಳಿಸಿತ್ತು. 'ಕಟ್ಟಡ ನಿರ್ಮಾಣಗಾರರು ಅಗತ್ಯ ಪ್ರಮಾಣಪತ್ರ ಪಡೆಯಲು ವಿಫಲರಾಗಿದ್ದಾರೆ. ಹೀಗಾಗಿ, ವಸತಿ ಮಾಲೀಕರು ವಿದ್ಯುತ್ ಮತ್ತು ನೀರು ಶುಲ್ಕ ಪಡೆಯಲಾಗುತ್ತಿಲ್ಲ' ಎಂದು ಸಂಘ ದೂರು ಸಲ್ಲಿಸಿತ್ತು.

ಗ್ರಾಹಕ ವ್ಯಾಜ್ಯ ವೇದಿಕೆಯ ಆದೇಶವನ್ನು ತಳ್ಳಿಹಾಕಿದ ಸುಪ್ರೀಂಕೋರ್ಟ್, ಅರ್ಜಿದಾರರು ಈ ಸಂಬಂಧ ಅಧಿಕ ಶುಲ್ಕ ವಿಧಿಸುತ್ತಿರುವ ಸಂಬಂಧಿತ ಸ್ಥಳೀಯ ಸಂಸ್ಥೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಬೇಕು ಎಂದು ತಿಳಿಸಿತು.

ನಟ ಅರ್ಜುನ್ ಸರ್ಜಾ ವಿರುದ್ಧ ದಾಖಲಾಗಿದ್ದ ಪ್ರಕರಣ

ಲೈಂಗಿಕ ದೌರ್ಜನ್ಯ: 'ಬಿ-ರಿಪೋರ್ಟ್' ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟಿ ಶ್ರುತಿ ಹರಿಹರನ್ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ' ಆರೋಪದಡಿ ನಟ ಅರ್ಜುನ್ ಸರ್ಜಾ ವಿರುದ್ಧ ದಾಖಲಾಗಿದ್ದ ಪ್ರಕರಣದಲ್ಲಿ ಸಲ್ಲಿಸಿದ್ದ 'ಬಿ-ರಿಪೋರ್ಟ್' ಅನ್ನು ನ್ಯಾಯಾಲಯ ಗುರುವಾರ ಅಂಗೀಕರಿಸಿದೆ.

2018ರಲ್ಲಿ ಸಂತ್ರಸ್ತೆ ಶ್ರುತಿ ಅವರು ನೀಡಿದ್ದ ದೂರು ಆಧರಿಸಿ ಸಂಜ್ಞೆ ಮೂಲಕ ಮಹಿಳೆ ಗೌರವಕ್ಕೆ ಧಕ್ಕೆ (354,509) ಲೈಂಗಿಕ ಕಿರುಕುಳ (ಐಪಿಸಿ 354ಎ) ಹಾಗೂ ಜೀವಬೆದರಿಕೆ (ಐಪಿಸಿ 506) ಆರೋಪದಡಿ ಅರ್ಜುನ್ ಸರ್ಜಾ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

'ವಿಸ್ಮಯ ಸಿನಿಮಾ ಚಿತ್ರೀಕರಣದ ವೇಳೆ ಲೈಂಗಿಕ ದೌರ್ಜನ್ಯ ನಡೆದಿದೆ' ಎಂದು ಶ್ರುತಿ ಆರೋಪಿಸಿದ್ದರು. ಅರ್ಜುನ್ ಸರ್ಜಾ ಹಾಗೂ ಹಲವರನ್ನು ವಿಚಾರಣೆ ನಡೆಸಿದ್ದ ಕಬ್ಬನ್ ಪಾರ್ಕ್ ಪೊಲೀಸರು, 'ಆರೋಪ ಸಾಬೀತುಪಡಿಸುವ ಯಾವುದೇ ಪುರಾವೆಗಳು ಸಿಕ್ಕಿಲ್ಲ' ಎಂದು ಅಭಿಪ್ರಾಯಪಟ್ಟು ನ್ಯಾಯಾಲಯಕ್ಕೆ 'ಬಿ-ರಿಪೋರ್ಟ್' ಸಲ್ಲಿಸಿದ್ದರು.

ನೋಟಿಸ್‌ಗೆ ಪ್ರತಿಕ್ರಿಯಿಸದ ಶ್ರುತಿ: ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡಿದ್ದ 8ನೇ ಎಸಿಎಂಎಂ ನ್ಯಾಯಾಲಯ, ಬಿ-ರಿಪೋರ್ಟ್ ಸಲ್ಲಿಕೆಯಾದ ಬಗ್ಗೆ ಶ್ರುತಿ ಹರಿಹರನ್ ಅವರಿಗೆ ನೋಟಿಸ್ ನೀಡಿತ್ತು.

'ನೀವು ನೀಡಿದ್ದ ದೂರಿನಡಿ ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಪುರಾವೆಗಳಿಲ್ಲವೆಂದು ಪೊಲೀಸರು ಹೇಳುತ್ತಿದ್ದಾರೆ. ಈ ಬಗ್ಗೆ ಬಿ-ರಿಪೋರ್ಟ್ ಸಹ ಸಲ್ಲಿಸಿದ್ದಾರೆ. ಈ ಬಗ್ಗೆ ಆಕ್ಷೇಪಣೆಗಳಿದ್ದರೆ, ನ್ಯಾಯಾಲಯಕ್ಕೆ ಹಾಜರಾಗಿ ವಾದ ಮಂಡಿಸಬಹುದು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿತ್ತು.

ನೋಟಿಸ್ ಸ್ವೀಕರಿಸಿದ್ದ ಶ್ರುತಿ, ನಿಗದಿತ ದಿನದಂದು ನ್ಯಾಯಾಲಯಕ್ಕೆ ಹಾಜರಾಗಿಲ್ಲ. ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿಲ್ಲ. ಹೀಗಾಗಿ, ಪೊಲೀಸರ ಬಿ-ರಿಪೋರ್ಟ್ ಅನ್ನು ನ್ಯಾಯಾಲಯ ಗುರುವಾರ ಮಾನ್ಯ ಮಾಡಿದೆ.

ಕಳವು ಪ್ರಕರಣ: ಪೊಲೀಸ್ ಅಧಿಕಾರಿಯ ಸಾಹಸಕ್ಕೆ ಪ್ರಶಂಸೆ

ಸಿನಿಮೀಯ ರೀತಿಯಲ್ಲಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ಸಿನಿಮೀಯ ರೀತಿಯಲ್ಲಿ, ಕಳ್ಳನ ಬೆನ್ನಟ್ಟಿ ಆತನನ್ನು ಬಂಧಿಸಿದ ಘಟನೆಯ ವಿಡಿಯೊ ವೈರಲ್ ಆಗಿದ್ದು, ಅವರ ಸಾಹಸಕ್ಕೆ ಪ್ರಶಂಸೆ ವ್ಯಕ್ತವಾಗಿದೆ.



ಸ್ಟೇಟ್‌ಬ್ಯಾಂಕ್ ಬಳಿ ಬುಧವಾರ ಮಧ್ಯಾಹ್ನ ಈ ಘಟನೆ ನಡೆದಿದೆ. ಎಎಸ್‌ಐ ವರುಣ್ ಈ ಮೂಲಕ ನಗರದ ಪ್ರಮುಖ ಸ್ಥಳಗಳಲ್ಲಿ ಪಿಕ್ ಪಾಕೆಟ್, ಮೊಬೈಲ್ ಕಳವು ಮಾಡುತ್ತಿದ್ದ ತಂಡದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮುಖ್ಯಾಂಶಗಳು

- ಪಿಕ್ ಪಾಕೆಟ್, ಮೊಬೈಲ್ ಕಳವು ಮಾಡುತ್ತಿದ್ದ ತಂಡ
- ಪಾಂಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲು
- ಎಎಸ್‌ಐ ವರುಣ್ ಅವರಿಗೆ ಬಹುಮಾನ: ಕಮಿಷನರ್

'ನೀರುಮಾರ್ಗ ಹರೀಶ್ ಪೂಜಾರಿ (32), ಅತ್ತಾವರ ನಿವಾಸಿ ಶಮಂತ (20) ಬಂಧಿತರು. ಕ್ಷಿಪ್ರ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಕಮಿಷನರೇಟ್ ಕಚೇರಿಯ ಎಎಸ್‌ಐ ವರುಣ್ ಅವರನ್ನು ಗೌರವಿಸಿ, ಬಹುಮಾನ ನೀಡಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಘಟನೆ ವಿವರ: ಮಂಗಳೂರು ನಗರ ಪೊಲೀಸ್ ಕಮಿಷನರ್ ಕಚೇರಿಯ ಮುಂಭಾಗದಲ್ಲಿರುವ ನೆಹರೂ ಮೈದಾನದಲ್ಲಿ ರಾಜಸ್ಥಾನದ ಡೋಲಾಪುರ ನಿವಾಸಿ ಪ್ರೇಮ್ ನಾರಾಯಣ ತ್ಯಾಗಿ ಎಂಬುವರ ಮೊಬೈಲ್ ಕಳವಾಗಿದೆ. ಪ್ರೇಮ್ ನಾರಾಯಣ ಅವರು ಕೂಡಲೇ ಹತ್ತಿರದಲ್ಲೇ ಅನುಮಾನಾಸ್ಪದವಾಗಿ ಹೋಗುತ್ತಿದ್ದ ವ್ಯಕ್ತಿಯನ್ನು ಬೆನ್ನಟ್ಟಿದ್ದಾರೆ. ಒಬ್ಬರ ಹಿಂದೆ ಮತ್ತೊಬ್ಬರು ಓಡುವುದನ್ನು ಕಂಡು ಸಮೀಪದಲ್ಲೇ ಇದ್ದ ಎಎಸ್‌ಐ ವರುಣ್ ಕಾರ್ಯಾಚರಣೆಗೆ ಇಳಿಸಿದ್ದಾರೆ. ಹ್ಯಾಮಿಲ್ಟನ್ ಸರ್ಕಲ್ ಬಳಿ ವರುಣ್ ಅವರು ಆರೋಪಿ ಹರೀಶ್ ಪೂಜಾರಿಯನ್ನು ನೆಲಕ್ಕೆ ಕೆಡವಿ ಬಂಧಿಸಿದ್ದಾರೆ.

ಕಳವಾದ ಮೊಬೈಲ್ ಹರೀಶ್‌ನ ಕೈಯಲ್ಲಿ ಇರಲಿಲ್ಲ. ಆದರೂ, ಆತನನ್ನು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಕೃತ್ಯದಲ್ಲಿ ಮತ್ತಿಬ್ಬರು ಭಾಗಿಯಾಗಿರುವುದು ಗೊತ್ತಾಗಿದೆ. ಕಳವಾದ ಮೊಬೈಲ್ ಕೂಡ ಅವರ ಬಳಿ ಇರುವುದಾಗಿ ಹರೀಶ್ ತಿಳಿಸಿದ್ದ. ಈ ಮಾಹಿತಿಯ ಆಧಾರದಲ್ಲಿ ರೈಲ್ವೆ ಸ್ಟೇಷನ್ ಬಳಿಯಿಂದ ಮತ್ತೊಬ್ಬ ಆರೋಪಿ ಶಮಂತ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಮತ್ತೊಬ್ಬ ಆರೋಪಿ ರಾಜೇಶ್ ಪರಾರಿಯಾಗಿದ್ದಾನೆ. ಆರೋಪಿಗಳಿಂದ ಮೊಬೈಲ್ ಅನ್ನು ವಶಕ್ಕೆ ಪಡೆಯಲಾಗಿದೆ. ಪಾಂಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಶಶಿಕುಮಾರ್ ತಿಳಿಸಿದ್ದಾರೆ.

ಸದ್ಯ ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಘಟನೆಯ ವಿಡಿಯೊವನ್ನು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಕೂಡ ಟ್ವಿಟ್ಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ಹಳಿ ತಪ್ಪಿದ ರೈಲು ಐವರ ಸಾವು

ನವದೆಹಲಿ/ಗುವಾಹಟಿ (ಪಿಟಿಐ): ಪಶ್ಚಿಮ ಬಂಗಾಳ ಜಲಪೈಗುಡಿ ಜಿಲ್ಲೆಯ ದೊಮೊಹಾನಿ ಬಳಿ ಬಿಕಾನೇರ್–ಗುವಾಹಟಿ ಎಕ್ಸ್‌ಪ್ರೆಸ್ ರೈಲು ಗುರುವಾರ ಹಳಿ ತಪ್ಪಿದ ಪರಿಣಾಮ ಕನಿಷ್ಠ ಐವರು ಮೃತಪಟ್ಟು, 45 ಜನರು ಗಾಯಗೊಂಡಿದ್ದಾರೆ. 'ಮೂವರು ಸ್ಥಳದಲ್ಲಿಯೇ ಸಾವಿಗೀಡಾಗಿದ್ದರೆ, ಇಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ' ಎಂದು ಜಿಲ್ಲಾಧಿಕಾರಿ ಮೌಮಿತಾ ಗೋಡಾರಬಸು ತಿಳಿಸಿದ್ದಾರೆ.

ಭಾರತ–ಚೀನಾ ಗಡಿ ಬಿಕ್ಕಟ್ಟು: ಫಲ ನೀಡದ ಚರ್ಚೆ

ನವದೆಹಲಿ (ಪಿಟಿಐ): ಗಡಿ ಬಿಕ್ಕಟ್ಟು ಬಗೆಹರಿಸಲು ಭಾರತ ಮತ್ತು ಚೀನಾ ನಡುವೆ ಸೇನಾ ಹಂತದಲ್ಲಿ ಗುರುವಾರ ನಡೆದ 14ನೇ ಸುತ್ತಿನ ಚರ್ಚೆಯಲ್ಲಿ ಯಾವುದೇ ಪ್ರಗತಿ ಕಂಡಿಲ್ಲ. ಈ ಬಗ್ಗೆ ಉಭಯ ದೇಶಗಳು ಹೇಳಿಕೆ ನೀಡಿವೆ.

ಪರಸ್ಪರ ಒಪ್ಪಿತ ನಿರ್ಣಯ ಕೈಗೊಳ್ಳಲು ಹಾಗೂ ಆದಷ್ಟು ಶೀಘ್ರ ಪರಿಹಾರವನ್ನು ಕಂಡುಕೊಳ್ಳಲು ನಿಕಟ ಬಾಂಧವ್ಯ ಹೊಂದಲು ಉಭಯ ದೇಶಗಳು ಸಮ್ಮತಿಸಿದವು ಎಂದು ಹೇಳಿಕೆ ತಿಳಿಸಿದೆ.

ಭಾರತ ಸೇನೆಯ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಅವರು ಬುಧವಾರ, ಪೂರ್ವ ಲಡಾಖ್‌ನಲ್ಲಿ ನಿಯೋಜಿಸಿರುವ ಸೇನೆ ಹಿಂಪಡೆಯುವ ಬಗ್ಗೆ 14ನೇ ಸುತ್ತಿನ ಮಾತುಕತೆಯಲ್ಲಿ ಫಲ ಸಿಗಬಹುದು ಎಂದು ವಿಶ್ವಾಸ ವ್ಯಕ್ತಪಡಿಸಿದ್ದರು.

ಭಾರತ–ಚೀನಾ ನಡುವಣ ಸೇನಾ ಹಂತದ ಮಾತುಕತೆಯು ಚುಶುಲ್ – ಮೊಲ್ಡೊ ಗಡಿಯಲ್ಲಿ, ಚೀನಾಗೆ ಹೊಂದಿಕೊಂಡ ಭಾಗದಲ್ಲಿ ಮಾತುಕತೆ ನಡೆಯಿತು. ರಕ್ಷಣಾ ಇಲಾಖೆ, ವಿದೇಶಾಂಗ ವ್ಯವಹಾರಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು ಎಂದು ಜಂಟಿ ಹೇಳಿಕೆ ತಿಳಿಸಿದೆ.

ಉಭಯ ಬಣಗಳ ನಡುವೆ ಮುಕ್ತ ಮತ್ತು ಆಳವಾದ ಮಾತುಕತೆ ನಡೆಯಿತು. ದೇಶದ ನಾಯಕರು ನೀಡುವ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಲು ಒಪ್ಪಲಾಯಿತು ಎಂದೂ ಹೇಳಿಕೆಯು ಉಲ್ಲೇಖಿಸಿದೆ.

ಮಗು ಎಂದರೆ ಚರಾಸ್ತಿಯಲ್ಲ: ಹೈಕೋರ್ಟ್

ಮಗುವಿನ ಕಸ್ಟಡಿ: ತಾಯಿಗೆ ₹ 50 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ವ್ಯಾಜ್ಯವೊಂದರಲ್ಲಿ ಮಗು ತನ್ನ ಬಳಿಯೇ ಇರಬೇಕೆಂದು ಹಟ ಹಿಡಿದಿದ್ದ ತಾಯಿಗೆ ಹೈಕೋರ್ಟ್ ₹ 50 ಸಾವಿರ ದಂಡ ವಿಧಿಸಿ ಬುದ್ಧಿಮಾತು ಹೇಳಿದೆ.

ಈ ಕುರಿತಂತೆ ಮಗುವಿನ ತಾಯಿ ಸಲ್ಲಿಸಿದ್ದ ಎಂಎಫ್‌ಎ (ಮಿಸಲೇನಿಯಸ್ ಫಸ್ಟ್ ಅಪೀಲ್) ಅನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವೀರಪ್ಪ ಹಾಗೂ ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠವು ವಜಾಗೊಳಿಸಿ ಆದೇಶಿಸಿದೆ.



'ಅರ್ಜಿದಾರ ತಾಯಿಯು, ದಂಡದ ಹಣವನ್ನು ನಾಲ್ಕು ವಾರಗಳ ಒಳಗಾಗಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸಬೇಕು. ತಪ್ಪಿದರೆ ಮಹಿಳೆಯ ವಿರುದ್ಧ ಪ್ರಾಧಿಕಾರವು ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಬಹುದು' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

'ಮಗು ಎಂದರೆ ಚರಾಸ್ತಿಯಲ್ಲ. ಹಾಗೇನಾದರೂ ಒಂದು ವೇಳೆ ತಂದೆ-ತಾಯಿ ಆ ರೀತಿ ಭಾವಿಸಿ, ವರ್ತಿಸಿದ್ದೇ ಆದರೆ ಅದು ಸಂವಿಧಾನಾತ್ಮಕವಾಗಿ ಕೊಡಮಾಡಿದ 21ನೇ ವಿಧಿಯ ಅನುಸಾರ ಮಗುವಿನ ಹಕ್ಕಿನ ಉಲ್ಲಂಘನೆಯಾಗುತ್ತದೆ' ಎಂದು ಅಭಿಪ್ರಾಯಪಟ್ಟಿದೆ.

'ಮಗು ವಾಸವಿಲ್ಲದ ವ್ಯಾಪ್ತಿಯ ಜಿಲ್ಲಾ ನ್ಯಾಯಾಲಯಕ್ಕೆ ಮಗುವಿನ ಸುಪರ್ದಿ ವಿಚಾರ ತೀರ್ಮಾನಿಸುವ ಅಧಿಕಾರ ಇರುವುದಿಲ್ಲ' ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವೇನು?: ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿದ ಸಾಫ್ಟ್‌ವೇರ್ ಉದ್ಯೋಗಿ ದಂಪತಿ 2008ರ ನವೆಂಬರ್ 30ರಂದು ಮದುವೆಯಾಗಿ ಕೆನಡಾಕ್ಕೆ ತೆರಳಿದ್ದರು. 2011ರ ಡಿಸೆಂಬರ್ 11ರಂದು ಕೆನಡಾದಲ್ಲಿ ದಂಪತಿಗೆ ಹೆಣ್ಣು ಮಗು ಜನಿಸಿತ್ತು.

ಇಬ್ಬರ ನಡುವಿನ ವೈಮನಸ್ಯದಿಂದ ದಾಂಪತ್ಯದಲ್ಲಿ ಬಿರುಕು ಉಂಟಾಗಿತ್ತು. ಇದರಿಂದಾಗಿ ಭಾರತಕ್ಕೆ ಮರಳಿ ಬೆಂಗಳೂರಿನಲ್ಲೇ ನೆಲೆಸಿರುವ ಮಗುವಿನ ತಾಯಿ ಇಲ್ಲಿನ ಕೌಟುಂಬಿಕ ನ್ಯಾಯಾಲಯದಲ್ಲಿ ಮಗುವಿನ ಕಸ್ಟಡಿಗೆ ಕೋರಿ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ್ದ ಬೆಂಗಳೂರಿನ 1ನೇ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯ, 'ಮಗು ಕೆನಡಾದ ಪೌರತ್ವ ಪಡೆದಿದೆ. ಆದ ಕಾರಣ ಅದರ ಸುಪರ್ದಿ ವಿಚಾರವನ್ನು ತೀರ್ಮಾನಿಸುವ ಅಧಿಕಾರ ವ್ಯಾಪ್ತಿ ತನಗಿಲ್ಲ' ಎಂದು 2021ರ ಫೆಬ್ರುವರಿ 4ರಂದು ವಜಾಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ತಾಯಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಮತ್ತೆ ರಾಮನಗರದಿಂದಲೇ ಪಾದಯಾತ್ರೆ ಮುಂದುವರಿಸುತ್ತೇವೆ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್

ಜನಹಿತಕ್ಕಾಗಿ ಪಾದಯಾತ್ರೆ ಸ್ಥಗಿತ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ



ರಾಮನಗರ ಕಾಂಗ್ರೆಸ್ ಕಚೇರಿ ಮುಂಭಾಗ ಗುರುವಾರ ನೆರೆದಿದ್ದ ಪಕ್ಷದ ಕಾರ್ಯಕರ್ತರು –ಪ್ರಜಾವಾಣಿ ಚಿತ್ರ



ರಾಮನಗರದ ಐಜೂರು ವೃತ್ತದಲ್ಲಿ ಪಾದಯಾತ್ರೆ ತಡೆಯಲು ಸಜ್ಜಾಗಿದ್ದ ಪೊಲೀಸರು

ರಾಮನಗರ: 'ರಾಜ್ಯದ ಜನರ ಆರೋಗ್ಯದ ಹಿತದೃಷ್ಟಿಯಿಂದ ಮೇಕೆದಾಟು ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಮುಂದೂಡುತ್ತಿದ್ದೇವೆ. ಬಿಜೆಪಿಗೆ ಹೆದರಿ ಈ ನಿರ್ಧಾರಕ್ಕೆ ಬಂದಿಲ್ಲ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ನಾವು ಎರಡು ತಿಂಗಳ ಹಿಂದೆ ಪಾದಯಾತ್ರೆ ಘೋಷಿಸಿದಾಗ ಕೊರೊನಾ ಹಾವಳಿ ಇರಲಿಲ್ಲ. ಹೀಗಾಗಿ, ಪಾದಯಾತ್ರೆ ಆರಂಭಿಸಿದೆವು. ಈಗ ಕೋವಿಡ್ ಪ್ರಕರಣಗಳು ಹೆಚ್ಚಾದ ಕಾರಣ ಇಲ್ಲಿಗೆ ನಿಲ್ಲಿಸುತ್ತಿದ್ದೇವೆ. ನ್ಯಾಯಾಲಯದ ಸೂಚನೆಗೂ ಗೌರವ ಕೊಟ್ಟಿದ್ದೇವೆ. ಮುಂದೆ ಇದೇ ನೆಲದಿಂದ ಮತ್ತೆ ಪಾದಯಾತ್ರೆ ಮುಂದುವರಿಯಲಿದೆ' ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬಿಜೆಪಿ ಸರ್ಕಾರ ನಮ್ಮ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿದೆ. ನಿಷ್ಪಕ್ಷಪಾತವಾಗಿ ವರ್ತಿಸಿಲ್ಲ. ನಮ್ಮ ಪಾದಯಾತ್ರೆಯನ್ನು ಹೇಗಾದರೂ ಮಾಡಿ ನಿಲ್ಲಿಸಬೇಕು ಎಂಬುದು ಅವರ ಉದ್ದೇಶ ಆಗಿತ್ತು. ಅದಕ್ಕಾಗಿ ದಿನಕ್ಕೊಂದು ಆದೇಶ ಹೊರಡಿಸುತ್ತಿದ್ದರು. ಇದೆಲ್ಲದರ ಹೊರತಾಗಿಯೂ ನಮಗೆ ಜನರ ಹಿತ ಮುಖ್ಯ. ರಾಜ್ಯದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 15 ಸಾವಿರಕ್ಕೆ ಏರಿಕೆ ಆಗಿದ್ದರೆ ಅದಕ್ಕೆ ಕಾಂಗ್ರೆಸ್ ಕಾರಣ ಅಲ್ಲ. ದೇಶದಲ್ಲಿಯೇ ಈಗ ಸೋಂಕಿತರ ಸಂಖ್ಯೆ ಏರುಗತಿಯಲ್ಲಿ ಇದೆ' ಎಂದು ಸ್ಪಷ್ಟನೆ ನೀಡಿದರು.

ರಾಜ್ಯದಲ್ಲಿ ಸೋಂಕು ಹೆಚ್ಚಾಗಲು ಬಿಜೆಪಿ ಕಾರಣವೇ ಹೊರತು ಕಾಂಗ್ರೆಸ್ ಅಲ್ಲ. ಬಿಜೆಪಿ ನಾಯಕರೇ ಹಲವಾರು ಕಾರ್ಯಕ್ರಮಗಳನ್ನು ಮಾಡಿದರು. ಈಗ ಜನರ ಮುಂದೆ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಟೀಕಿಸಿದರು.

ಸರ್ಕಾರಕ್ಕೂ ಆಸೆ ಇದೆ: 'ನಿನ್ನೆ ರಾತ್ರಿ ಅಧಿಕಾರಿಗಳು ನಮ್ಮ ಮನೆ ಬಾಗಿಲಿಗೆ ಜಿಲ್ಲಾಧಿಕಾರಿ ಪತ್ರ ಎಂದು ಕೊಡಲು ಬಂದರು. ಜಿಲ್ಲಾಧಿಕಾರಿಗೆ ಕೋವಿಡ್ ಬಂದಿದೆಯಲ್ಲ, ಈಗ ಯಾಕೆ ಬಂದಿದ್ದೀರಿ ಎಂದು ಹೇಳಿ ಕಳುಹಿಸಿದೆ. ನಂತರ ಸರ್ಕಾರದ ನೋಟಿಸ್ ನೋಡಿದೆ. ಅದರಲ್ಲಿ ಪಾದಯಾತ್ರೆ ರದ್ದು ಮಾಡಬೇಕು ಎಂದು ಇತ್ತು. ಇನ್ನು ನಮ್ಮ ಪಕ್ಷದ ಜಿಲ್ಲಾ ಅಧ್ಯಕ್ಷರಿಗೆ ನೀಡಿದ ಅನುಮತಿಯಲ್ಲಿ ಜನರಿಗೆ ತೊಂದರೆಯಾಗದಂತೆ ಪಾದಯಾತ್ರೆ ಮಾಡಿ ಎಂದು ಹೇಳಲಾಗಿತ್ತು' ಎಂದರು.

ಪೊಲೀಸರಿಗೆ ಬರೆದ ಪತ್ರದಲ್ಲಿ ವ್ಯವಸ್ಥಿತವಾಗಿ ಅವಕಾಶ ಮಾಡಿಕೊಡಿ ಎಂದೂ ಹೇಳಿತ್ತು. ಆ ಮೂಲಕ ಈ ಪಾದಯಾತ್ರೆ ನಡೆಯಲಿ ಎಂಬ ಆಸೆ ಸರ್ಕಾರಕ್ಕೂ ಇದೆ. ಆದರೂ ನಿಮ್ಮ ಮುಂದೆ ಬೇರೆಯದೇ ಹೇಳುತ್ತಿದ್ದಾರೆ ಎಂದರು.

'ಹೆಚ್ಚಿನ ಜನ ಭಾಗವಹಿಸಲು ಅವಕಾಶವಾಗದಿದ್ದರೂ ನಾವಿಬ್ಬರೇ ನಡೆಯಬೇಕು ಎಂದು ಮೊದಲು ಅಂದುಕೊಂಡಿದ್ದೆವು. ನಾವು ಹೋಗುವಾಗ ಜನ ಸೇರುತ್ತಿದ್ದಾರೆ. ಇದರಿಂದ ಮತ್ತೆ ಗುಂಪು ಸೃಷ್ಟಿಯಾಗುತ್ತದೆ ಎಂಬ ಕಾರಣಕ್ಕೆ ಕೈಬಿಟ್ಟೆವು' ಎಂದರು.

'ಈಗಲಾದರೂ ಪಕ್ಷಪಾತ ಮಾಡದೇ ಕಾನೂನು ಉಲ್ಲಂಘನೆ ಮಾಡಿರುವ ಎಲ್ಲರ ವಿರುದ್ಧವೂ ಕ್ರಮ ಕೈಗೊಳ್ಳಿ, ನಿಮ್ಮ ಧೈರ್ಯ ಪ್ರದರ್ಶಿಸಿ' ಎಂದು ಸವಾಲು ಹಾಕಿದರು.

> **ಇದು ಪಾದಯಾತ್ರೆಯ ಅಂತ್ಯ ಅಲ್ಲ, ಅಲ್ಪವಿರಾಮ. ಕೋವಿಡ್ ಮೂರನೇ ಅಲೆ ಕಡಿಮೆಯಾದ ಬಳಿಕ ಮತ್ತೆ ಮುಂದುವರಿಸುತ್ತೇವೆ. ಕಾರ್ಯಕರ್ತರು ಉತ್ಸಾಹ ಕಳೆದುಕೊಳ್ಳಬಾರದು**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

'ಕಾಂಗ್ರೆಸ್‌ಗೆ ತಪ್ಪಿನ ಅರಿವು'

ಬೆಂಗಳೂರು: 'ಕಾಂಗ್ರೆಸ್‌ಗೆ ಕೊನೆಗೂ ತನ್ನ ತಪ್ಪಿನ ಅರಿವಾಗಿ ಪಾದಯಾತ್ರೆಯನ್ನು ನಿಲ್ಲಿಸಿರುವುದು ಒಳ್ಳೆಯದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

'ಮೇಕೆದಾಟು ಯೋಜನೆಯನ್ನು ಯಾರೊಬ್ಬರೂ ವಿರೋಧಿಸಿಲ್ಲ. ಹೀಗಾಗಿ ಕೆಪಿಸಿಸಿ ಅಧ್ಯಕ್ಷರು ಸರ್ಕಾರಕ್ಕೆ ಸಹಕರಿಸಬೇಕಿತ್ತು. ಯೋಜನೆಯನ್ನು ಸರ್ಕಾರ ಬೇಡ ಅಂದಿದ್ದರೆ ಹೋರಾಟದ ಪ್ರಶ್ನೆ ಉದ್ಭವಿಸುತ್ತಿತ್ತು' ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.


'ಡಿ.ಕೆ.ಶಿವಕುಮಾರ್ ಅವರಿಗೆ ಯೋಜನೆ ಬಗೆಗಿನ ಕಾಳಜಿಗಿಂತಲೂ ತಮ್ಮ ಪಕ್ಷವನ್ನು ಹೈಜಾಕ್ ಮಾಡಿ, ಸಿದ್ದರಾಮಯ್ಯ ಅವರನ್ನು ಮೂಲೆಗುಂಪು ಮಾಡುವ ಕಾರ್ಯಸೂಚಿ ಇತ್ತು. ಇದಕ್ಕಾಗಿ ಅವರು ಪಾದಯಾತ್ರೆ ನೆಪ ಹುಡುಕಿಕೊಂಡಿದ್ದರು ಅಷ್ಟೇ' ಎಂದು ವ್ಯಂಗ್ಯವಾಡಿದ್ದಾರೆ.

ನಿರ್ದೇಶಕ ಗಿರೀಶ್ ಕಾಸರವಳ್ಳಿಗೆ 'ವಿಶ್ವಪ್ರಭಾ' ಪುರಸ್ಕಾರ

ಉಡುಪಿ: ಇಲ್ಲಿಯ ಸಂಸ್ಕೃತಿ ವಿಶ್ವ ಪ್ರತಿಷ್ಠಾನ ಕೊಡಮಾಡುವ 'ವಿಶ್ವಪ್ರಭಾ' ಪುರಸ್ಕಾರಕ್ಕೆ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಸಂಚಾಲಕ ಎಚ್.ಪಿ. ರವಿರಾಜ್ ತಿಳಿಸಿದ್ದಾರೆ.

ಜ.31ರಂದು ಉಡುಪಿಯ ಎಂಜಿಎಂ ಕಾಲೇಜಿನ ಮುದ್ದಣ ಮಂಟಪದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹1 ಲಕ್ಷ ಹಾಗೂ ಫಲಕ ಒಳಗೊಂಡಿದೆ. ಕನ್ನಡ, ನಾಡು-ನುಡಿ, ಸಂಸ್ಕೃತಿಗೆ ಅನನ್ಯ ಸೇವೆ ಸಲ್ಲಿಸಿರುವ ಕಲಾವಿದರಿಗೆ ಉಡುಪಿ ವಿಶ್ವನಾಥ ಶೆಣೈ ಹಾಗೂ ಪ್ರಭಾವತಿ ವಿಶ್ವನಾಥ ಶೆಣೈ ಪ್ರಾಯೋಜಕತ್ವದಲ್ಲಿ ಪ್ರತಿವರ್ಷ 'ವಿಶ್ವಪ್ರಭಾ ಪುರಸ್ಕಾರ' ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಗಿರೀಶ್ ಕಾಸರವಳ್ಳಿ ಸಿನಿಮಾಗಳು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಪಡೆದುಕೊಂಡಿವೆ. 'ಸ್ವರ್ಣಕಮಲ' ಪ್ರಶಸ್ತಿಯನ್ನು ಸಹ ಪಡೆದಿರುವ ಕಾಸರವಳ್ಳಿ ಸಾಧನೆ ಅಸಾಧಾರಣ ಎಂದು ತಿಳಿಸಿದ್ದಾರೆ.



ಸಕ್ಕರೆ ಕಾರ್ಖಾನೆಯಲ್ಲಿ ಬೆಂಕಿ ಅವಘಡ: ಒಬ್ಬ ಸಾವು

ಕೆರೂರ (ಬಾಗಲಕೋಟೆ ಜಿಲ್ಲೆ): ಇಲ್ಲಿಗೆ ಸಮೀಪದ ಕೆರಕಲಮಟ್ಟಿ ಗ್ರಾಮದ ಸಚಿವ ಮುರುಗೇಶ ನಿರಾಣಿ ಅವರ ಒಡೆತನದ ಸಾಯಿಪ್ರಿಯಾ ಯುನಿಟ್-3 (ಹಳೆಯ ಕೇದಾರನಾಥ) ಸಕ್ಕರೆ ಕಾರ್ಖಾನೆಯಲ್ಲಿ ಬುಧವಾರ ರಾತ್ರಿ ಸಂಭವಿಸಿದ ಆಕಸ್ಮಿಕ ಬೆಂಕಿ ಅವಘಡದಲ್ಲಿ ಕಾರ್ಮಿಕರೊಬ್ಬರು ಮೃತಪಟ್ಟಿದ್ದು, ಇಬ್ಬರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬುಧವಾರ ರಾತ್ರಿ ಕೆಲವು ಕಾರ್ಮಿಕರು ಸೇರಿ ಚಳಿಗೆ ಬೆಂಕಿ ಕಾಯಿಸುವುದಕ್ಕಾಗಿ ಕಟ್ಟಿಗೆ ಗುಂಪಿಗೆ ಸ್ಪಿರಿಟ್(ಟಿನ್ನರ್) ಸುರಿದಾಗ ಏಕಾಏಕಿ ಬೆಂಕಿ ಹೊತ್ತಿಕೊಂಡು, ಅಲ್ಲಿಯೇ ಕುಳಿತಿದ್ದ ಕಾರ್ಮಿಕ ಅಶೋಕ ಚವ್ಹಾಣ (ಮುಧೋಳ ತಾಲ್ಲೂಕಿನ ಅಕ್ಕಿಮರಡಿ) ತೀವ್ರವಾಗಿ ಗಾಯಗೊಂಡಿದ್ದರು. ಅವರನ್ನು ಧಾರವಾಡ ಎಸ್‌ಡಿಎಂ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗೆ ಬೆಳಗಾವಿ ಕೆಎಲ್‌ಇ ಆಸ್ಪತ್ರೆಗೆ ಕೊಂಡೊಯ್ದ ವೇಳೆ ಚಿಕಿತ್ಸೆಗೆ ಸ್ಪಂದಿಸದೆ ಗುರುವಾರ ಮಧ್ಯಾಹ್ನ ಅವರು ಮೃತಪಟ್ಟಿದ್ದಾರೆ.

ಗಾಯಗೊಂಡಿರುವ ಪ್ರಮೋದ ಧಡೂತಿ(ಮುಧೋಳ ತಾಲ್ಲೂಕು ಬೆಳಗಲಿ ಗ್ರಾಮ) ಹಾಗೂ ಮಹಿಬೂಬ ಮಕಾನದಾರ (ವಿಜಯಪುರ ಜಿಲ್ಲೆ ಕೊರ್ತಿ-ಕೋಲ್ಹಾರ) ಅವರನ್ನು ಬಾಗಲಕೋಟೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿ.ಕೆ.ಶಿವಕುಮಾರ್ ನಿಯಂತ್ರಿಸಲು ಸಿದ್ದರಾಮಯ್ಯ ಯತ್ನ– ಪ್ರತಾಪಸಿಂಹ

ಮೈಸೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ನಿಯಂತ್ರಿಸಲು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಯತ್ನಿಸುತ್ತಿದ್ದಾರೆ' ಎಂದು ಸಂಸದ ಪ್ರತಾಪಸಿಂಹ ಆರೋಪಿಸಿದರು.

ಗುರುವಾರ ಸುದ್ದಿಗಾರರೊಡನೆ ಮಾತನಾಡಿದ ಅವರು, 'ಈ ಮೊದಲು ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಾ.ಜಿ.ಪರಮೇಶ್ವರ ಅವರನ್ನು ಸೋಲಿಸಿದರು. ಈಗ ಅಧ್ಯಕ್ಷರಾಗಿರುವ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುವುದನ್ನು ತಡೆಯಲು ತಂತ್ರಗಾರಿಕೆ ನಡೆಸುತ್ತಿದ್ದಾರೆ. ಅದಕ್ಕಾಗಿಯೇ ಕೋವಿಡ್ ಸಂಕಷ್ಟ ಕಾಲದಲ್ಲೂ ಅವರು ಪಾದಯಾತ್ರೆ ನಡೆಸಿದ್ದಾರೆ' ಎಂದು ದೂರಿದರು.

ನ್ಯಾಯಬೆಲೆ ಅಂಗಡಿಗೆ ಷರತ್ತು: ಹೈಕೋರ್ಟ್ ಮುದ್ರೆ

ಬೆಂಗಳೂರು: 'ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆ (ಪಿಡಿಎಸ್) ಅಡಿಯಲ್ಲಿ ನ್ಯಾಯಬೆಲೆ ಅಂಗಡಿಗೆ ಅನುಮತಿ ಪಡೆಯುವವರ ವಯಸ್ಸು ಮತ್ತು ಶೈಕ್ಷಣಿಕ ಅರ್ಹತೆಯ ಕುರಿತಾಗಿ ಯಾವುದೇ ಷರತ್ತು ವಿಧಿಸಲು ರಾಜ್ಯ ಸರ್ಕಾರ ವಿಶೇಷ ಅಧಿಕಾರ ಹೊಂದಿದೆ' ಎಂದು ಹೈಕೋರ್ಟ್ ಆದೇಶಿಸಿದೆ.

'ನ್ಯಾಯಬೆಲೆ ಅಂಗಡಿ ಪರವಾನಗಿ ಪಡೆದವರು (ಡೀಲರ್) 65 ವರ್ಷದೊಳಗೆ ಸಾವನ್ನಪ್ಪಿದರೆ, ಅನುಕಂಪದ ಆಧಾರದ ಮೇಲೆ ಅವರ ನಿರುದ್ಯೋಗಿ ಪುತ್ರ ಅಥವಾ ಅವಿವಾಹಿತ ಮಗಳಿಗೆ ಪರವಾನಗಿ ನೀಡುವಾಗ, ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು ಹಾಗೂ 18 ರಿಂದ 40 ವರ್ಷದ ಒಳಗಿನವರಿರಬೇಕು' ಎಂದು ಷರತ್ತು ವಿಧಿಸಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ನ್ಯಾಯಪೀಠ ಪುರಸ್ಕರಿಸಿದೆ.

ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣೆ ವ್ಯವಸ್ಥೆಗೆ (ನಿಯಂತ್ರಣ) ಸಂಬಂಧಿಸಿದಂತೆ 2016ರಲ್ಲಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶ ಪ್ರಶ್ನಿಸಿದ್ದ ಹಲವು ಅರ್ಜಿಗಳನ್ನು ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಲೇವಾರಿ ಮಾಡಿದೆ.

ಅಪಘಾತ: 'ರಿಯಾಲಿಟಿ ಶೋ' ಸ್ಪರ್ಧಿಯಾಗಿದ್ದ ಸಮನ್ವಿ ಸಾವು



ಸಮನ್ವಿ

ಬೆಂಗಳೂರು: ಕೋಣನಕುಂಟೆ ಬಳಿಯ ವಾಜರಹಳ್ಳಿ ಮುಖ್ಯರಸ್ತೆಯಲ್ಲಿ ಗುರುವಾರ ಅಪಘಾತ ಸಂಭವಿಸಿದ್ದು, ಆರು ವರ್ಷದ ಬಾಲಕಿ ಸಮನ್ವಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆಕೆಯ ತಾಯಿ ಅಮೃತಾ ನಾಯ್ಡು ಅವರಿಗೂ ಸಣ್ಣಪುಟ್ಟ ಗಾಯಗಳಾಗಿವೆ.

'ಸ್ಥಳೀಯ ನಿವಾಸಿ ಸಮನ್ವಿ ಹಾಗೂ ನಟಿಯಾದ ಅಮೃತಾ ನಾಯ್ಡು, ಕಲರ್ಸ್ ಕನ್ನಡ ವಾಹಿನಿಯ 'ನನ್ನಮ್ಮ ಸೂಪರ್ ಸ್ಟಾರ್' ರಿಯಾಲಿಟಿ ಶೋನಲ್ಲಿ ಸ್ಪರ್ಧಿಗಳಾಗಿದ್ದರು. ಕೆಲಸ ನಿಮಿತ್ತ ತಾಯಿ– ಮಗಳು ಸೇರಿ ಟಿವಿಎಸ್ ಸ್ಕೂಟಿಯಲ್ಲಿ ಹೊರಟಿದ್ದಾಗ ಲಾರಿ ಡಿಕ್ಕಿಯಾಗಿ ಅವಘಡ ಸಂಭವಿಸಿದೆ' ಎಂದು ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

'ಅಪಘಾತಕ್ಕೆ ಕಾರಣವಾದ ಲಾರಿ ಚಾಲಕ ಮಂಜೇಗೌಡ ಎಂಬಾತನನ್ನು ಬಂಧಿಸಲಾಗಿದೆ. ಸಮನ್ವಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದೂ ಹೇಳಿದರು.

ಮೆಟ್ರೊ ನಿಲ್ದಾಣಕ್ಕೆ ಹೊರಟಿದ್ದರು: 'ವಾಜರಹಳ್ಳಿ ನಿವಾಸಿ ಅಮೃತಾ ಹಾಗೂ ಮಗಳು ಸಮನ್ವಿ, ಸಮೀಪದಲ್ಲೇ ಇದ್ದ ಮೆಟ್ರೊ ನಿಲ್ದಾಣಕ್ಕೆ ಸ್ಕೂಟಿಯಲ್ಲಿ ಹೊರಟಿದ್ದರು. ಅದೇ ಸಂದರ್ಭದಲ್ಲಿ ಮುಖ್ಯರಸ್ತೆಯಲ್ಲಿ ವೇಗವಾಗಿ ಬಂದ ಲಾರಿ, ಸ್ಕೂಟಿಗೆ ಗುದ್ದಿತ್ತು' ಎಂದು ಪೊಲೀಸರು ತಿಳಿಸಿದರು.

'ಸೊಂಟ ಹಾಗೂ ತೊಡೆಗೆ ತೀವ್ರ ಪೆಟ್ಟು ಬಿದ್ದು ಸಮನ್ವಿ ಮೃತಪಟ್ಟಿದ್ದಾರೆ. ಗಾಯಾಳು ಅಮೃತಾ ಅವರು ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿದ್ದಾರೆ. ಮೃತ ಸಮನ್ವಿ, ಹರಿಕಥಾ ಗಾಯಕ ಗುರುರಾಜ ನಾಯ್ಡು ಅವರ ಮೊಮ್ಮಗಳು' ಎಂದೂ ವಿವರಿಸಿದರು.

ಜಲಜೀವನ ಮಿಷನ್ ಯೋಜನೆ ಜಾರಿಗೆ ಗ್ರಾಮಸ್ಥರ ವಿರೋಧ

ಅಡಿಗಲ್ಲು ಹಾಕದೇ ಮರಳಿದ ಸಚಿವ ಹೆಬ್ಬಾರ್

ಪ್ರಜಾವಾಣಿ ವಾರ್ತೆ



ಮುಂಡಗೋಡ ತಾಲ್ಲೂಕಿನ ಕ್ಯಾಸನಕೇರಿ ಗ್ರಾಮದಲ್ಲಿ ಸಚಿವ ಶಿವರಾಮ ಹೆಬ್ಬಾರ್ ಅವರಿಗೆ ಗ್ರಾಮಸ್ಥರು ಗುರುವಾರ ಅಹವಾಲು ಸಲ್ಲಿಸಿದರು

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): 'ಯೋಜನೆಯ ಹೆಸರಿನಲ್ಲಿ ರಸ್ತೆ ಅಗೆದು ಹಾಳು ಮಾಡಿದರೆ, ಮುಂದೆ ರಸ್ತೆ ದುರಸ್ತಿಯನ್ನು ಯಾರೂ ಮಾಡುವುದಿಲ್ಲ. ಈಗಿನ ರಸ್ತೆಗಳೇ ಹೊಂಡಗಳಿಂದ ತುಂಬಿವೆ. ಮೊದಲು ರಸ್ತೆ, ಗಟಾರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಿ' ಎಂಬ ಗ್ರಾಮಸ್ಥರ ಆಗ್ರಹಕ್ಕೆ ಮಣಿದ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಉದ್ದೇಶಿತ ಯೋಜನೆಗಳಿಗೆ ಅಡಿಗಲ್ಲು ಹಾಕದೇ ಅಲ್ಲಿಂದ ತೆರಳಿದ ಘಟನೆ ಗುರುವಾರ ಇಲ್ಲಿ ನಡೆಯಿತು.

ಜಲಜೀವನ ಮಿಷನ್ ಯೋಜನೆ ಜಾರಿಗೆ ತಾಲ್ಲೂಕಿನ ಕ್ಯಾಸನಕೇರಿ ಹಾಗೂ ಕುಸೂರ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದರು. ಈ ಯೋಜನೆಯಡಿ ಕಾಮಗಾರಿಗೆ ಅಡಿಗಲ್ಲು ನೆರವೇರಿಸಲು ಆಗಮಿಸಿದ್ದ ವೇಳೆ ಸಚಿವರ ಎದುರು, ಗ್ರಾಮಸ್ಥರು 'ಯೋಜನೆಯಿಂದ ರಸ್ತೆ ಹಾಳಾಗುತ್ತವೆ. ಎಲ್ಲರ ಮನೆಗಳಿಗೂ ನಲ್ಲಿ ಸಂಪರ್ಕವಿದೆ. ಜೆಜೆಎಂ ಯೋಜನೆ ಜಾರಿ ಮಾಡುವ ಬದಲು, ಇನ್ನಿತರ ಅಭಿವೃದ್ಧಿ ಕೆಲಸಗಳನ್ನು ಮಾಡಿ' ಎಂದರು.

ಗ್ರಾಮಸ್ಥರ ಮಾತಿನಿಂದ ಸ್ವಲ್ಪ ಇರಿಸುಮುರಿಸುಗೊಂಡ ಸಚಿವರು, 'ನಿಮ್ಮೂರಿನ ಅಭಿವೃದ್ಧಿಗೆ ಎಷ್ಟೊಂದು ಅನುದಾನ ಕೊಟ್ಟಿಲ್ಲವೇ? ಊರಿಗೆ ನೀರು ಬೇಡ, ರಸ್ತೆ ಬೇಡ, ಗಟಾರ ಬೇಡ ಎಂದು ವಾದ ಮಾಡುವುದು ಸರಿಯಲ್ಲ. ಎಲ್ಲ ಕೆಲಸಗಳು ಒಮ್ಮೆಲೆ ಆಗುವುದಿಲ್ಲ. ಹಂತಹಂತವಾಗಿ ಮಾಡಲಾಗುವುದು' ಎಂದರು. ಆದರೆ, ಗ್ರಾಮಸ್ಥರು ಮಾತ್ರ, ಜೆಜೆಎಂ ಯೋಜನೆ ಬೇಡವೆಂದು ಈ ಹಿಂದೆಯೇ ಅಧಿಕಾರಿಗಳಿಗೆ ತಿಳಿಸಿದ್ದೇವೆ ಎಂಬ ಪಟ್ಟು ಬಿಗಿಗೊಳಿಸಿದರು. ಕೊನೆಗೆ ಆ ಎರಡೂ ಗ್ರಾಮಗಳಲ್ಲಿ ಕಾಮಗಾರಿಗಳಿಗೆ ಅಡಿಗಲ್ಲು ಹಾಕದೇ ಸಚಿವರು ಮುಂದಿನ ಕಾರ್ಯಕ್ರಮಕ್ಕೆ ತೆರಳಿದರು.

ದೇಶದ ಅರಣ್ಯ ವ್ಯಾಪ್ತಿ ಕುರಿತ ವರದಿ ಬಹಿರಂಗ

ಬೆಂಗಳೂರಿನಲ್ಲಿ 5 ಚದರ ಕಿ.ಮೀ.ನಷ್ಟು ಅರಣ್ಯ ನಾಶ

ಪ್ರಜಾವಾಣಿ ವಾರ್ತೆ



ನವದೆಹಲಿ: ದೇಶದಲ್ಲಿನ ಅರಣ್ಯ ವ್ಯಾಪ್ತಿ ಕುರಿತಾದ ವರದಿಯನ್ನು ಗುರುವಾರ ಬಿಡುಗಡೆ ಮಾಡಲಾಗಿದ್ದು, ಬೆಂಗಳೂರಿನಲ್ಲಿ ಸುಮಾರು 5 ಚದರ ಕಿ.ಮೀ.ನಷ್ಟು ಅರಣ್ಯ ವ್ಯಾಪ್ತಿಯು ಕುಗ್ಗಿದೆ.

ಬೆಂಗಳೂರಿನಲ್ಲಿ ಆಗಿರುವ ಅರಣ್ಯ ನಾಶ ಪ್ರದೇಶ ಸುಮಾರು 700 ಫುಟ್‌ಬಾಲ್ ಮೈದಾನಕ್ಕೆ ಸರಿಸಮಾನವಾದುದು. 2011 ಮತ್ತು 2021ರ ಅವಧಿಯಲ್ಲಿ ಇಷ್ಟು ಪ್ರಮಾಣದ ಅರಣ್ಯ ಭೂಮಿ ಕುಗ್ಗಿದೆ ಎಂದು ವರದಿ ತಿಳಿಸಿದೆ.

ಈ ನಷ್ಟದ ಹೊರತಾಗಿಯೂ ದಕ್ಷಿಣ ರಾಜ್ಯಗಳ ಪ್ರಮುಖ ನಗರಗಳಲ್ಲಿ ಒಂದಾದ ಬೆಂಗಳೂರಿನಲ್ಲಿ 89 ಚದರ ಕಿ.ಮೀ.ನಷ್ಟು ಅರಣ್ಯ ಭೂಮಿ ಇದೆ. ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ದೆಹಲಿ (194 ಚದರ ಕಿ.ಮೀ) ಮತ್ತು ಮುಂಬೈ (111 ಚದರ ಕಿ.ಮೀ.) ಇವೆ.

ಕರ್ನಾಟಕದಲ್ಲಿ 2019ನೇ ಸಾಲಿನ ಅಂದಾಜಿಗೆ ಹೋಲಿಸಿದರೆ ಗರಿಷ್ಠ ಪ್ರಮಾಣದ ಅರಣ್ಯ ಪ್ರದೇಶ ವೃದ್ಧಿಯು ಬೆಳಗಾವಿ (24.06 ಚ.ಕಿ.ಮೀ), ಚಿತ್ರದುರ್ಗ (30.39 ಚ.ಕಿ.ಮೀ), ತುಮಕೂರು ಜಿಲ್ಲೆಯಲ್ಲಿ (39.03 ಚ.ಕಿ.ಮೀ) ಆಗಿದೆ. ಗರಿಷ್ಠ ಪ್ರಮಾಣದಲ್ಲಿ ಅರಣ್ಯ ವ್ಯಾಪ್ತಿಯು ಕುಗ್ಗಿರುವ ಜಿಲ್ಲೆ ಎಂದರೆ ಉಡುಪಿ (26.65 ಚ.ಕಿ.ಮೀ).

ಹೆಚ್ಚಳ: ಭಾರತದಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಅರಣ್ಯ ಪ್ರದೇಶದ ವ್ಯಾಪ್ತಿಯು 2,200 ಚದರ ಕಿ.ಮೀ.ನಷ್ಟು ಹೆಚ್ಚಿದೆ. ಆದರೆ, ಅದರ ಹಿಂದಿನ ಎರಡು ವರ್ಷಗಳಿಗೆ ಹೋಲಿಸಿದರೆ ತುಸು ಕಡಿಮೆಯಾಗಿದೆ.

2019ರ ಸ್ಥಿತಿಗೆ ಹೋಲಿಸಿದರೆ, ಅರಣ್ಯ ವ್ಯಾಪ್ತಿಯು 1,540 ಚದರ ಕಿ.ಮೀ ಮತ್ತು ಮರಗಳ ವ್ಯಾಪ್ತಿಯು 721 ಚದರ ಕಿ.ಮೀ.ನಷ್ಟು ಹಿಗ್ಗಿದೆ.

ಆದರೆ, 2017 ಮತ್ತು 2019ರ ಅವಧಿಯಲ್ಲಿ ಅರಣ್ಯ ಬೆಳವಣಿಗೆ ಪ್ರಮಾಣ ಗಣನೀಯವಾಗಿ ಏರಿಕೆ ಕಂಡಿತ್ತು. ಈ ಅವಧಿಯಲ್ಲಿ ಅರಣ್ಯ 3,976 ಚದರ ಕಿ.ಮೀ. ಮತ್ತು ಮರಗಳ ವ್ಯಾಪ್ತಿಯು 1,212 ಚದರ ಕಿ.ಮೀ. ಏರಿಕೆಯಾಗಿತ್ತು..

ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಅವರು, ಮರಗಳ ವ್ಯಾಪ್ತಿ ವಿಸ್ತರಿಸಲು ರಾಷ್ಟ್ರೀಯ ಹಸಿರು ಮಿಷನ್‌ನ ಎರಡನೇ ಹಂತದಲ್ಲಿ ವಿಶೇಷ ಅಭಿಯಾನವನ್ನು ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ವರದಿಯಂತೆ, ದಟ್ಟ ಅರಣ್ಯದ ವ್ಯಾಪ್ತಿ 2019 ಮತ್ತು 2021ರ ನಡುವೆ ಸುಮಾರು 1,582 ಚದರ ಕಿ.ಮೀ. ನಷ್ಟು ಕಡಿಮೆ ಆಗಿದೆ. ಆದರೆ, ಅತಿದಟ್ಟ ಅರಣ್ಯ ವ್ಯಾಪ್ತಿಯು ಸುಮಾರು 501 ಚದರ ಕಿ.ಮೀನಷ್ಟು ಹೆಚ್ಚಾಗಿದೆ.

ಅರಣ್ಯ ವ್ಯಾಪ್ತಿ ಹೆಚ್ಚಳವಾಗಿರುವ ಐದು ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ರಾಜ್ಯದಲ್ಲಿ 155 ಚದರ ಕಿ.ಮೀ. ಅರಣ್ಯ ಪ್ರದೇಶ ಹೆಚ್ಚಿದೆ. ಉಳಿದಂತೆ, ಆಂಧ್ರಪ್ರದೇಶ (747 ಚ.ಕಿ.ಮೀ), ತೆಲಂಗಾಣ (632 ಚ.ಕಿ.ಮೀ), ಒಡಿಶಾ (537 ಚ.ಕಿ.ಮೀ) ಮತ್ತು ಜಾರ್ಖಂಡ್ (110 ಚ.ಕಿ.ಮೀ) ಇವೆ. ಈಶಾನ್ಯ ರಾಜ್ಯಗಳಲ್ಲಿ ಅರಣ್ಯ ವ್ಯಾಪ್ತಿಯು ಕುಗ್ಗಿದೆ.

ನಾರಾಯಣ ಗೌಡಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ನಾರಾಯಣ ಗೌಡ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ'ಗೆ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದಲ್ಲಿ ನಡೆದ ಸಭೆ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ.

'ನಾಡು–ನುಡಿಗೆ ಸಂಕಷ್ಟ ಎದುರಾದಾಗ ರಾಜ್ಯದಾದ್ಯಂತ ನಾರಾಯಣಗೌಡ ಅವರು ಹೋರಾಟ ನಡೆಸಿದ್ದಾರೆ. ಗಡಿ ಭಾಗದಲ್ಲಿ ಕನ್ನಡ ಅನುಷ್ಠಾನ, ಕಾವೇರಿ ನದಿ ನೀರು ಹಂಚಿಕೆ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅವರು ಧ್ವನಿಯೆತ್ತಿ, ಕನ್ನಡಿಗರನ್ನು ಸಂಘಟಿಸುತ್ತಾ ಬಂದಿದ್ದಾರೆ' ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಆಲಿವ್ ರಿಡ್ಲೆ' ಕಡಲಾಮೆಗಳ 70ಕ್ಕೂ ಹೆಚ್ಚು ಮೊಟ್ಟೆಗಳು ಪತ್ತೆ

ಪ್ರಜಾವಾಣಿ ವಾರ್ತೆ



ಅಂಕೋಲಾದ ಭಾವಿಕೇರಿ ಸಮುದ್ರತೀರದಲ್ಲಿ ಪತ್ತೆಯಾದ 'ಆಲಿವ್ ರಿಡ್ಲೆ' ತಳಿಯ ಕಡಲಾಮೆ ಮೊಟ್ಟೆಗಳು

ಅಂಕೋಲಾ (ಉತ್ತರ ಕನ್ನಡ ಜಿಲ್ಲೆ): ಇಲ್ಲಿನ ಭಾವಿಕೇರಿಯ ಸಮುದ್ರ ತೀರದಲ್ಲಿ ಇದೇ ಮೊದಲ ಬಾರಿಗೆ 'ಆಲಿವ್ ರಿಡ್ಲೆ' ತಳಿಯ ಕಡಲಾಮೆಗಳ 70ಕ್ಕೂ ಹೆಚ್ಚು ಮೊಟ್ಟೆಗಳು ಪತ್ತೆಯಾಗಿವೆ. ಅಳಿವಿನಂಚಿನಲ್ಲಿರುವ ಈ ತಳಿಯ ಕಡಲಾಮೆಗಳ ಮೊಟ್ಟೆಗಳನ್ನು ಕಡಲತೀರದಲ್ಲಿ ಸುರಕ್ಷಿತವಾಗಿ ರಕ್ಷಣೆ ಮಾಡಲಾಗಿದೆ.

ಬುಧವಾರ ಬೆಳಿಗ್ಗೆ ಸ್ಥಳೀಯ ಮೀನುಗಾರರು ನೀಡಿದ ಮಾಹಿತಿಯ ಮೇರೆಗೆ ಅರಣ್ಯ ಇಲಾಖೆ ಮತ್ತು 'ಕೋಸ್ಟಲ್ ಮರೈನ್ ಇಕೊ ಸಿಸ್ಟಂ' ಘಟಕದ ಅಧಿಕಾರಿಗಳು ಮತ್ತು ಸಿಬ್ಬಂದಿ ಪರಿಶೀಲನೆ ನಡೆಸಿದರು.

'ಅಂಕೋಲಾದ ಈ ಪ್ರದೇಶದಲ್ಲಿ ಪ್ರಥಮ ಬಾರಿಗೆ 'ಆಲಿವ್ ರಿಡ್ಲೆ' ಕಡಲಾಮೆಗಳ ಮೊಟ್ಟೆಗಳು ಕಂಡುಬಂದಿದೆ. ಕಾವಲಿಗೆ ಒಬ್ಬ ಕಾವಲುಗಾರನನ್ನು ನೇಮಿಸಲಾಗಿದೆ. ನಾಯಿ, ಹಾವುಗಳಿಂದ ಮೊಟ್ಟೆಗಳ ರಕ್ಷಣೆಗೆ ಪಂಜರ ನಿರ್ಮಿಸಲಾಗಿದೆ. ರಕ್ಷಿಸಲಾದ ಮೊಟ್ಟೆಗಳು ಭೂಮಿಯ ಶಾಖದಿಂದ ಮೊಟ್ಟೆಯೊಡೆದು ಮರಿ ಹೊರಬಂದ ನಂತರ ಅವುಗಳನ್ನು ಸಮುದ್ರಕ್ಕೆ ಬಿಡಲಾಗುತ್ತದೆ. ಕಡಲಾಮೆಗಳ ಮೊಟ್ಟೆಗಳ ಮಾಹಿತಿ ನೀಡಿದವರಿಗೆ ಇಲಾಖೆಯಿಂದ ಪ್ರೋತ್ಸಾಹ ಧನ ನೀಡಲಾಗುತ್ತದೆ' ಎಂದು ವಲಯ (ಮರೈನ್) ಅರಣ್ಯಾಧಿಕಾರಿ ಬಿ.ಪ್ರಮೋದ ತಿಳಿಸಿದರು.

'ಭವಿಷ್ಯದ ಡಿಜಿಟಲ್ ಉದ್ಯೋಗ'ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ



ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪಿ. ಪ್ರದೀಪ್ ಮತ್ತು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಸಂಸ್ಥೆಯ ಸಿಇಒ ಸಂಜೀವ್ ಗುಪ್ತ ಒಡಂಬಡಿಕೆಯ ದಾಖಲೆಗಳನ್ನು ಹಸ್ತಾಂತರಿಸಿಕೊಂಡರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಇದ್ದರು

ಬೆಂಗಳೂರು: ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸಿಕೊಡುವ 'ಭವಿಷ್ಯದ ಡಿಜಿಟಲ್ ಉದ್ಯೋಗ' (ಫ್ಯೂಚರ್ ಡಿಜಿಟಲ್ ಜಾಬ್ಸ್) ಕಾರ್ಯಕ್ರಮಕ್ಕೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಗುರುವಾರ ಚಾಲನೆ ನೀಡಿದರು.

ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಸಂಬಂಧ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪಿ. ಪ್ರದೀಪ್ ಮತ್ತು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಸಂಸ್ಥೆಯ ಸಿಇಒ ಸಂಜೀವ್ ಗುಪ್ತ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

ಬಳಿಕ ಮಾತನಾಡಿದ ಸಚಿವರು, 'ಈ ಕಾರ್ಯಕ್ರಮದಿಂದ 14 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಮತ್ತು 92 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಓದುತ್ತಿರುವ ಸಾವಿರಾರು ವಿದ್ಯಾರ್ಥಿಗಳಿಗೆ ಅವರ ಕನಸಿನ ಉದ್ಯೋಗ ಸಿಗಲಿದೆ. ಇನ್ನೊಂದೆಡೆ ಉದ್ಯಮ ರಂಗಕ್ಕೆ ಬೇಕಾದ ಸ್ವರೂಪದಲ್ಲಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲಾಗುವುದು. ಇದು ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ ಪೂರಕವಾಗಿದೆ' ಎಂದರು.

'ಈ ಕಾರ್ಯಕ್ರಮದ ಅನ್ವಯ ಸರ್ಕಾರಿ ಎಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ 'ಭವಿಷ್ಯದ ಡಿಜಿಟಲ್ ಉದ್ಯೋಗ' ಯೋಜನೆಯನ್ನು ಒಂದು ವಿಶೇಷ ಆಂದೋಲನದಂತೆ ಹಮ್ಮಿಕೊಳ್ಳಲಾಗುವುದು. ಜೊತೆಗೆ, ಇಂಟರ್ನ್‌ಶಿಪ್, ಪ್ರಾಜೆಕ್ಟುಗಳು ಮತ್ತು ಉದ್ಯೋಗ ನೇಮಕಾತಿ ಕನಸು ನನಸಾಗುವಂತೆ ವೃತ್ತಿ ಸಮಾಲೋಚನೆ ಮತ್ತು ಮಾರ್ಗದರ್ಶನವನ್ನು ನೀಡಲಾಗುವುದು' ಎಂದು ಹೇಳಿದರು.

'ಸರ್ಕಾರಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಪರಿಪೋಷಣೆ ಮತ್ತು ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಉದ್ಯಮಗಳೊಂದಿಗೆ ಸೇರಿಕೊಂಡು ತಾಂತ್ರಿಕ ಶಿಕ್ಷಣದ ಪಠ್ಯಕ್ರಮವನ್ನು ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಅಭಿವೃದ್ಧಿಪಡಿಸಿ, ಬೋಧನಾ ಮೂಲಸೌಕರ್ಯಗಳನ್ನು ಹೆಚ್ಚಿಸಲಾಗುವುದು' ಎಂದ ಅವರು, 'ವಿದ್ಯಾರ್ಥಿಗಳು ಬೆಂಗಳೂರಿನಿಂದ ಹೊರಗಿರುವ ಕೈಗಾರಿಕೋದ್ಯಮಗಳಲ್ಲಿ ಉದ್ಯೋಗಗಳ ಕುರಿತು ಸಂಶೋಧನೆ ನಡೆಸಲು ಈ ಒಡಂಬಡಿಕೆಯು ಅವಕಾಶ ಮಾಡಿಕೊಡಲಿದೆ' ಎಂದರು.

ಟ್ಯಾಲೆನ್ಸಿಯಾ ಗ್ಲೋಬಲ್ ಕಂಪನಿಯ ಸಿಇಒ ಎಸ್. ಸುಬ್ರಹ್ಮಣಿಯನ್ ಮಾತನಾಡಿ, 'ಇದೊಂದು ಹೊಸ ಪ್ರಯತ್ನ. ಇದರಿಂದ ಮಕ್ಕಳಿಗೆ ಅನುಕೂಲ ಆಗಲಿದೆ. ಸಾವಿರಕ್ಕೂ ಹೆಚ್ಚು ಮಂದಿಗೆ ಈ ವರ್ಷ ಉದ್ಯೋಗ ಸಿಗುವಂತೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿಗೆ ಉದ್ಯೋಗ ಸಿಗುವಂತೆ ಮಾಡಲಾಗುವುದು' ಎಂದು ಹೇಳಿದರು.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ

ಕೇಂದ್ರದಿಂದ ರಾಜ್ಯಕ್ಕೆ ₹ 642.26 ಕೋಟಿ

ಪ್ರಜಾವಾಣಿ ವಾರ್ತೆ



ಬಿ.ಸಿ.ಪಾಟೀಲ,

ಬೆಂಗಳೂರು: 'ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪಿಎಂಕೆಎಸ್‌ವೈ) ಅಡಿ ಕೇಂದ್ರದಿಂದ ರಾಜ್ಯಕ್ಕೆ ₹ 642.26 ಕೋಟಿ ಮಂಜೂರಾಗಿದೆ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಜಲಾನಯನ ಅಭಿವೃದ್ಧಿ ಘಟಕದ ಯೋಜನೆಯಡಿಯ ವೆಚ್ಚವನ್ನು ಕೇಂದ್ರ–ರಾಜ್ಯದಿಂದ ಶೇ 60–40ರ ಅನುಪಾತದಲ್ಲಿ ಭರಿಸಲಾಗುವುದು' ಎಂದರು.

'ಸಮತಟ್ಟಾದ ಪ್ರದೇಶದ ಪ್ರತಿ ಹೆಕ್ಟೇರ್ ಜಲಾನಯನ ಪ್ರದೇಶಕ್ಕೆ ₹22 ಸಾವಿರ, ಗುಡ್ಡಗಾಡು ಪ್ರದೇಶಕ್ಕೆ ₹ 28 ಸಾವಿರವರೆಗೆ ಅನುದಾನ ಲಭ್ಯವಾಗಲಿದೆ. ಈ ಯೋಜನೆಯನ್ನು ರಾಜ್ಯದ ಮಳೆಯಾಶ್ರಿತ 2.75 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಳಸಲು ಅನುಮೋದನೆ ನೀಡಲಾಗಿದೆ' ಎಂದರು.

'ಮಳೆ ನೀರು ಸಂಗ್ರಹ ಮೂಲಕ ಮಣ್ಣಿನ ತೇವಾಂಶ ಸಂರಕ್ಷಣೆ, ಪರ್ಯಾಯ ಬೆಳೆ ವ್ಯವಸ್ಥೆಗಳು, ಹವಾಮಾನ ವೈಪರೀತ್ಯ ಮತ್ತು ಬರಗಾಲದ ಅಪಾಯ ಎದುರಿಸಲು ಹಾಗೂ ಅಂತರ್ಜಲ ವೃದ್ಧಿಗೆ ಯೋಜನೆಯಡಿ ಅನುದಾನ ಬಳಸಲಾಗುವುದು. ಸ್ವಸಹಾಯ ಗುಂಪುಗಳನ್ನು ರಚಿಸಿ ಆಸ್ತಿರಹಿತರನ್ನು ಉತ್ತೇಜಿಸುವುದು, ಅಂಗವಿಕಲರು ಮತ್ತು ಮಹಿಳೆಯರಿಗೆ ಅಭಿವೃದ್ಧಿಪಡಿಸಿದ ಭೂಮಿ, ನೀರು ಮತ್ತು ಜೀವರಾಶಿ ಸಂಪನ್ಮೂಲಗಳ ಸಮಾನ ಹಂಚಿಕೆ, ರೈತ ಉತ್ಪಾದಕರ ಗುಂಪು (ಎಫ್‌ಪಿಒ) ಮುಂತಾದ ಸಮುದಾಯ ಸಂಸ್ಥೆಗಳಲ್ಲಿ ಸದಸ್ಯತ್ವ ನೀಡಲು ಕೂಡಾ ವೆಚ್ಚ ಮಾಡಲಾಗುವುದು' ಎಂದರು.

'2021-22 ನೇ ಸಾಲಿನ ಆಯ-ವ್ಯಯದಲ್ಲಿ ಘೋಷಿಸಿದ ಸುಜಲ–3 ಯೋಜನೆಯ ಮಾದರಿಯಲ್ಲಿ ವಿಶ್ವ ಬ್ಯಾಂಕ್ ಅನುದಾನದ ನೆರವಿನಲ್ಲಿ ಹೊಸ ರಿವಾರ್ಡ್ (ಕೃಷಿಯ ಸುಸ್ಥಿರತೆಗೆ ನವೀನ ಅಭಿವೃದ್ಧಿಯ ಮೂಲಕ ಜಲಾನಯನ ಪ್ರದೇಶಗಳ ಪುನಶ್ಚೇತನ) ಯೋಜನೆ ಜಾರಿಗೊಳಿಸಿ ಮುಂದಿನ 5 ವರ್ಷ ರಾಜ್ಯದ 21 ಜಿಲ್ಲೆಗಳಲ್ಲಿ ₹ 600 ಕೋಟಿ ವೆಚ್ಚದಲ್ಲಿ ವಿಶ್ವ ಬ್ಯಾಂಕಿನ ಶೇ 70, ರಾಜ್ಯದ ಶೇ 30 ಪಾಲಿನಂತೆ ಯೋಜನೆ ಅನುಷ್ಠಾನಗೊಳಿಸಲಾಗುವುದು' ಎಂದು ವಿವರಿಸಿದರು.

'ರಾಜ್ಯದ ಜಲಾನಯನ ಇಲಾಖೆ ಇತರೆ ರಾಜ್ಯಗಳಿಗೆ ತಾಂತ್ರಿಕ ಸಲಹೆ ನೀಡಲು ಮಾದರಿಯಾಗಿದೆ. ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯವನ್ನು 'ಲೈಟ್ ಹೌಸ್' ಎಂದು ಗುರುತಿಸಿದೆ' ಎಂದೂ ಸಚಿವರು ಸಂತಸ ವ್ಯಕ್ತಪಡಿಸಿದರು.

'ರಿವಾರ್ಡ್' ಯೋಜನೆಯಡಿ ಚಟುವಟಿಕೆ

- ಹೊಸದಾಗಿ 9 ಜಿಲ್ಲೆಗಳು ಸೇರಿದಂತೆ 19.41 ಲಕ್ಷ ಹೆಕ್ಟೇರ್ ಮಳೆಯಾಶ್ರಿತ ಪ್ರದೇಶದಲ್ಲಿ ಭೂ ಸಂಪನ್ಮೂಲ ಸಮೀಕ್ಷೆ
- ರೈತರಿಗೆ ಹಿಡುವಳಿವಾರು ಮಣ್ಣಿನ ಪೋಷಕಾಂಶಗಳ ಅನ್ವಯ ನಿರ್ದಿಷ್ಟ ತಾಂತ್ರಿಕತೆಗಳ ಶಿಫಾರಸು
- ರೈತ ಉತ್ಪಾದಕ ಸಂಸ್ಥೆಗಳ ಬಲವರ್ಧನೆ
- ರೈತರಿಗೆ ಸುಧಾರಿತ ಕೃಷಿ- ಹವಾಮಾನ ಸಲಹೆ
- ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದಲ್ಲಿ ಜಲಾನಯನ ನಿರ್ವಹಣೆ ಕುರಿತು ಅಧ್ಯಯನ ಮತ್ತು ತರಬೇತಿ ಕೇಂದ್ರ ಸ್ಥಾಪನೆ

ಮಾಹಿತಿ ನೀಡಿದ ಗಣಿ ಮತ್ತು ಭೂ ವಿಜ್ಞಾನ ಸಚಿವ ಹಾಲಪ್ಪ ಆಚಾರ್

₹4,083 ಕೋಟಿ ರಾಜಧನ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಕ್ತ ಸಾಲಿನ (2021-22) ನವೆಂಬರ್ ಅಂತ್ಯದವರೆಗೆ ₹ 4,083.54 ಕೋಟಿ ರಾಜಧನ ಸಂಗ್ರಹಿಸಲಾಗಿದೆ' ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಪ್ರಸಕ್ತ ಸಾಲಿನಲ್ಲಿ ₹ 2,560 ಕೋಟಿ ಗುರಿ ನಿಗದಿಪಡಿಸಿದ್ದು, ಈಗಾಗಲೇ ಶೇ 160ರಷ್ಟು ಗುರಿ ಸಾಧಿಸಲಾಗಿದೆ' ಎಂದರು.

'ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಅಡಿಯಲ್ಲಿ 2015-16ನೇ ಸಾಲಿನಿಂದ 2021ರ ನವೆಂಬರ್ ಅಂತ್ಯದವರೆಗೆ ₹



ಹಾಲಪ್ಪ ಆಚಾರ್

3,025.22 ಕೋಟಿ ಸಂಗ್ರಹಿಸಲಾಗಿದೆ. ಈ ಮೊತ್ತದಲ್ಲಿ ಗಣಿಗಾರಿಕೆಯಿಂದ ತೊಂದರೆಗೆ ಒಳಗಾದ ಜನರ ಹಿತಕ್ಕೆ (ಪ್ರಧಾನಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ–ಪಿಎಂಕೆಕೆಕೆವೈ) ₹ 997.60 ಕೋಟಿ ಮತ್ತು ಕೋವಿಡ್ ತಡೆಗಟ್ಟಲು ₹ 183.38 ಕೋಟಿ ಸೇರಿ ಒಟ್ಟು ₹ 1,180.98 ಕೋಟಿ ವೆಚ್ಚ ಮಾಡಲಾಗಿದೆ' ಎಂದರು.

'ಕಬ್ಬಿಣದ ಅದಿರು, ಮ್ಯಾಂಗನೀಸ್, ಬಾಕ್ಸೈಟ್, ಸುಣ್ಣದ ಕಲ್ಲು, ಚಿನ್ನ ಮತ್ತು ಇತರೆ ಖನಿಜಗಳ ಗಣಿಗಾರಿಕೆಗೆ ಒಟ್ಟು 311 ಗಣಿ ಗುತ್ತಿಗೆಗಳು ಮಂಜೂರಾಗಿವೆ. ಉಪ ಖನಿಜಗಳಾದ ಅಲಂಕಾರಿಕ ಶಿಲೆ (ಗ್ರಾನೈಟ್), ಕಟ್ಟಡ ಕಲ್ಲು, ಮರಳು, ಲ್ಯಾಟರೈಟ್, ಮುರ್ರಂ, ಸ್ಯಾಂಡ್ ಸ್ಟೋನ್, ಸಿಲಿಕಾಸ್ಯಾಂಡ್, ಕ್ವಾರ್ಟ್ಜ್ ಮತ್ತು ನದಿ ಮರಳು ಗಣಿಗಾರಿಕೆಗಾಗಿ 3,521 ಕಲ್ಲು ಗಣಿ ಗುತ್ತಿಗೆಗಳು ಮಂಜೂರಾಗಿವೆ. 1,914 ಜಲ್ಲಿ ಕ್ರಷರ್‌ಗಳಿಗೆ ಪರವಾನಗಿ ನೀಡಲಾಗಿದೆ' ಎಂದರು.

'ಅನಧಿಕೃತ ಮರಳು ಗಣಿಗಾರಿಕೆ ನಿಯಂತ್ರಿಸಲು ಖನಿಜ ರಕ್ಷಣಾ ಪಡೆಗಳನ್ನು ರಚಿಸಲಾಗಿದೆ. ಗ್ರಾಮ ಪಂಚಾಯಿತಿ ಮೂಲಕ ಮರಳು ವಿಲೇವಾರಿಗೆ 316 ಮರಳು ಬ್ಲಾಕುಗಳನ್ನು ಗುರುತಿಸಲಾಗಿದೆ. ಈಗಾಗಲೇ 187 ಬ್ಲಾಕುಗಳಿಗೆ ಅಧಿಸೂಚನೆ ಹೊರಡಿಸಲಾಗಿದ್ದು, ಈ ಪೈಕಿ 169 ಬ್ಲಾಕುಗಳಲ್ಲಿ ಕಾರ್ಯಾದೇಶ ನೀಡಲಾಗಿದೆ. 11 ಬ್ಲಾಕ್‌ಗಳಲ್ಲಿ ಮರಳು ತೆಗೆಯಲು ಆರಂಭಿಸಲಾಗಿದೆ. ಈವರೆಗೆ ಒಟ್ಟು 21 ಗಣಿ ಬ್ಲಾಕ್‌ಗಳನ್ನು ಹರಾಜು ಮೂಲಕ ವಿಲೇ ಮಾಡಲಾಗಿದೆ. ಈ ಪೈಕಿ, 18 ಕಬ್ಬಿಣದ ಅದಿರಿಗೆ ಸಂಬಂಧಿಸಿದ್ದು, ಉಳಿದ 3 ಸುಣ್ಣದ ಕಲ್ಲಿನ ಖನಿಜಕ್ಕೆ ಸಂಬಂಧಿಸಿದ್ದು. ಪ್ರಸಕ್ತ ಸಾಲಿನಲ್ಲಿ ಈವರೆಗೆ ಒಟ್ಟು 22 ಗಣಿ ಪ್ರದೇಶಗಳನ್ನು ಹರಾಜು ಮಾಡಲಾಗಿದೆ. 20 ಬ್ಲಾಕ್‌ಗಳ ಹರಾಜು ಪ್ರಕ್ರಿಯೆ ಪ್ರಗತಿಯಲ್ಲಿದೆ' ಎಂದೂ ಅವರು ವಿವರಿಸಿದರು.

ಗಣವೇಷ ಧರಿಸಿದ ಪತ್ರಕರ್ತರಿಗಷ್ಟೇ ಪ್ರವೇಶ!

ಕಲಬುರಗಿ: ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರ ಕಾರ್ಯಕ್ರಮದ ವರದಿ ಮಾಡಲು ಗುರುವಾರ ಸಂಜೆ ಇಲ್ಲಿನ ಖಮಿತಕರ್ ಭವನಕ್ಕೆ ತೆರಳಿದ್ದ ಪತ್ರಕರ್ತರಿಗೆ ಅಚ್ಚರಿ ಕಾದಿತ್ತು. ಏಕೆಂದರೆ, ಗಣವೇಷ ಧರಿಸಿ ಬಂದರೆ ಮಾತ್ರ ಒಳಗೆ ಪ್ರವೇಶ ನೀಡಲಾಗುವುದು ಎಂದು ಸಂಘಟಕರು ಪಟ್ಟು ಹಿಡಿದರು.

'ನಾವು ಪತ್ರಕರ್ತರು, ಕಾರ್ಯಕ್ರಮದ ವರದಿ ಮಾಡಲು ಬಂದಿದ್ದೇವೆ. ಸಂಘದ ಕಾರ್ಯಕರ್ತರಿಗೆ ಹೇಳಿದಂತೆ ನಮಗೂ ಗಣವೇಷ ಹಾಕಿಕೊಂಡು ಬಾ ಎಂದರೆ ಹೇಗೆ' ಎಂದು ಪತ್ರಕರ್ತರು ಪ್ರಶ್ನಿಸಿದಾಗ, 'ಚರ್ಚೆ ಮಾಡುವ ಸಮಯ ಇದಲ್ಲ. ನಾವು ಮುಂಚೆಯೇ ಗಣ ವೇಷ ಹಾಕಿಕೊಂಡು ಬರುವ ಪತ್ರಕರ್ತರಿಗೆ ಮಾತ್ರ ಪ್ರವೇಶ ಎಂದು ಹೇಳಿದ್ದೆವು. ಗಣವೇಷವಿಲ್ಲದವರಿಗೆ ಪ್ರವೇಶವಿಲ್ಲ' ಎಂದರು. ಹೀಗಾಗಿ, ವರದಿಗೆಂದು ತೆರಳಿದ ಪತ್ರಕರ್ತರು ಅಲ್ಲಿಂದ ವಾಪಸಾದರು.

ಪಲ್ಸ್ ಪೋಲಿಯೊ ಅಭಿಯಾನ ಮುಂದಕ್ಕೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಪಲ್ಸ್ ಪೋಲಿಯೊ ಹನಿ ನೀಡುವ ಕಾರ್ಯಕ್ರಮವನ್ನು ಫೆ.27ಕ್ಕೆ ಮುಂದೂಡಲಾಗಿದೆ.

ಈ ಕಾರ್ಯಕ್ರಮ ಇದೇ 23ಕ್ಕೆ ರಾಷ್ಟ್ರದಾದ್ಯಂತ ನಡೆಯಬೇಕಿತ್ತು. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿವೆ. ಹೀಗಾಗಿ, ಕೆಲ ರಾಜ್ಯಗಳು ಈ ಕಾರ್ಯಕ್ರಮವನ್ನು ಮುಂದೂಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದವು. ಅದರಂತೆ ದಿನಾಂಕವನ್ನು ಮರುನಿಗದಿ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಡ್ಡಾಯ ವೈದ್ಯಕೀಯ ಸೇವೆ: ನೋಟಿಸ್

ಬೆಂಗಳೂರು: 'ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪೂರ್ಣಗೊಳಿಸಿದ ಎಲ್ಲ ವಿದ್ಯಾರ್ಥಿಗಳು ಒಂದು ವರ್ಷ ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯ ಸೇವೆ ಸಲ್ಲಿಸಬೇಕು' ಎಂಬ ಕಾನೂನು ಪ್ರಶ್ನಿಸಿದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ನಗರದ ಡಾ.ಕೀರ್ತಿ ಕರ್ನೂಲ್ ಸೇರಿದಂತೆ 170 ವೈದ್ಯ ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲೆ ಅಕ್ಕಮಹಾದೇವಿ ಹಿರೇಮಠ, 'ಕೇಂದ್ರ ಕೌನ್ಸೆಲಿಂಗ್ ಮೂಲಕ ಅರ್ಜಿದಾರರು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದಿದ್ದರು. ಪ್ರವೇಶ ಪಡೆಯುವಾಗ ಕಡ್ಡಾಯ ಸೇವೆಯ ಬಗ್ಗೆ ಮಾಹಿತಿ ನೀಡಿರಲಿಲ್ಲ. ಆದರೆ, ಈಗ ಅವರಿಂದ ಬಾಂಡ್‌ಗಳನ್ನು ಬರೆಯಿಸಿಕೊಂಡು ಗ್ರಾಮೀಣ ಸೇವೆಗೆ ಒತ್ತಡ ಹೇರಲಾಗುತ್ತಿದೆ. ಇದು ಕಾನೂನು ಬಾಹಿರ' ಎಂದು ವಿವರಿಸಿದರು. ವಿಚಾರಣೆಯನ್ನು ಫೆ. 22ಕ್ಕೆ ಮುಂದೂಡಲಾಗಿದೆ.

ಕೊಪ್ಪಳ: ಗವಿಮಠದ ಜಾತ್ರಾ ಮಹೋತ್ಸವ ರದ್ದು

ಕೊಪ್ಪಳ: ಇದೇ 19ರಿಂದ ಒಂದು ತಿಂಗಳ ಕಾಲ ನಡೆಯಬೇಕಿದ್ದ ಇಲ್ಲಿಯ ಗವಿಮಠದ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವವನ್ನು ಕೋವಿಡ್ ಕಾರಣ ರದ್ದುಪಡಿಸಲಾಗಿದೆ.

ಜ.19ರಂದು ನಡೆಯಲಿದ್ದ ಮಹಾರಥೋತ್ಸವ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮಗಳನ್ನು ರದ್ದು ಮಾಡಲಾಗಿದೆ ಎಂದು ಮಠದ ಆಡಳಿತಾಧಿಕಾರಿ ತಿಳಿಸಿದ್ದಾರೆ.

ಶತಮಾನಗಳಿಂದ ನಡೆದುಕೊಂಡು ಬಂದ ಸಂಪ್ರದಾಯ ಮುರಿಯದಂತೆ, ಮಠದ ಆವರಣದೊಳಗೆ ಧಾರ್ಮಿಕ ವಿಧಿ-ವಿಧಾನಗಳನ್ನು ಸೀಮಿತ ಭಕ್ತರ ನಡುವೆ ಆಚರಿಲಾಗುತ್ತದೆ. ಗವಿಸಿದ್ಧೇಶ್ವರ ದರ್ಶನಕ್ಕೆ ಅವಕಾಶವಿದೆ. ಕೋವಿಡ್ ಪ್ರಕರಣಗಳು ಹೆಚ್ಚಾದರೆ ಮಠಕ್ಕೆ ಪ್ರವೇಶವನ್ನು ನಿರ್ಬಂಧಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಮೋದಿ ನಿಂದನೆ, ಅಸಭ್ಯ ವರ್ತನೆ ಆರೋಪಿಸಿ ಹಲ್ಲೆ

ಮೈಸೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ನಿಂದಿಸಿದರು ಹಾಗೂ ಹೆಣ್ಣುಮಕ್ಕಳೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿ ಯುವಕನೊಬ್ಬನನ್ನು ಬಸ್‌ನಿಂದ ಕೆಳಗೆ ಇಳಿಸಿ ಮಹಿಳೆಯರು ಹಲ್ಲೆ ನಡೆಸಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಗುರುವಾರ ಹರಿದಾಡಿತ್ತು.

ವಿಡಿಯೋದಲ್ಲೇನಿದೆ?: ಯುವಕ, 'ನಾನು ಮಹಿಳೆಯರಿಗೆ ಆ ಮಾತು ಹೇಳಿಲ್ಲ. ಮೋದಿಗೆ ಹೇಳಿದ್ದು' ಎಂದು ಹೇಳುತ್ತಾನೆ. ಆಗ ಕಾಲಿನಿಂದ ಒದೆಯುವ ಮಹಿಳೆಯೊಬ್ಬರು 'ದೇಶದ ಪ್ರಧಾನಿಯನ್ನು ಏಕೆ ನಿಂದಿಸಬೇಕು. ಹಿಂದೂಗಳ ಮೂತ್ರ ಕುಡಿದು ನೀವು ಬದುಕಿದ್ದೀರಿ' ಎಂದು ದೂರುತ್ತಾರೆ. ಉಳಿದ ಮಹಿಳೆಯರು 'ನಮಗೂ ಅವಾಚ್ಯವಾಗಿ ದಿನವೂ ನಿಂದಿಸುತ್ತಾನೆ' ಎಂದು ದೂರಿರುವ ದೃಶ್ಯ ವಿಡಿಯೊದಲ್ಲಿದೆ.

ಈ ವಿಡಿಯೊ ಜಾಡು ಹಿಡಿದಿರುವ ವಿ.ವಿ.ಪುರಂ ಠಾಣೆ ಪೊಲೀಸರು ಘಟನೆ ನಡೆದಿದೆ ಎನ್ನಲಾದ ಸ್ಯಾನಿಟೋರಿಯಂ ಆಸುಪಾಸಿನಲ್ಲಿ ವಿಚಾರಣೆ ನಡೆಸಿದ್ದಾರೆ.

'ಜ. 11ರಂದು ಸಂಜೆ 5 ಗಂಟೆಗೆ ಗಲಾಟೆ ನಡೆದಿತ್ತು ಎಂಬ ಮಾಹಿತಿಯನ್ನು ಸ್ಥಳೀಯರು ನೀಡಿದ್ದಾರೆ. ಆ ಸಮಯದಲ್ಲಿ ಇಲ್ಲಿ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳ ಚಾಲಕರು ಹಾಗೂ ನಿರ್ವಾಹಕರು ತಮ್ಮ ಬಸ್‌ಗಳಲ್ಲಿ ಇಂತಹ ಘಟನೆ ನಡೆದಿಲ್ಲ ಎಂದು ಹೇಳಿದ್ದಾರೆ. ಈ ಕುರಿತು ಯಾರೂ ದೂರು ನೀಡಿಲ್ಲ. ಸ್ವಯಂ-ಪ್ರೇರಿತವಾಗಿ ತನಿಖೆ ಆರಂಭಿಸಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕೃಷಿ ವಿಶ್ವವಿದ್ಯಾನಿಲಯ

ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ, ಬೆಂಗಳೂರು–560065.

ಟೆಂಡರ್ ಪ್ರಕಟಣೆ ಸಂಖ್ಯೆ.ಆಅ/ಟಿ.ಎನ್/461/2021–22, ದಿನಾಂಕ: 05–01–2022 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–1ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ/ಪಿಡಬ್ಲ್ಯೂಡಿ/ಗುತ್ತಿಗೆದಾರರುಗಳಿಂದ ಕ್ರಮ ಸಂಖ್ಯೆ. 1 ರಿಂದ 12ರ ಕೆಲಸಕ್ಕೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್: www.eproc.karnataka.gov.in ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು. ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.eproc.karnataka.gov.in ಇಂದ ಪಡೆಯಬಹುದು ಮತ್ತು ಟೆಂಡರ್ ಸಲ್ಲಿಸುವ ಕೊನೆ ದಿನಾಂಕ : 25.01.2022ರಂದು ಅಪರಾಹ್ನ 4.00 ಗಂಟೆಯವರೆಗೆ ಆಗಿರುತ್ತದೆ. ಹಣಕಾಸಿನ ಬಿಡ್ಡನ್ನು ದಿನಾಂಕ : 28.01.2022 ರಂದು ಬೆಳಗ್ಗೆ 10.30ಕ್ಕೆ ತೆರೆಯಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಮೀಸಲಿರಿಸಿದೆ ಕಾಮಗಾರಿಗಳನ್ನು ರ್‍ಯಾಂಡೋಮೈಜೇಶನ್ ಪದ್ಧತಿ ಮೂಲಕ ಹಂಚಿಕೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ. 080–23332765 ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ – support@eprochelpdesk.com ಅಥವಾ 8046010000 ಮತ್ತು 8068948777.

ಸಹಿ/–
ಆಸ್ತಿ ಅಧಿಕಾರಿಗಳು

DIPR/DDU/Zen/RO-2840/2021-22

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು

ಅಲ್ಪಾವಧಿ ಐಟಂವಾರ್ ಟೆಂಡರ್ ಅಧಿಸೂಚನೆ ಸಂಖ್ಯೆ 06/2021–22 ದಿನಾಂಕ: 10.01.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ ಮೈಸೂರು ಇವರಿಂದ "ಮೈಸೂರಿನಲ್ಲಿ ಯುದ್ಧ ಸ್ಮಾರಕ ಸ್ಥಾಪಿಸುವ ಕಾಮಗಾರಿ" (INDENT NO:144206) ಕಾಮಗಾರಿಗೆ ಲೆಕ್ಕ ಶೀರ್ಷಿಕೆ 8443 ಅಡಿಯಲ್ಲಿ KW-3 ರ ನಿಬಂಧನೆ ಮತ್ತು ಷರತ್ತುಗಳನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಟೆಂಡರ್‌ನ್ನು (http://eproc.karnataka.gov.in) ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು **ದಿನಾಂಕ:25.01.2022 ರಂದು ಸಂಜೆ 4.00 ಘಂಟೆವರೆಗೆ** ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ **ಟೆಂಡರ್‌ಗೆ ಇಟ್ಟ ಮೊತ್ತ ರೂ.86.97 ಲಕ್ಷ**ಗಳಾಗಿರುತ್ತದೆ. ಮತ್ತು ಕಾಮಗಾರಿಯ **ಇ.ಎಂ.ಡಿ. ಮೊತ್ತ ರೂ.1,74 ಲಕ್ಷ**ಗಳಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.

DIPR/DDMYS/MCA/811/2020-21

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಾರ್ಯಾಲಯ,
ಜಲಮಂಡಳಿ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580001.
ದೂರವಾಣಿ :0836–2447090 ಫ್ಯಾಕ್ಸ್ : 0836–2446890

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karntaka.gov.in) ಮೂಲಕ ಕೆಳಕಂಡ ಇಡುಗಂಟು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಕಾರವಾರ ನಗರಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ, ಬಿಡ್‌ಗೆ ಇಟ್ಟ ಬಂಡವಾಳ ಮೊತ್ತ ರೂ.1735.35 ಲಕ್ಷಗಳು; ನಿರ್ವಹಣೆ ಮತ್ತು ದುರಸ್ತಿ ಮೊತ್ತ ರೂ.162.89 ಲಕ್ಷಗಳು. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು. **ವರ್ಕ್–ಇಂಡೆಂಟ್/3046/3ನೇ ಕರೆ**

ಟೆಂಡರ್ ದಿನಾಂಕಗಳು:

1) ಬಿಡ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನಲೋಡ್ ಮಾಡಿಕೊಳ್ಳುವ ದಿನಾಂಕ 14–01–2022 ಸಮಯ 11:00 ಗಂಟೆಯ ನಂತರ 2) ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣಗಳಿಗಾಗಿ ನಿಗದಿಪಡಿಸಿದ ದಿನಾಂಕ 21–01–2022 ಸಮಯ11:00 ಗಂಟೆಗೆ 3) ಟೆಂಡರ್ ಪೂರ್ವ ಸಭೆ ದಿನಾಂಕ 21–01–2022 ಸಮಯ 11:00 ಗಂಟೆಗೆ 4) ಬಿಡ್ ಸಲ್ಲಿಸಲು / ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 03–02–2022 ಸಮಯ 17:30 ಗಂಟೆಯ ವರೆಗೆ 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 05–02–2022 ಸಮಯ 11:00 ಗಂಟೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ದಯವಿಟ್ಟು ಸಂಪರ್ಕಿಸಬಹುದು.

ಸಹಿ/–(ಕೆ. ವಿ. ಶ್ರೀಕೇಶವ)
ಮುಖ್ಯ ಅಭಿಯಂತರು
ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಧಾರವಾಡ

ವಾ.ಸಾ.ಇ./ಧಾರವಾಡ/887/2021–22ದೇಶಪಾಂಡೆಪಬ್ಲಿಸಿಟಿ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in

ದಿನಾಂಕ: 13.01.2022

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಪ್ರಧಾನ ವ್ಯವಸ್ಥಾಪಕರು (ಹೆಚ್‌ಆರ್) ಇವರು, ಬಿಎಂಆರ್‌ಸಿಎಲ್ ಯೋಜನೆಗೆ ಈ ಕೆಳಗೆ ವಿವರಸಿರುವಂತೆ ಪ್ರತ್ಯೇಕ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ – **(1) ಮಾನವ ಸಂಪನ್ಮೂಲ ಸೇವೆ (2) ಹೌಸ್ ಕೀಪಿಂಗ್ ಸೇವೆ ಮತ್ತು (3) ಭದ್ರತಾ ಸಿಬ್ಬಂದಿ ಸೇವೆ.**

ಟೆಂಡರ್ ಪ್ರಕಟಣೆ ಸಂಖ್ಯೆ	ಕೆಲಸದ ಹೆಸರು	ಬಿಡ್‌ಗಳನ್ನು ಸಲ್ಲಿಸಲು ದಿನಾಂಕ ಮತ್ತು ಸಮಯ (ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು ಒಂದು ಲಕೋಟೆಯಲ್ಲಿ)	ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ
1) ಬಿಎಂಆರ್‌ಸಿಎಲ್/0002/ಎಡಿಎಂ/2022/ಮಾನವ ಸಂಪನ್ಮೂಲ/ಸಿ30151	ಬಿಎಂಆರ್‌ಸಿಎಲ್ ಕಾರ್ಪೊರೇಟ್ ಕಛೇರಿ/ಯೋಜನೆ ಮತ್ತು ಇತರೆ ನಿವೇಶನ ಕಛೇರಿಗಳಿಗೆ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸಲು ಟೆಂಡರ್.	12.02.2022, ಮಧ್ಯಾಹ್ನ 3.00 ಗಂಟೆಗೆ	12.02.2022, ಮಧ್ಯಾಹ್ನ 3.30 ಗಂಟೆಗೆ
2) ಬಿಎಂಆರ್‌ಸಿಎಲ್/0003/ಎಡಿಎಂ/2022/ಹೌಸ್‌ಕೀಪಿಂಗ್/ಸಿ30152	ಬಿಎಂಆರ್‌ಸಿಎಲ್ ಕಾರ್ಪೊರೇಟ್ ಕಚೇರಿ/ಯೋಜನೆ ಮತ್ತು ಇತರೆ ನಿವೇಶನ ಕಛೇರಿಗಳಿಗೆ ಹೌಸ್‌ಕೀಪಿಂಗ್ ಸೇವೆಗಳನ್ನು ಒದಗಿಸಲು ಟೆಂಡರ್.	12.02.2022, ಮಧ್ಯಾಹ್ನ 3.00 ಗಂಟೆಗೆ	12.02.2022, ಮಧ್ಯಾಹ್ನ 3.30 ಗಂಟೆಗೆ
3) ಬಿಎಂಆರ್‌ಸಿಎಲ್/0004/ಎಡಿಎಂ/2022/ಭದ್ರತಾ ಸಿಬ್ಬಂದಿ/ಸಿ30153	ಬಿಎಂಆರ್‌ಸಿಎಲ್ ಕಾರ್ಪೊರೇಟ್ ಕಛೇರಿ/ಯೋಜನೆ ಮತ್ತು ಇತರೆ ನಿವೇಶನ ಕಛೇರಿಗಳಿಗೆ ಭದ್ರತಾ ಸಿಬ್ಬಂದಿ ಸೇವೆಗಳನ್ನು ಒದಗಿಸಲು ಟೆಂಡರ್.	12.02.2022, ಮಧ್ಯಾಹ್ನ 3.00 ಗಂಟೆಗೆ	12.02.2022, ಮಧ್ಯಾಹ್ನ 3.30 ಗಂಟೆಗೆ

ಪ್ರತಿ ಟೆಂಡರ್‌ಗೆ ಟೆಂಡರ್ ದಸ್ತಾವೇಜುಗಳ ದರ: **ರೂ. 5000/- (ರೂ.ಐದು ಸಾವಿರಗಳು ಮಾತ್ರ).** ಎಲ್ಲಾ ಟೆಂಡರ್ ದಸ್ತಾವೇಜುಗಳ ಮಾರಾಟ: **14.01.2022 ರಿಂದ 25.01.2022 ರವರೆಗೆ.** ಹೆಚ್ಚಿನ ವಿವರಗಳು ಬಿಎಂಆರ್‌ಸಿಎಲ್ ವೆಬ್‌ಸೈಟ್: **www.bmrc.co.in** ನಲ್ಲಿ ಟೆಂಡರ್ ಸೆಕ್ಷನ್ ಅಡಿ ದಿನಾಂಕ **14.01.2022 ರಿಂದ ಲಭ್ಯವಿದೆ.**

ಸಹಿ/- ಪ್ರಧಾನ ವ್ಯವಸ್ಥಾಪಕರು (ಮಾ.ಸಂ.)

ನಗರಸಭಾ ಕಾರ್ಯಾಲಯ, ಅರಸೀಕೆರೆ

ದೂ.ಸಂ:08174–232201 E mail:itstaff_ulb_arasikere@yahoo.com
ಫ್ಯಾಕ್ಸ್ ನಂ: 08174–233274 ವೆಬ್‌ಸೈಟ್ www.arasikerecity..mrc.gov.in
ನಂ:ನ.ಸ.ಅ./ಸಿ.ಆರ್/ಸ.ಕಾ.ಅ/ಟೆಂಡರ್/15ನೇಹ.ಕಾ/01/2021–22 ದಿನಾಂಕ:12.01.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಅರಸೀಕೆರೆ ನಗರಸಭಾ ವ್ಯಾಪ್ತಿಯಲ್ಲಿ 2021–22 ನೇ ಸಾಲಿನ 15 ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಅನುದಾನದಡಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕತೆ ಅಧ್ಯಾದೇಶ 2000 ರಂತೆ ಹಾಗೂ STANDARD TENDER DOCUMENT ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ/06/ಪಿಸಿಎಲ್ /2006, ಬೆಂಗಳೂರು ರಂತೆ ಏಕಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ Inttp//www.eproc.karnataka.gov.inನ್ನು ಅಥವಾ ಕಚೇರಿಯ ಅಭಿಯಂತರರ ಶಾಖೆಯನ್ನು ಸಂಪರ್ಕಿಸಬಹುದಾಗಿದೆ. 1.ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್ ಸೈಟ್ ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: 01–02–2022 ರಂದು ಸಂಜೆ 23:58 ಗಂಟೆ. 2.ಟೆಂಡರ್ ತೆರೆಯುವ ದಿನಾಂಕ: 03–02–2022 ರ ಬೆಳಗ್ಗೆ 11.00 ಗಂಟೆ.

ಸಹಿ/– (ಬಸವರಾಜು ಟಾಕಪ್ಪ ಶಿಗ್ಗಾಂವಿ)
ಪೌರಾಯುಕ್ತರುರು, ನಗರಸಭಭೆ ಅರಸೀಕೆರೆ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/640/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ–4/ಟೆಂಡರ– 18/2021–22/3955 ದಿನಾಂಕ: 07.01.2022

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–3) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.
(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 29.01.2022 16.30 ಗಂಟೆ ವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 31.01.2022 16.30 ಗಂಟೆ ವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 01.02.2022 17.00 ಗಂಟೆ ವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 02.02.2022 17.00 ಗಂಟೆ ವರೆಗೆ
ಕಾಮಗಾರಿಯ ಹೆಸರು: ಲೆಕ್ಕ ಶೀಷಿಕೆ: 5054-MDR Improvements Appendix 'E' During 2020-21 ಯೋಜನೆ: (1) ವರ್ಕ ಇಂಡೆಂಟ್: 143826 ಲೆಕ್ಕ ಶೀಷಿಕೆ: 5054-MDR Bridge Improvements Appendix 'E' During 2020-21 ಯೋಜನೆ: (2) ವರ್ಕ ಇಂಡೆಂಟ್: 143828 ಲೆಕ್ಕ ಶೀಷಿಕೆ: 3054-MDR Improvements Flood Damage works ಯೋಜನೆ: (2) ವರ್ಕ ಇಂಡೆಂಟ್: 145998
(ಕೆಡಬ್ಲೂ–3) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "eproc.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

DIPR/ADK/MCA/668/21-22 dt.13.01.2022

ತುಮಕೂರು ಮಹಾನಗರ ಪಾಲಿಕೆ, ತುಮಕೂರು

ದೂ–2278480, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂಖ್ಯೆ:ತುಮಪಾ/ಆಶಾ/ವಿ.ಯೋ.ವ/ಸಿಆರ್–01/2021–22 ದಿನಾಂಕ: 11.01.2022

ಮರು–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ವಚ್ಛಭಾರತ್ ಮಿಷನ್ ನಿಧಿಯಡಿಯಲ್ಲಿ ಆರೋಗ್ಯಶಾಖೆಯಿಂದ ತುಮಕೂರು ಮಹಾನಗರ ಪಾಲಿಕೆಗೆ ಅವಶ್ಯಕವಿರುವ 93 ಸಂಖ್ಯೆಯ ಆಟೋ–ಟಿಪ್ಪರ್/ಮಿನಿ–ಟಿಪ್ಪರ್ ವಾಹನಗಳನ್ನು ಖರೀದಿಸುವ ಕಾಮಗರಿಗೆ ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್‌ನ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಮರು–ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಬಾಗವಹಿಸಲು ಇಚ್ಛಿಸುವವರು ಮಾಹಿತಿಯನ್ನು http://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.
ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ: 1. ಇ–ಪೋರ್ಟಲ್‌ನಲ್ಲಿ ಮರು–ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: **13.01.2022** ರಿಂದ ದಿನಾಂಕ: **27.01.2022** ರವರೆಗೆ. 2. ಪ್ರಿ–ಬಿಡ್ ಮೀಟಿಂಗ್ ದಿನಾಂಕ: **21.01.2022** ಬೆಳಿಗ್ಗೆ 11.30ಗಂಟೆ 3. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **27.01.2022** ರಂದು ಸಂಜೆ 4.30 ಗಂಟೆವರೆಗೆ 4. ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **29.01.2022** ರಂದು ಬೆಳಿಗ್ಗೆ 11.00 ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ, ತುಮಕೂರು

DIPR/TUM/534/MCA/2021-22

NMDC Limited

(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad - 500 028.
Corporate Identity Number (CIN) - L13100TG1958GOI001674

PC DEPARTMENT - e-tender Notification

Tender Enquiry No: HO(PC)/DNM/KIOM/HEMM/21MT, Dated : 14-01-2022
MSTC Ref. No. : NMDC/HO/78/21-22/ET/380

NMDC Limited, A "NAVARATNA" Public Sector Company under Ministry of Steel, Govt. of India invites **online bids** in two bid system from Domestic bidders for **"Hiring of Plant & Mining Machineries for excavation of 210 LT (+/- 20%) of ROM and 48LT (+/- 20%) of waste / low grade iron ore in three years at the rate of 70LT (+/- 20%) of ROM and 16 LT (+/- 20%) of waste / low grade iron ore per year in KIOM and extendable by one more year with mutual consent"** of Kumaraswamy Iron Ore Mine.

The detailed NIT and Bid documents can be viewed and / or downloaded from **14-01-2022, 11:00 Hrs. onwards from following website links ;**

1. NMDC website - **https://www.nmdc.co.in/nmdctender/default.aspx**
2. Central Public Procurement Portal - **https://www.eprocure.gov.in/epublish/app** and search tender through tender enquiry number.
3. MSTC portal - **https://www.mstcecommerce.com/eprochome/nmdc/buyer_login.jsp**

For further help refer to 'vendor guide' given in MSTC website.

The last date for submission of tender is **15:30 Hrs on 17-02-2022** and the tender will be opened at **16:00 Hours** on the same day.

The bidders are requested to submit their bids online through MSTC Limited website. The details of submission of bid through online are given in NIT. The Bidders on regular basis are required to visit the above-mentioned websites for corrigendum / clarifications / time extension / amendments, if any, at a future date.

For further clarifications, undersigned can be contacted :
Executive Director (PC), NMDC Limited, Hyderabad, Tel No. +91-040-23538765, email : **hopc@nmdc.co.in**

Executive Director (PC)

ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.

ಸಂಖ್ಯೆ: 27/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸ.ಇಂ–1/JJM/2031-2041/2021-22 (Call-2) ದಿನಾಂಕ: 12.01.2022

ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ **JJM ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ರಾಮನಗರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು** ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ನಿರ್ವಹಿಸಲು ವಿವರಗಳು ಈ ಕೆಳಕಂಡಂತಿವೆ.
ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ. 140.04 ಲಕ್ಷಗಳು.** ಇ.ಎಂ.ಡಿ: **ರೂ. 2.10 ಲಕ್ಷಗಳು.** ಕನಿಷ್ಟ ಟೆಂಡರ್‌ಗಿಟ್ಟ ಮೊತ್ತ: **ರೂ. 61.63 ಲಕ್ಷಗಳು.** ಇ.ಎಂ.ಡಿ: **ರೂ. 1.23 ಲಕ್ಷಗಳು.** ಕಾಲಾವಧಿ: **06 ತಿಂಗಳು.**
ಬಿಡ್ ಪೂರ್ವಬಾವಿ ಸಭೆ **ದಿನಾಂಕ: 14.01.2022ರ ಬೆಳಗ್ಗೆ 11:00 ಗಂಟೆಗೆ.** ಸ್ಥಳ: **ಕಾರ್ಯಪಾಲಕ ಅಭಿಯಂತರರ ಕಛೇರಿ, 3ನೇ ಮಹಡಿ, ಪಂಚಾಯತ್ ಭವನ ರಾಮನಗರ.**
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 19.01.2022ರ ಸಂಜೆ 5.30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 21.01.2022ರ ಬೆಳಗ್ಗೆ 11:00 ಗಂಟೆಯ ನಂತರ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 24.01.2022ರ ಬೆಳಗ್ಗೆ 11:00 ಗಂಟೆಯ ನಂತರ.**
ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ / ವೆಬ್‌ಸೈಟ್ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾ.ಕು.ನೀ&ನೈ ಇಲಾಖೆ, ರಾಮನಗರ ವಿಭಾಗ, ರಾಮನಗರ

ವಾಸಾಸಂಇ/ರಾನ/ಬ್ರಾಂಜ್/428/2021–22

ಭಾರತ ಸರ್ಕಾರ
ವಿಶೇಷ ಭೂಸ್ವಾಧೀನಾಧಿಕಾರಿ ಕಛೇರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು

2ನೇ ಮಹಡಿ, ಸೆಂಟ್ರಲ್ ಅವೆನ್ಯು, ಎಸ್‌ಬಿಐ ಬ್ಯಾಂಕು ಸಮೀಪ, ಎನ್‌ಟಿ ರಸ್ತೆ, ಶಿವಮೊಗ್ಗ–577201. ದೂರವಾಣಿ: 08182–220020

ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಸಚಿವಾಲಯ

ಅಧಿಸೂಚನೆ

ನವಹೆಹಲಿ, ದಿನಾಂಕ: 26ನೇ ಅಕ್ಟೋಬರ್, 2021

ಎಸ್.ಓ. 4456(ಇ) ಕೇಂದ್ರ ಸರ್ಕಾರ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಅನುಸೂಚಿಯಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 206 ರಲ್ಲಿ ಕಿ.ಮೀ. 132+00 ರಿಂದ ಕಿ.ಮೀ. 174+000 ರವರೆಗಿನ (ವಿಶೇಷ ಭೂಸ್ವಾಧೀನಾಧಿಕಾರಿಗಳು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತುಮಕೂರು–ಶಿವಮೊಗ್ಗ) ರಸ್ತೆ ನಿರ್ಮಿಸಲು (ಅಗಲಗೊಳಿಸಲು/ದ್ವಿಪಥ ಪೇವ್ಡ್ ಶೋಲ್ಡರ್/ನಾಲ್ಕು ಪಥದ ರಸ್ತೆ ನಿರ್ಮಾಣ) ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಕ್ರಿಯೆ ಮಾಡುವ ಸಲವಾಗಿ ಭೂಸ್ವಾಧೀನಪಡಿಸಿಕೊಳ್ಳಲು ಅವಶ್ಯಕವಾಗಿರುತ್ತದೆ. ಆದಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ರ ಪ್ರಕಾರ ನಿಯಮ 3ಎ ರ ಉಪನಿಯಮ 1ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಚಿಕ್ಕಮಗಳೂರು ಜಿಲ್ಲೆ ವ್ಯಾಪ್ತಿಯ ವಿವಿಧ ಗ್ರಾಮಗಳ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವುದಾಗಿ ಈ ಮೂಲಕ ಘೋಷಿಸಿರುತ್ತದೆ.

ಸದರಿ ಜಮೀನುಗಳ ಬಗ್ಗೆ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯ ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು (21) ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ (1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ವಿಶೇಷ ಭೂಸ್ವಾಧೀನಾಧಿಕಾರಿಗಳವರ ಕಛೇರಿ, ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ, ಎನ್.ಹೆಚ್. 206 ಶಿವಮೊಗ್ಗ ಇವರಿಗೆ ಲಿಖಿತ ಮೂಲಕ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದರನ್ನಾಗಲಿ ಅಥವಾ ಅವರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಎಂಬುದು ಕಂಡು ಬಂದಲ್ಲಿ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಿ ಆದೇಶಿಸಬಹುದಾಗಿರುತ್ತದೆ.

ರಾಷ್ಟ್ರೀಯ ಹೆದ್ದಾರಿ ಕಾಯ್ದೆಯ 1956 (1956ರ 48) ಪ್ರಕಾರ ಸೆಕ್ಷನ್ 3ಸಿ (2) ರಂತೆ ಸಕ್ಷಮ ಪ್ರಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರು ಮಾಡಿದ ಆದೇಶ ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶೆಗಳು ಮತ್ತು ದಾಖಲೆಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿವುಳ್ಳವರು ಸಕ್ಷಮ ಪ್ರಾಧಿಕಾರಿಯವರ ಕಚೇರಿಯಲ್ಲಿ ಪರಿಶೀಲಿಸಬಹುದಾಗಿದೆ.

ಸಹಿ/–
ಮೇಘನಾ ಆರ್. ಕೆ.ಎ.ಎಸ್
ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ
ರಾಷ್ಟ್ರೀಯ ಹೆದ್ದಾರಿ–206, (ತುಮಕೂರು-ಶಿವಮೊಗ್ಗ ವಿಭಾಗ), ಶಿವಮೊಗ್ಗ.

ಅನುಸೂಚಿ

ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ರಾಹೆ–206 ಕಿ.ಮೀ. 132.000 ರಿಂದ ಕಿ.ಮೀ. 174.00 ರ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ, ಇತರೆ, ಈ ಭೂಮಿಯ ಚೌಕಟ್ಟಿನಲ್ಲಿ ಉಳಿಯುವುದನ್ನು ಸ್ವಾಧೀನಪಡಿಸಲಾಗುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ : ಕರ್ನಾಟಕ — ಜಿಲ್ಲೆ : ಚಿಕ್ಕಮಗಳೂರು

ಕ್ರ ಸಂ.	ಸರ್ವೆ ನಂಬರು	ಜಮೀನಿನ ತರಹೆ	ಜಮೀನಿನ ಸ್ವರೂಪ	ಜಮೀನಿನ ವಿಸ್ತೀರ್ಣ ಹೆಕ್ಟೇರ್ಸ್
ತಾಲ್ಲೂಕು : ಕಡೂರು ಗ್ರಾಮ : ಬೀರೂರು (ಗ್ರಾಮೀಣ)				
1	120/2ಎ	ಖಾಸಗಿ	ಖುಷ್ಕಿ	0.0101
2	120/2ಸಿ	ಖಾಸಗಿ	ಖುಷ್ಕಿ	0.0202
3	120/5	ಖಾಸಗಿ	ಖುಷ್ಕಿ	0.0176
4	123/2	ಖಾಸಗಿ	ಖುಷ್ಕಿ	0.0404
5	14	ಸರಕಾರ	ಖುಷ್ಕಿ	0.0606
6	17	ಖಾಸಗಿ	ಭಾಗಾಯ್ತು	0.1515
7	18	ಸರಕಾರ	ಖುಷ್ಕಿ/ಭಾಗಾಯ್ತು	0.2626
8	21	ಖಾಸಗಿ	ಭಾಗಾಯ್ತು	0.1161
9	22	ಖಾಸಗಿ	ಖುಷ್ಕಿ/ಭಾಗಾಯ್ತು	0.0126
10	23/2	ಖಾಸಗಿ	ಭಾಗಾಯ್ತು	0.0202
11	6/1	ಖಾಸಗಿ	ಭಾಗಾಯ್ತು/ಖುಷ್ಕಿ	0.0505
12	6/2	ಖಾಸಗಿ	ಭಾಗಾಯ್ತು/ಖುಷ್ಕಿ	0.0354
13	9/2	ಖಾಸಗಿ	ಎಎಲ್‌ಎನ್	0.0303
ಗ್ರಾಮ: ಬೀರೂರ್‌ಕಾವಲ್				
1	180	ಖಾಸಗಿ	ಖುಷ್ಕಿ	0.0101
2	181	ಖಾಸಗಿ	ಖುಷ್ಕಿ	0.0909
3	184	ಖಾಸಗಿ	ಖುಷ್ಕಿ	0.0404
4	185	ಖಾಸಗಿ	ಖುಷ್ಕಿ	0.0354
5	189	ಖಾಸಗಿ	ಖುಷ್ಕಿ	0.0202
6	378	ಖಾಸಗಿ	ಖುಷ್ಕಿ	0.0253
7	4–ಪೋಕಲ್	ಸರಕಾರ	ಸರಕಾರ	0.3940
8	88/3	ಖಾಸಗಿ	ಖುಷ್ಕಿ	0.0354
9	88/5	ಖಾಸಗಿ	ಖುಷ್ಕಿ	0.0152
10	88/6	ಖಾಸಗಿ	ಖುಷ್ಕಿ	0.0909
ಗ್ರಾಮ: ಹನುಮಾಪುರ				
1	10/1	ಖಾಸಗಿ	ಖುಷ್ಕಿ	0.0405
2	5/1	ಖಾಸಗಿ	ಖುಷ್ಕಿ	0.0253
3	5/2	ಖಾಸಗಿ	ಖುಷ್ಕಿ	0.0202
4	5/3	ಖಾಸಗಿ	ಖುಷ್ಕಿ	0.0101
5	9/2	ಖಾಸಗಿ	ಖುಷ್ಕಿ	0.0101
6	9/3	ಖಾಸಗಿ	ಖುಷ್ಕಿ	0.0253
7	9/4	ಖಾಸಗಿ	ಖುಷ್ಕಿ	0.0405
8	9/6	ಖಾಸಗಿ	ಖುಷ್ಕಿ	0.0101
ಗ್ರಾಮ: ಜೋಡಿ ತಿಮ್ಮಾಪುರ				
1	153	ಸರಕಾರ	ಸರಕಾರ	0.1515
ಗ್ರಾಮ: ಕೆ. ತಿಮ್ಮಾಪುರ				
1	12/4	ಖಾಸಗಿ	ತರಿ/ಭಾಗಾಯ್ತು	0.0051
ಗ್ರಾಮ: ಮಲ್ಲೇಶ್ವರ (ಗ್ರಾಮೀಣ)				
1	105/1	ಖಾಸಗಿ	ತರಿ	0.0278
2	64/2	ಖಾಸಗಿ	ತರಿ	0.0152
3	64/4	ಖಾಸಗಿ	ತರಿ	0.0101
4	64/5	ಖಾಸಗಿ	ತರಿ	0.0202
5	71	ಖಾಸಗಿ	ತರಿ	0.0202
ಗ್ರಾಮ: ಮತಿಘಟ್ಟ				
1	106/1ಸಿ	ಖಾಸಗಿ	ಎನ್‌ಎಕೆ	0.0304
ಗ್ರಾಮ: ನಾಗದೇವರಹಳ್ಳಿ				
1	84	ಖಾಸಗಿ	ಭಾಗಾಯ್ತು	0.0152
ಗ್ರಾಮ: ತುರುವನಹಳ್ಳಿ				
1	173	ಖಾಸಗಿ	ತರಿ	0.0505
2	174	ಖಾಸಗಿ	ತರಿ	0.0404
3	175/1	ಖಾಸಗಿ	ತರಿ	0.0076
4	182/2	ಖಾಸಗಿ	ತರಿ	0.0606
5	183/1	ಖಾಸಗಿ	ಖುಷ್ಕಿ	0.1616
6	188/1ಎ1	ಖಾಸಗಿ	ತರಿ	0.0404
7	188/1ಎ2	ಖಾಸಗಿ	ತರಿ	0.0278
8	188/1ಬಿ	ಖಾಸಗಿ	ತರಿ	0.0152
9	71	ಖಾಸಗಿ	ಖುಷ್ಕಿ	0.0606
10	77	ಖಾಸಗಿ	ತರಿ	0.0152
11	86/1	ಖಾಸಗಿ	ಭಾಗಾಯ್ತು	0.0253
12	87/1	ಖಾಸಗಿ	ತರಿ	0.0354
13	88/1	ಖಾಸಗಿ	ತರಿ	0.0253
14	91/2	ಖಾಸಗಿ	ತರಿ	0.0101
ಗ್ರಾಮ: ಯು. ಕೋಡಿಹಳ್ಳಿ				
1	2	ಖಾಸಗಿ	ಖುಷ್ಕಿ	0.3182
ಗ್ರಾಮ: ಉಳ್ಳಿನಾಗೂರು (ಗ್ರಾಮೀಣ)				
1	18/3	ಖಾಸಗಿ	ಖುಷ್ಕಿ	0.0657
2	26/1	ಖಾಸಗಿ	ಖುಷ್ಕಿ	0.0101
3	26/3	ಖಾಸಗಿ	ಖುಷ್ಕಿ	0.0101
ಗ್ರಾಮ: ವಿ ಎಲ್ ನಗರ				
1	10/3	ಖಾಸಗಿ	ಎನ್‌ಎಕೆ	0.0304
2	11	ಖಾಸಗಿ	ಎನ್‌ಎಕೆ	0.0405
3	12	ಖಾಸಗಿ	ಎನ್‌ಎಕೆ	0.0405
4	2	ಖಾಸಗಿ	ಎನ್‌ಎಕೆ	0.0506
5	9 / 2	ಖಾಸಗಿ	ಭಾಗಾಯ್ತು	0.0506
			ಒಟ್ಟು	3.2564

[F. No. NHAI/4lane TMK-SMG/LA/Karnataka/Notif./3a-Corrigendum/PIU-Shimoga/NH-206/3A]
RAJESH GUPTA, Director

‘ಉಡಾಳ’ ಅಲ್ಲ ಈ ‘ಅಲಂಕಾರ್ ವಿದ್ಯಾರ್ಥಿ’



ಪ್ರಮೋದ್

ರಂಗಭೂಮಿಯಲ್ಲಿ ಪಳಗಿ ಕಿರುತೆರೆಯಲ್ಲಿ ಮಿಂಚಿ, ‘ಗೀತಾ ಬ್ಯಾಂಗಲ್ ಸ್ಟೋರ್’ ಮೂಲಕ ‘ಪ್ರೀಮಿಯರ್ ಪದ್ಮಿನಿ’ಯಲ್ಲಿ ಚಂದನವನದ ಹೆದ್ದಾರಿಯಲ್ಲಿ ಪ್ರಯಾಣ ಮಾಡಿ ‘ರತ್ನನ್ ಪ್ರಪಂಚ’ ಸುತ್ತಿದ ‘ಉಡಾಳ ಬಾಬು ರಾವ್’ ಖ್ಯಾತಿಯ ನಟ ಪ್ರಮೋದ್ ಕೈಯಲ್ಲಿ ಆಫರ್‌ಗಳು ಹಲವಿವೆ.

ಅಭಿಲಾಷ್ ಪಿ.ಎಸ್.

- **ಹಳ್ಳಿಯಿಂದ ಪರದೆಯತ್ತ ಪಯಣ ಆರಂಭವಾಗಿದ್ದು ಹೇಗೆ?**

ನಾನು ಹುಟ್ಟಿದ್ದು ಬೆಂಗಳೂರಿನಲ್ಲಾದರೂ, ಅತ್ತೆ-ಮಾವನ ಜೊತೆಗೆ ಬೆಳೆದು ಓದಿದ್ದೆಲ್ಲ ಮದ್ದೂರಿನಲ್ಲಿ. ಚಿಕ್ಕಂದಿನಿಂದಲೂ ಕಲಾವಿದನಾಗುವ ಆಸೆ. ಶಾಲೆಯಲ್ಲಿ ನಾಟಕ, ಸ್ಕಿಟ್ ಬರೆಯುತ್ತಿದ್ದೆ, ನಾನೂ ಪಾತ್ರಗಳನ್ನು ಮಾಡುತ್ತಿದ್ದೆ. ಆದರೆ ಬೆಂಗಳೂರಿಗೆ ಬಂದು ದೊಡ್ಡ ನಟನಾಗಬೇಕು ಎನ್ನುವ ಆಸೆ ಇರಲಿಲ್ಲ. ಆಸೆ ಹುಟ್ಟಿದರೂ ಹೇಳಿಕೊಳ್ಳುತ್ತಿರಲಿಲ್ಲ.

ಪ್ರೌಢ ಶಿಕ್ಷಣದ ಬಳಿಕ ಪಿಯುಸಿಗೆ ಬೆಂಗಳೂರಿಗೆ ಬಂದೆ. ಪಿಯುಸಿಯಲ್ಲಿ ಉತ್ತಮ ಅಂಕ ಪಡೆದು ಸಿಇಟಿ ಮೂಲಕ ಎಂಜಿನಿಯರಿಂಗ್ ಸೀಟ್ ಕೂಡಾ ಪಡೆದಿದ್ದೆ. ಆದರೆ ಆಗ ನನ್ನ ತಲೆಯಲ್ಲಿ ನಟನಾಗುವ ಕನಸು ಹೆಮ್ಮರವಾಗಿ ಬೆಳೆದಿತ್ತು. ಪಿಯುಸಿ ಮಾಡಿದ ಕಾಲೇಜಿನಲ್ಲೇ ಬಿಎಸ್ಸಿ ಬಯೋಟೆಕ್ ಸೇರಿಕೊಂಡೆ. ನನಗೆ ಐಎಫ್‌ಎಸ್ ಮಾಡಬೇಕು ಎನ್ನುವ ಆಸೆ ಇತ್ತು. ಅಣ್ಣಾವ್ರ ‘ಗಂಧದಗುಡಿ’ ಸಿನಿಮಾ ನೋಡಿದ ಬಳಿಕ ಹುಟ್ಟಿಕೊಂಡಿದ್ದ ಕನಸದು. ಹಳ್ಳಿಯಲ್ಲಿ ಬೆಳೆದಿದ್ದೂ ಮತ್ತೊಂದು ಕಾರಣ. ಡಿಗ್ರಿ ಬಳಿಕ ಒಂದೋ ನಟನಾಗುತ್ತೇನೆ ಇಲ್ಲವೇ ಐಎಫ್‌ಎಸ್ ಮಾಡುತ್ತೇನೆ ಎನ್ನುವ ಎರಡು ಆಯ್ಕೆ ಇಟ್ಟುಕೊಂಡಿದ್ದೆ. ಡಿಗ್ರಿ ಕೊನೆಯ ಸೆಮಿಸ್ಟರ್‌ನಲ್ಲಿ ನಟನಾಗಬೇಕು ಎನ್ನುವ ದೃಢ ನಿರ್ಧಾರ ಮಾಡಿದೆ.

- **ಕಿರುತೆರೆಯಿಂದ ಚಂದನವನದ ಪಯಣದ ಬಗ್ಗೆ?**

ಡಿಗ್ರಿ ಮುಗಿದ ಬಳಿಕ ಒಂದಿಷ್ಟು ಫೋಟೊಗಳನ್ನು ಹಿಡಿದುಕೊಂಡು ಓಡಾಡಿದೆ. 2009-10ರಲ್ಲಿ ಮೈಕೋ ಮಂಜು ಅವರ ಪರಿಚಯವಾದ ಬಳಿಕ ಅವರು ನನ್ನನ್ನು ನಾಗಾಭರಣ ಅವರ ‘ಬೆನಕ’ ನಾಟಕ ತಂಡಕ್ಕೆ ಸೇರಿಸಿದರು. ಕಿರುತೆರೆಯಲ್ಲಿ ಮೊದಲಿಗೆ ಸಣ್ಣಪುಟ್ಟ ಪಾತ್ರಗಳು ಸಿಕ್ಕವು. ಮಿಲನ ಪ್ರಕಾಶ್ ಅವರು ‘ಲಕುಮಿ’ಯಲ್ಲಿ ನನಗೆ ಒಂದು ಪಾತ್ರ ನೀಡಿದರು. ಇದು ನನಗೆ ತಕ್ಕಮಟ್ಟಿಗೆ ಬ್ರೇಕ್ ನೀಡಿತು. ಪ್ರಮೋದ್ ಮುಖ ಪರಿಚಯವಾಯಿತು. ನಂತರದಲ್ಲಿ ‘ಚುಕ್ಕಿ’ ಎನ್ನುವ ಧಾರಾವಾಹಿ ಮಾಡಿದೆ. ಹೀಗೆ ಸುಮಾರು 15 ಧಾರಾವಾಹಿಗಳಲ್ಲಿ ನಟಿಸಿದೆ. ಆದರೆ ಯಾವ ಧಾರಾವಾಹಿಯಲ್ಲೂ ಹೀರೊ ಆಗಬಾರದು ಎಂದು ನಿರ್ಧರಿಸಿದ್ದೆ. ಆಫರ್‌ಗಳು ಬಂದರೂ ತಿರಸ್ಕರಿಸಿದ್ದೆ. ಹೀರೊ ಆದರೆ ಸಿನಿಮಾದಲ್ಲೇ ಆಗಬೇಕು ಎಂದುಕೊಂಡಿದ್ದೆ.

‘ಲಕುಮಿ’ಯಲ್ಲಿನ ನನ್ನ ಪಾತ್ರ, ಭಾಷೆ ಎಲ್ಲವನ್ನೂ ಗುರುತಿಸಿ ‘ಗೀತಾ ಬ್ಯಾಂಗಲ್ ಸ್ಟೋರ್’ ಸಿನಿಮಾದಲ್ಲಿ ಅವಕಾಶ ನೀಡಿದರು. ಇಲ್ಲಿಂದ ಸಿನಿಮಾ ಪಯಣ ಆರಂಭ. ಈ ಸಿನಿಮಾ ಮೂರು ವರ್ಷ ತೆಗೆದುಕೊಂಡಿತು. ಹೊಟ್ಟೆಪಾಡಿಗೆ ಅತ್ತ ಧಾರಾವಾಹಿಯಲ್ಲೂ ಮುಂದುವರಿದೆ. ಆಗ ಶ್ರುತಿ ನಾಯ್ಡು ಅವರ ಧಾರಾವಾಹಿಯಲ್ಲಿ ಪಾತ್ರವೊಂದು ಸಿಕ್ಕಿತು. ನನ್ನಲ್ಲಿನ ಕಲಾವಿದನನ್ನು ಗುರುತಿಸಿದ ಶ್ರುತಿ ಅವರು ‘ಪ್ರೀಮಿಯರ್ ಪದ್ಮಿನಿ’ಯಲ್ಲಿ ಅವಕಾಶ ನೀಡಿದರು. ಇದು ಸ್ಯಾಂಡಲ್‌ವುಡ್‌ನಲ್ಲಿ ಪ್ರಮೋದ್‌ನನ್ನು ಗುರುತಿಸಿತು.

- **‘ಪ್ರೀಮಿಯರ್ ಪದ್ಮಿನಿ’ ಹಾಗೂ ‘ಉಡಾಳ್ ಬಾಬು ರಾವ್’ ಎರಡೂ ಕಂಡಿರದ ಕನಸುಗಳಲ್ಲವೇ?**

ಖಂಡಿತಾ. ‘ಗೀತಾ ಬ್ಯಾಂಗಲ್ ಸ್ಟೋರ್’ ಚಿತ್ರಮಂದಿರಗಳಲ್ಲಿ ಓಡಲಿಲ್ಲ. ಟಿ.ವಿಯಲ್ಲಿ ಪ್ರಸಾರವಾದಾಗ ನನ್ನ ಪಾತ್ರವನ್ನು ಜನರು ಮೆಚ್ಚಿಕೊಂಡರು. ಆದರೆ ನನಗೆ ಸಿನಿಮಾ ಅವಕಾಶಗಳು ಹೆಚ್ಚು ಬರಲಿಲ್ಲ. ‘ಪ್ರೀಮಿಯರ್ ಪದ್ಮಿನಿ’ ಬಳಿಕ ಸಿನಿಮಾಗಳ ಆಫರ್ ಬರಲಾರಂಭಿಸಿತು. ಈ ಸಂದರ್ಭದಲ್ಲೇ ಒಪ್ಪಿಕೊಂಡ ಸಿನಿಮಾ ‘ಮತ್ತೆ ಉದ್ಭವ’. ಇದು ಕಮರ್ಷಿಯಲಿ ಹಿಟ್ ಆಗಲಿಲ್ಲ. ನಂತರ ‘ಇಂಗ್ಲೀಷ್ ಮಂಜ’, ‘ಅಲಂಕಾರ್ ವಿದ್ಯಾರ್ಥಿ’ ಸಿನಿಮಾಗಳನ್ನು ಒಪ್ಪಿಕೊಂಡೆ. ಇದರ ಚಿತ್ರೀಕರಣ ಇನ್ನೂ ಪ್ರಾರಂಭವಾಗಿರಲಿಲ್ಲ. ಆಗ ರೋಹಿತ್ ಪದಕಿ ಅವರ ‘ರತ್ನನ್ ಪ್ರಪಂಚ’ ಆಫರ್ ಬಂದಿತ್ತು.

ಒಳ್ಳೆಯ ಪ್ರೊಡಕ್ಷನ್ ಹೌಸ್, ಅತ್ಯುತ್ತಮ ಕಥೆ ಹಾಗೂ ಪಾತ್ರ ಅದಾಗಿತ್ತು. ‘ಉಡಾಳ್ ಬಾಬು ರಾವ್’ ಪಾತ್ರ ನನಗೆ ಖಂಡಿತಾ ಹಿಡಿಸುತ್ತದೆ ಎನ್ನುವುದು ಆಗಲೇ ತಿಳಿದಿತ್ತು. ಹೀಗಾಗಿ ತಕ್ಷಣ ಒಪ್ಪಿಕೊಂಡೆ. ನಾಟಕ ಮಾಡುತ್ತಿದ್ದ ಕಾರಣ ಉತ್ತರ ಕರ್ನಾಟಕ ಭಾಷೆಯ ಸ್ಲ್ಯಾಂಗ್ ಕೂಡಾ ಸುಲಭವಾಯಿತು. ಒಳ್ಳೆಯ ಪ್ರೊಡಕ್ಷನ್ ಹೌಸ್ ಇದ್ದಾಗ ತಕ್ಷಣದಲ್ಲೇ ಸಿನಿಮಾ ತೆರೆಗೆ ಬರುತ್ತದೆ. ಇದು ಕಲಾವಿದನಿಗೂ ಅನುಕೂಲ. ಇಲ್ಲಿ ನನಗಿದ್ದಿದ್ದು ಐದಾರು ದಿನದ ಕೆಲಸವಷ್ಟೇ.

- **‘ರತ್ನನ್ ಪ್ರಪಂಚ’ ಬಳಿಕ ಪ್ರಮೋದ್‌ಗೆ ಬೇಡಿಕೆ ಹೆಚ್ಚಾಗಿದೆ ಅಲ್ಲವೇ?**

ಹೌದು. ಹೆಚ್ಚಿನ ಆಫರ್‌ಗಳು ಈಗ ಬರುತ್ತಿವೆ. ಬೇಡ ಅನ್ನಬೇಕಲ್ಲವೇ ಎಂದು ಹೊಟ್ಟೆ ಉರಿದುಕೊಂಡು ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಪಾತ್ರ ಆಯ್ಕೆಗೆ ಹೆಚ್ಚಿನ ಗಮನ ನೀಡುತ್ತಿದ್ದೇನೆ. ನಿರ್ದೇಶಕರು ಬಂದು ಕಥೆ ಹೇಳಿದಾಗ ಕಥೆ ಹಾಗೂ ಪಾತ್ರ ನನಗೆ ಕನೆಕ್ಟ್ ಆದರೆ, ಅದು ಮೊದಲ ನೋಟದಲ್ಲೇ ಪ್ರೀತಿ ಹುಟ್ಟಿದಂತೆ. ಇದು ನೈಜ ಪ್ರೀತಿ. ಒಬ್ಬ ಕಲಾವಿದನಿಗೆ ಹೀಗೇ ಅನಿಸುತ್ತದೆ. ಆಗಲೇ ನಾವು ನಮ್ಮನ್ನು ಆ ಪಾತ್ರದೊಳಗೆ ನೋಡಿಕೊಳ್ಳಲಾರಂಭಿಸುತ್ತೇವೆ. ಜೊತೆಗೆ ಪ್ರೊಡಕ್ಷನ್ ಹೌಸ್, ಚಿತ್ರತಂಡವನ್ನೂ ನೋಡುತ್ತೇನೆ. ಇದೇ ನನ್ನ ಪಾತ್ರದ ಆಯ್ಕೆಯ ಮಾನದಂಡ.

- **ರ‍್ಯಾಂಕ್ ವಿದ್ಯಾರ್ಥಿಯಾಗಿದ್ದ ನೀವು ‘ಅಲಂಕಾರ್ ವಿದ್ಯಾರ್ಥಿ’ಯಾಗಿದ್ದು ಹೇಗೆ?**

ಇದೊಂದು ಹಾಸ್ಯಪ್ರಧಾನವಾದ ಚಿತ್ರ. ಸಿಂಪಲ್ ಸುನಿ ಅವರ ಸಹಾಯಕ ನಿರ್ದೇಶಕರಾಗಿದ್ದ ಕೇಶವ್ ಎಸ್. ಇಂಡಲವಾಡಿ ಈ ಚಿತ್ರದ ನಿರ್ದೇಶಕರು. ಅಲಂಕಾರ್ ವಿದ್ಯಾರ್ಥಿ- ಇದು ಎಪ್ಪತ್ತು ಎಂಭತ್ತರ ದಶಕದಲ್ಲಿ ಕೊನೆಯ ಬೆಂಚ್‌ನ ವಿದ್ಯಾರ್ಥಿಗಳನ್ನು ಕರೆಯುತ್ತಿದ್ದ ರೀತಿ. ನಮ್ಮ ಸಿನಿಮಾದಲ್ಲಿ ಹೀರೊ ಕೂಡಾ ಹಾಗೇ. ಓದು ತಲೆಗೆ ಹತ್ತದಿದ್ದರೂ ಅಲಂಕಾರಕ್ಕಾಗಿ ಕಾಲೇಜಿಗೆ ಬರುತ್ತಿರುತ್ತಾನೆ. ಇಂಥಾ ಹುಡುಗ ಮ್ಯಾನೇಜ್‌ಮೆಂಟ್ ಸೀಟು ತೆಗೆದುಕೊಂಡು ಕಾಲೇಜಿಗೆ ಬರುತ್ತಾನೆ. ಈತನ ಬದುಕು ಹೇಗಿರುತ್ತದೆ ಅನ್ನುವುದೇ ಚಿತ್ರದ ತಿರುಳು. ❖

ಬ್ರೇಕ್‌ನ ನಂತರ... ‘ದೊರೆಸಾನಿ’ಯ ರೂಪಿಕಾ



ರೂಪಿಕಾ

ಕಿರುತೆರೆ

ಶರತ್ ಹೆಗ್ಡೆ

ಫಿಲ್ಟರ್ ಕಾಫಿ- ಮಸಾಲೆ ದೋಸೆ... ಗೂಬೆ-ಗುಬ್ಬಚ್ಚಿ ಹೀಗೆ ಸ್ಕ್ರಿಪ್ಟ್‌ನಲ್ಲಿರುವ ಹೆಸರುಗಳೇ ಇವರ ನಿಜ ಜೀವನದಲ್ಲೂ ಅಭಿಮಾನಿಗಳು ಕರೆಯಲಾರಂಭಿಸಿದಾಗ ಅದೊಂಥರಾ ಥ್ರಿಲ್ ಅನುಭವಿಸಿದ್ದಾರಂತೆ ರೂಪಿಕಾ.

ರೂಪಿಕಾ ಸದ್ಯ ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ದೊರೆಸಾನಿ’ ಧಾರಾವಾಹಿಯ ನಾಯಕಿ ದೀಪಿಕಾ.

ಅವರು ಬಾಲನಟಿಯಾಗಿ ಕಿರುತೆರೆ ಧಾರಾವಾಹಿಗಳಲ್ಲಿ ಮಿಂಚಿದವರು. ಭರತನಾಟ್ಯ ಕಲಾವಿದೆಯಾಗಿ ಸಾವಿರಾರು ವೇದಿಕೆ ಕಾರ್ಯಕ್ರಮಗಳನ್ನು ನೀಡಿದವರು. ಎಸ್. ನಾರಾಯಣ್ ನಿರ್ದೇಶನದ ‘ಚೆಲುವಿನ ಚಿಲಿಪಿಲಿ’ ಚಿತ್ರದ ಮೂಲಕ ಹಿರಿತೆರೆ ಪ್ರವೇಶ ಮಾಡಿದವರು. ನಂತರ ಸಾಲು ಅವಕಾಶಗಳೇನೋ ಬಂದವು. ಈ ನಡುವೆ ಸ್ವಲ್ಪ ಬ್ರೇಕ್ ತೆಗೆದುಕೊಂಡು ಮತ್ತೆ ಕಿರುತೆರೆಗೆ ವಾಪಸಾಗಿದ್ದಾರೆ. ರೂಪಿಕಾ ಆಲಿಯಾಸ್ ದೀಪಿಕಾ ಅವರ ಮನದಲ್ಲೇನಿದೆ? ಅವರದೇ ಮಾತುಗಳಲ್ಲಿ ಕೇಳೋಣ.

‘ನನ್ನ ಅಜ್ಜ, ಅಪ್ಪ, ಅಮ್ಮ ಎಲ್ಲರೂ ಕಲಾ ಹಿನ್ನೆಲೆಯವರೇ. ಹಾಗಾಗಿ ನನ್ನ ಪ್ರತಿಯೊಂದು ಕಾರ್ಯಕ್ರಮಕ್ಕೂ ಅವರು ಬೆನ್ನೆಲುಬಾಗಿ ನಿಂತಿದ್ದರು. ನಾನು ಮೂಲತಃ ಭರತನಾಟ್ಯ ಕಲಾವಿದೆ. ರಂಗಭೂಮಿಯಲ್ಲೂ ಕೆಲಸ ಮಾಡಿದ್ದೇನೆ. ಬೆನಕ, ಪ್ರಭಾತ್, ಸೂರ್ಯ ಕಲಾವಿದರು ತಂಡಗಳಲ್ಲಿ, ಮಾಸ್ಟರ್ ಹಿರಣ್ಣಯ್ಯ ಅವರ ನಾಟಕಗಳಲ್ಲೂ ಅಭಿನಯಿಸಿದ ಅನುಭವ ನನಗಿದೆ’.

‘ಕಿರುತೆರೆಯಿಂದ ಬೆಳ್ಳಿತೆರೆಯಲ್ಲಿ ನಾಯಕಿಯಾಗಿಯೇ ಕಾಣಿಸಿಕೊಳ್ಳುತ್ತೇನೆ ಎಂಬ ಆತ್ಮವಿಶ್ವಾಸದಲ್ಲೇ ಬಣ್ಣದ ಬದುಕಿಗೆ ಕಾಲಿಟ್ಟಿದ್ದೆ. ಅದು ಈಗ ಸಾಕಾರಗೊಂಡಿದೆ. ಬೆಳ್ಳಿಚುಕ್ಕಿ (ನಾಗತಿಹಳ್ಳಿ ಚಂದ್ರಶೇಖರ್ - ನಿರ್ದೇಶನ), ತ್ರಿವೇಣಿ ಸಂಗಮ (ಶ್ರೀನಿವಾಸ ಮೂರ್ತಿ) ಸೇರಿದಂತೆ 20ಕ್ಕೂ ಹೆಚ್ಚು ಧಾರಾವಾಹಿಗಳಲ್ಲಿ ಬಾಲನಟಿಯಾಗಿ ಅಭಿನಯಿಸಿದ್ದೆ. ‘ಕೃಷ್ಣ’, ‘ಜಾಲಿಡೇಸ್’... ಚಿತ್ರಗಳಲ್ಲೂ ಬಾಲನಟಿಯಾಗಿದ್ದೆ’.

ಒಂದು ಚಿಕ್ಕ ಬ್ರೇಕ್...

‘ದೈಹಿಕವಾಗಿ ಸ್ವಲ್ಪ ಫಿಟ್ ಆಗಬೇಕಿತ್ತು. ಸ್ವಲ್ಪ ಬದಲಾವಣೆ ಕಾಣಬೇಕಿತ್ತು. ಅದಕ್ಕಾಗಿ ಕೆಲಕಾಲ ಬ್ರೇಕ್ ತೆಗೆದುಕೊಂಡೆ. ಕಥೆ, ವಿಷಯಗಳ ಆಯ್ಕೆಯಲ್ಲಿ ಬಹಳ ಚೂಸಿ ಆಗಿದ್ದೆ. ಹಾಗಾಗಿ ಕೆಲಕಾಲ ವಿರಾಮ ತೆಗೆದುಕೊಂಡಂತಾಯಿತು.

‘ಈಗಿನ ಸನ್ನಿವೇಶದಲ್ಲಿ ಹಿರಿತೆರೆಗೂ ಕಿರುತೆರೆಗೂ ದೊಡ್ಡ ವ್ಯತ್ಯಾಸ ಇಲ್ಲ. ಯಾವುದೇ ಸಿನಿಮಾ ನಿರ್ಮಾಣಕ್ಕೂ ಕಡಿಮೆ ಇಲ್ಲದಂತೆ ಇಲ್ಲೂ ಪ್ರೊಡಕ್ಷನ್ ನಡೆಯುತ್ತದೆ. ಜನರಿಗೆ ಇಲ್ಲಿಯೂ ದೊಡ್ಡಮಟ್ಟದಲ್ಲಿ ತಲುಪುತ್ತೇವೆ. ಈಗ ಕಿರುತೆರೆ ಕೆಲಸ ಖುಷಿ ಕೊಡುತ್ತದೆ. ಸದ್ಯ ಕನ್ನಡದ ಎರಡು ಚಿತ್ರಗಳು ಚರ್ಚೆಯ ಹಂತದಲ್ಲಿವೆ. ತೆಲುಗಿನಲ್ಲಿ ‘ಥಿಲ್ ಬ್ರೋ’ ಎಂಬ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ.

‘ನನಗೆ ಅವಕಾಶ ಕೊಟ್ಟ ಎಲ್ಲ ನಿರ್ಮಾಣ ಸಂಸ್ಥೆಯವರು, ನಿರ್ದೇಶಕರಿಗೆ ಕೃತಜ್ಞಳಾಗಿದ್ದೇನೆ. ವಿಶೇಷವಾಗಿ ಎಸ್. ನಾರಾಯಣ್ ಅವರಿಗೆ ಧನ್ಯವಾದ ಹೇಳಬೇಕು. ನಾನು 9ನೇ ತರಗತಿ ಇರಬೇಕಾದರೆ ನನಗೆ ದೊಡ್ಡ ಅವಕಾಶ ನೀಡಿದರು. ಅವರು ಒಂದು ದೊಡ್ಡ ವಿಶ್ವವಿದ್ಯಾಲಯ ಇದ್ದಂತೆ. ಅಲ್ಲಿಗೆ ಹೋಗಬೇಕಾದರೆ ನನಗೆ ಏನೂ ಗೊತ್ತಿರಲಿಲ್ಲ. ಎಲ್ಲವನ್ನೂ ಅಲ್ಲಿ ಕಲಿತೆ. ಅದು ನನ್ನ ಜೀವನದ ದೊಡ್ಡ ಮೈಲಿಗಲ್ಲು. ಯಾವುದೇ ಆಡಿಷನ್ ಇಲ್ಲದೇ ಅವರ ತಂಡಕ್ಕೆ ಸೇರಿಸಿಕೊಂಡರು. ಈಗ ‘ದೊರೆಸಾನಿ’ ತಂಡದ ಎಲ್ಲರಿಗೂ, ಟಿವಿ ವಾಹಿನಿಯವರಿಗೂ ಆಭಾರಿ.

ಮತ್ತೆ ಓದುವ ಕನಸು: ‘ಬೆಂಗಳೂರಿನಲ್ಲೇ ‘ಗೆಜ್ಜೆ’ ನೃತ್ಯ ಸ್ಟುಡಿಯೋ ಮಾಡಿದ್ದೇನೆ. ಅದರಲ್ಲಿ ನೃತ್ಯ ತರಬೇತಿ ಕೊಡುತ್ತಿದ್ದೇನೆ. ನೃತ್ಯದಲ್ಲೇ ಎಂ.ಎ. ಪಿಎಚ್‌.ಡಿ ಓದಬೇಕು ಎಂಬ ಆಸೆ ಇದೆ. ಹೀಗೆ ತುಂಬಾ ಕನಸುಗಳಿವೆ.

‘ದೊರೆಸಾನಿ’ಯ ದೀಪಿಕಾ

ಕಲರ್ಸ್ ಕನ್ನಡದ ‘ದೊರೆಸಾನಿ’ ಧಾರಾವಾಹಿಯ ನಾಯಕಿ, ಮಧ್ಯಮ ವರ್ಗದ ಮನೆಯ ಮುದ್ದಿನ ಮಗಳು ದೀಪಿಕಾ ಆಗಿ ಕಾಣಿಸಿಕೊಂಡಿದ್ದೇನೆ. ಕೂಡು ಕುಟುಂಬದ ಮನೆಯ ದೊಡ್ಡ ಮಗಳಾಗಿ ಜವಾಬ್ದಾರಿ ತೆಗೆದುಕೊಳ್ಳುವ ಹುಡುಗಿಯಾಗಿ ದೀಪಿಕಾ ಇದ್ದಾಳೆ. ಲೆಕ್ಕಪರಿಶೋಧಕಿಯ ಕೆಲಸ ಹುಡುಕುವುದು ದೀಪಿಕಾ ಪಾತ್ರ. ‘ದೊರೆಸಾನಿ’ ಆರಂಭವಾಗಿ ಎರಡು ವಾರಗಳಾಗಿವೆ. ಜನ ಹೇಗೆ ಸ್ವೀಕರಿಸುತ್ತಾರೋ ಎಂಬ ಆತಂಕ ಇತ್ತು. ಆದರೆ, ಈಗ ಜನ ತುಂಬಾ ಗುರುತಿಸುತ್ತಾರೆ. ಪ್ರತಿ ದೃಶ್ಯ, ಸಂಭಾಷಣೆಯನ್ನು ಜನ ನೆನಪಿನಲ್ಲಿಟ್ಟುಕೊಳ್ಳುತ್ತಾರೆ’ ಎಂದು ಖುಷಿ ಹಂಚಿಕೊಂಡರು ರೂಪಿಕಾ. ❖

ಉತ್ತರ ಪ್ರದೇಶ: ಉನ್ನಾವ್ ಅತ್ಯಾಚಾರ ಸಂತ್ರಸ್ತೆ ತಾಯಿಗೆ ಟಿಕೆಟ್

ಕಾಂಗ್ರೆಸ್ ಪಟ್ಟಿ: ಮಹಿಳೆಯರಿಗೆ ಆದ್ಯತೆ

ನವದೆಹಲಿ/ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷವು 175 ಅಭ್ಯರ್ಥಿಗಳ ತನ್ನ ಮೊದಲ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದೆ. 175ರಲ್ಲಿ, 50 ಮಹಿಳೆಯರಿಗೆ ಟಿಕೆಟ್ ನೀಡಲಾಗಿದೆ. ಒಟ್ಟು ಅಭ್ಯರ್ಥಿಗಳಲ್ಲಿ ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡುವುದಾಗಿ ಪಕ್ಷ ಈ ಮೊದಲೇ ತಿಳಿಸಿತ್ತು.

ಲಖನೌದಲ್ಲಿ ನಡೆದ ವರ್ಚ್ಯುವಲ್ ಮಾಧ್ಯಮಗೋಷ್ಠಿಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಪಟ್ಟಿಯನ್ನು ಬಿಡುಗಡೆ ಮಾಡಿದರು. ಮೊದಲ ಪಟ್ಟಿಯಲ್ಲಿ ಟಿಕೆಟ್ ಪಡೆದವರಲ್ಲಿ ಮಹಿಳಾ ಹಕ್ಕುಗಳ ಹೋರಾಟಗಾರರು, ವಿವಿಧ ಅಪರಾಧ ಕೃತ್ಯಗಳ ಸಂತ್ರಸ್ತರು ಸೇರಿದ್ದಾರೆ. ಉನ್ನಾವ್ ಅತ್ಯಾಚಾರ ಸಂತ್ರಸ್ತೆಯ ತಾಯಿ ಆಶಾ ಸಿಂಗ್ ಅವರಿಗೆ ಟಿಕೆಟ್ ನೀಡಲಾಗಿದೆ.

ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿ ಹೋರಾಟಗಾರ್ತಿ ಸಾದಫ್ ಜಾಫರ್, ಆಶಾ ಕಾರ್ಯಕರ್ತೆಯರ ಹಕ್ಕುಗಳ ಹೋರಾಟಗಾರ್ತಿ ಮತ್ತು ಆಶಾ ಕಾರ್ಯಕರ್ತೆ ಪೂನಂ ಪಾಂಡೆ, ಪಕ್ಷದ ನಾಯಕಿ ಆರಾಧನಾ ಮಿಶ್ರಾ ಮೋನಾ, ಸಲ್ಮಾನ್ ಖುರ್ಶಿದ್ ಅವರ ಪತ್ನಿ ಲೂಯಿಸ್ ಖುರ್ಶಿದ್ ಅವರಿಗೆ ಈ ಪಟ್ಟಿಯಲ್ಲಿ ಸ್ಥಾನ ನೀಡಲಾಗಿದೆ.

ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ಅವರಿಗೂ ಈ ಪಟ್ಟಿಯಲ್ಲಿ ಸ್ಥಾನ ನೀಡಲಾಗಿದೆ.

'ಶೇ 40ರಷ್ಟು ಮಹಿಳೆಯರಿಗೆ ಟಿಕೆಟ್ ನೀಡುತ್ತೇವೆ. ಒಟ್ಟು ಮಹಿಳೆಯರಲ್ಲಿ ಶೇ 40ರಷ್ಟು ಯುವಜನರಿಗೆ ಅವಕಾಶ ನೀಡಲಾಗಿದೆ. ಈ ಮೂಲಕ ಉತ್ತರ ಪ್ರದೇಶದಲ್ಲಿ ರಾಜಕಾರಣದ ಸ್ವರೂಪವನ್ನು ಬದಲಿಸುತ್ತೇವೆ' ಎಂದು ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ತಾವು ಕಣಕ್ಕೆ ಇಳಿಯುವುದಿಲ್ಲ ಎಂದು ಪ್ರಿಯಾಂಕಾ ಗಾಂಧಿ ಸ್ಪಷ್ಟಪಡಿಸಿದ್ದಾರೆ. ಈ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ, 'ಚುನಾವಣೆ ಸಂದರ್ಭದಲ್ಲಿ ನಾನು ಉತ್ತರ ಪ್ರದೇಶದಲ್ಲೇ ಇರುತ್ತೇನೆ. ಚುನಾವಣೆ ಮುಗಿದ ನಂತರವೂ ನಾನು ಉತ್ತರ ಪ್ರದೇಶದಲ್ಲೇ ಇರುತ್ತೇನೆ' ಎಂದು ಅವರು ಉತ್ತರಿಸಿದ್ದಾರೆ.

'ನಿಮಗೆ ಅನ್ಯಾಯ ಆಗಿದ್ದರೆ, ನೀವು ನಿಮ್ಮ ಹಕ್ಕುಗಳಿಗಾಗಿ ಹೋರಾಡುವ ಹಕ್ಕು ಹೊಂದಿದ್ದೀರಿ. ಈ ಹೋರಾಟವನ್ನು ದೊಡ್ಡ ಮಟ್ಟಕ್ಕೇರಿಸಲು ಕಾಂಗ್ರೆಸ್ ಪಕ್ಷವು ಅವಕಾಶ ನೀಡಲಿದೆ. ನೀವು ರಾಜಕೀಯಕ್ಕೆ ಬನ್ನಿ, ಅಧಿಕಾರಕ್ಕೆ ಬನ್ನಿ ಮತ್ತು ನಿಮ್ಮ ಹಕ್ಕುಗಳನ್ನು ಪಡೆದುಕೊಳ್ಳಿ' ಎಂದರು.


ಪ್ರಿಯಾಂಕಾ ಗಾಂಧಿ ವಾದ್ರಾ


ಅಯೋಧ್ಯೆಯಿಂದ ಯೋಗಿ ಕಣಕ್ಕೆ?

ಉತ್ತರ ಪ್ರದೇಶ ಸೇರಿ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಲು ಬಿಜೆಪಿ ಕೇಂದ್ರೀಯ ಚುನಾವಣಾ ಸಮಿತಿಯು ಗುರುವಾರ ಸಭೆ ನಡೆಸಿದೆ. ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ 172 ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

172 ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿದ್ದರೂ, ಬಿಜೆಪಿ ಪಟ್ಟಿಯನ್ನು ಇನ್ನೂ ಬಹಿರಂಗಪಡಿಸಿಲ್ಲ. ಈ ಪಟ್ಟಿಯಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಉಪಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಮತ್ತು ಮತ್ತೊಬ್ಬ ಉಪಮುಖ್ಯಮಂತ್ರಿ ದಿನೇಶ್ ಶರ್ಮಾ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ವತಂತ್ರದೇವ್ ಸಿಂಗ್ ಅವರನ್ನು ಕಣಕ್ಕೆ ಇಳಿಸಲು ಪಕ್ಷವು ನಿರ್ಧರಿಸಿದೆ. ಯೋಗಿ ಆದಿತ್ಯನಾಥ ಅವರನ್ನು ಅಯೋಧ್ಯೆಯಿಂದ, ಕೇಶವ್ ಪ್ರಸಾದ್ ಮೌರ್ಯ ಅವರನ್ನು ಸಿರಾತು ಮತ್ತು ದಿನೇಶ್ ಶರ್ಮಾ ಅವರನ್ನು ಲಖನೌನ ಯಾವುದಾದರೂ ಒಂದು ಕ್ಷೇತ್ರದಿಂದ ಕಣಕ್ಕೆ ಇಳಿಸಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಾರಿಗೆ ಸಚಿವ ನಿತಿನ್ ಗಡ್ಕರಿ, ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ರಾಜ್ಯದ ಇತರ ನಾಯಕರು ಸಭೆಯಲ್ಲಿ ಭಾಗಿಯಾಗಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಸಂವಾದದ ಮೂಲಕ ಸಭೆಯಲ್ಲಿ ಭಾಗಿಯಾಗಿದ್ದರು ಎಂದು ಮೂಲಗಳು ಹೇಳಿವೆ.

ಪಕ್ಷವು ತನ್ನ ಮೊದಲ ಪಟ್ಟಿಯನ್ನು ಒಂದೆರಡು ದಿನಗಳಲ್ಲಿ ಬಿಡುಗಡೆ ಮಾಡಲಿದೆ ಎಂದು ಮೂಲಗಳು ಹೇಳಿವೆ.


ಯೋಗಿ ಆದಿತ್ಯನಾಥ

'300 ಅಭ್ಯರ್ಥಿಗಳ ಪಟ್ಟಿ ಅಂತಿಮ'

'ಉತ್ತರ ಪ್ರದೇಶ ಚುನಾವಣೆಗೆ ಒಟ್ಟು 300 ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ. ಉಳಿದ 103 ಅಭ್ಯರ್ಥಿಗಳ ಹೆಸರನ್ನು ಇನ್ನಷ್ಟೇ ಅಂತಿಮಗೊಳಿಸಬೇಕಿದೆ' ಎಂದು ಬಿಎಸ್‌ಪಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಮಿಶ್ರಾ ಹೇಳಿದ್ದಾರೆ.

'ಪಕ್ಷದ ಅಭ್ಯರ್ಥಿಗಳ ಪಟ್ಟಿಯಲ್ಲಿ ಎಲ್ಲಾ ವರ್ಗಗಳಿಗೂ ಸೂಕ್ತ ಪ್ರಾತಿನಿಧ್ಯ ನೀಡಲಾಗಿದೆ. 300ರಲ್ಲಿ ದಲಿತರಿಗೆ 90 ಕ್ಷೇತ್ರಗಳನ್ನು ನೀಡಲಾಗಿದೆ. ಉಳಿದ 103 ಕ್ಷೇತ್ರಗಳ ಪಟ್ಟಿ ಬಿಡುಗಡೆಯಾದಾಗ ದಲಿತ ಅಭ್ಯರ್ಥಿಗಳ ಸಂಖ್ಯೆ ಮತ್ತಷ್ಟು ಹೆಚ್ಚಲಿದೆ. ಬ್ರಾಹ್ಮಣರಿಗೆ ಮತ್ತು ಮುಸ್ಲಿಮರಿಗೆ ಸೂಕ್ತ ಪ್ರಾತಿನಿಧ್ಯ ನೀಡಲಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ದಲಿತ–ಬ್ರಾಹ್ಮಣ ಸೂತ್ರದಲ್ಲಿಯೇ ಈ ಚುನಾವಣೆಯನ್ನು ಎದುರಿಸಲಿದ್ದೇವೆ. ಯಾರು ಯಾರಿಗೆ ಟಿಕೆಟ್ ನೀಡಲಾಗಿದೆ ಎಂಬುದು ಪಟ್ಟಿ ಬಿಡುಗಡೆಯ ನಂತರ ಗೊತ್ತಾಗಲಿದೆ. ಜನವರಿ 15ರಂದು ಮಾಯಾವತಿ ಅವರ ಜನ್ಮದಿನಾಚರಣೆ ನಂತರ ಪಟ್ಟಿ ಬಿಡುಗಡೆ ಮಾಡುತ್ತೇವೆ' ಎಂದು ಅವರು ಹೇಳಿದ್ದಾರೆ.

ಉತ್ತರ ಪ್ರದೇಶ: ಸಚಿವ ಸ್ಥಾನ ತೊರೆದ ಸೈನಿ

ಪ್ರತಿದಿನ ಒಬ್ಬ ಸಚಿವ ರಾಜೀನಾಮೆ: ಮಾಜಿ ಸಚಿವ ಹೇಳಿಕೆ

ಲಖನೌ (ಪಿಟಿಐ): ಬಿಜೆಪಿಯ ಮತ್ತೊಬ್ಬ ಹಿಂದುಳಿದ ವರ್ಗಗಳ ನಾಯಕ ಧರಂ ಸಿಂಗ್ ಸೈನಿ ಅವರು ಸಚಿವ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದ್ದಾರೆ. ಬಿಜೆಪಿ ಸಂಪುಟ ತೊರೆಯುವ ಒಬಿಸಿ ನಾಯಕರ ಸರಣಿಯನ್ನು ಅವರು ಮುಂದುವರಿಸಿದ್ದಾರೆ.

ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವ ಬಗ್ಗೆ ಅವರು ಮಾಹಿತಿ ನೀಡಿಲ್ಲ. ಆದರೆ, 'ಸಮಾಜವಾದಿ ಪಕ್ಷವನ್ನು ಸೇರುತ್ತೇನೆ' ಎಂದು ಅವರು ಹೇಳಿದ್ದಾರೆ. ಬುಧವಾರವಷ್ಟೆ ಅವರು 'ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ, ಬಿಜೆಪಿ ತೊರೆಯುವುದಿಲ್ಲ' ಎಂದು ಹೇಳಿದ್ದರು.

'ಸ್ವಾಮಿ ಪ್ರಸಾದ್ ಮೌರ್ಯ ಮತ್ತು ಅಖಿಲೇಶ್ ಯಾದವ್ ಅವರಿಂದ ಯಾವುದೇ ಸಂದೇಶ ಬಂದಿರಲಿಲ್ಲ. ಹೀಗಾಗಿ ಬಿಜೆಪಿ ತೊರೆಯುವುದಿಲ್ಲ ಎಂದು ಬುಧವಾರ ಹೇಳಿದ್ದೆ. ಆದರೆ ಗುರುವಾರ ಸಂದೇಶ ಬಂದ ಕಾರಣ ರಾಜೀನಾಮೆ ನೀಡಿದ್ದೇನೆ' ಎಂದು ಅವರು ಎನ್‌ಡಿಟಿವಿ ಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

'ಬಿಜೆಪಿಯಲ್ಲಿ ಹಿಂದುಳಿದ ವರ್ಗಗಳ ನಾಯಕರಿಗೆ, ಜನರಿಗೆ ಬೆಲೆಯಿಲ್ಲ. ನಮ್ಮ ದನಿಯನ್ನು ಕೇಳುವವರಿಲ್ಲ. ಸಾಕಷ್ಟು ಸಚಿವರು ಬಿಜೆಪಿ ಸಂಪುಟ ತೊರೆಯಲಿದ್ದಾರೆ. ಜನವರಿ 20ರವರೆಗೂ ಪ್ರತಿದಿನ ಒಬ್ಬ ಸಚಿವ ರಾಜೀನಾಮೆ ನೀಡಲಿದ್ದಾರೆ. ಪಕ್ಷ ಬಿಡುವವರ ಪಟ್ಟಿಯಲ್ಲಿ ಇನ್ನೂ ಸಾಕಷ್ಟು ಜನರಿದ್ದೇವೆ' ಎಂದು ಅವರು ಸಂದರ್ಶನದಲ್ಲಿ ಮಾಹಿತಿ ನೀಡಿದ್ದಾರೆ.

ಈವರೆಗೆ ಸ್ವಾಮಿ ಪ್ರಸಾದ್ ಮೌರ್ಯ, ದಾರಾ ಸಿಂಗ್ ಚೌಹಾಣ್ ಮತ್ತು ಈಗ ಸೈನಿ ಸೇರಿ ಮೂವರು ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮೂವರೂ ಹಿಂದುಳಿದ ವರ್ಗಗಳ ಪ್ರಮುಖ ನಾಯಕರು. ಈ ಬೆಳವಣಿಗೆ, ಚುನಾವಣೆಯಲ್ಲಿ ಬಿಜೆಪಿಗೆ ದೊಡ್ಡ ಹೊಡೆತ ನೀಡಲಿದೆ ಎನ್ನಲಾಗಿದೆ. ಬಿಜೆಪಿಯನ್ನು ತೊರೆಯುತ್ತೇನೆ ಎಂದು ಪಕ್ಷದ ಶಾಸಕ ಮುಖೇಶ್ ವರ್ಮಾ ಘೋಷಿಸಿದ್ದಾರೆ.

ಸೈನಿ ಅವರು ರಾಜೀನಾಮೆ ನೀಡಿದ ಬೆನ್ನಲ್ಲೇ, ಅಖಿಲೇಶ್ ಯಾದವ್ ಅವರು ಸಮಾಜವಾದಿ ಪಕ್ಷಕ್ಕೆ ಅವರನ್ನು ಸ್ವಾಗತಿಸಿದ್ದಾರೆ.


ಬಿಜೆಪಿ ಶಾಸಕರಾದ ವಿನಯ್ ಶಖ್ಯಾ (ಎಡದಲ್ಲಿ ಇರುವವರು) ಮತ್ತು ಮುಖೇಶ್ ವರ್ಮಾ (ಬಲದಲ್ಲಿ ಇರುವವರು) ಗುರುವಾರ ಸ್ವಾಮಿ ಪ್ರಸಾದ್ ಮೌರ್ಯ ಅವರ ನಿವಾಸಕ್ಕೆ ಭೇಟಿ ನೀಡಿ, ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಅಂಕಿ-ಅಂಶಗಳು

3
ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದವರ ಸಂಖ್ಯೆ

8
ಬಿಜೆಪಿ ತೊರೆಯುತ್ತೇವೆ ಎಂದು ಘೋಷಿಸಿದ ಶಾಸಕರ ಸಂಖ್ಯೆ

ಪಂಜಾಬ್: ಎಸ್‌ಎಂಎಸ್, ಧ್ವನಿ ಸಂದೇಶದ ಮೂಲಕ ಅಭ್ಯರ್ಥಿ ಆರಿಸಲು ಅವಕಾಶ

ಎಎಪಿ: ಜನರಿಂದ ಮುಖ್ಯಮಂತ್ರಿ ಅಭ್ಯರ್ಥಿ ಆಯ್ಕೆ

ಚಂಡೀಗಡ (ಪಿಟಿಐ): ಪಂಜಾಬ್ ವಿಧಾನಸಭೆ ಚುನಾವಣೆಗೆ ತನ್ನ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಯಾರಾಗಬೇಕು ಎಂದು ನಿರ್ಧರಿಸುವ ಜವಾಬ್ದಾರಿಯನ್ನು ಆಮ್ ಆದ್ಮಿ ಪಕ್ಷವು (ಎಎಪಿ) ಮತದಾರರಿಗೇ ನೀಡಿದೆ. ಅದಕ್ಕಾಗಿ ಎಎಪಿ ಮೊಬೈಲ್ ನಂಬರ್‌ಅನ್ನು ಬಿಡುಗಡೆ ಮಾಡಿದ್ದಾರೆ. ಎಸ್‌ಎಂಎಸ್, ವಾಟ್ಸ್‌ಆ್ಯಪ್ ಸಂದೇಶ ಅಥವಾ ಧ್ವನಿ ಸಂದೇಶದ ಮೂಲಕ ಜನರು ತಮ್ಮ ನೆಚ್ಚಿನ ಮುಖ್ಯಮಂತ್ರಿ ಅಭ್ಯರ್ಥಿಯ ಹೆಸರು ಸೂಚಿಸಬಹುದಾಗಿದೆ.

ಎಎಪಿ ಪಂಜಾಬ್ ಘಟಕದ ಅಧ್ಯಕ್ಷ, ಸಂಸದ ಭಗವಂತ್ ಮಾನ್, ಪಕ್ಷದ ಹಿರಿಯ ನಾಯಕ ರಾಘವ ಛಡ್ಡಾ ಅವರ ಉಪಸ್ಥಿತಿಯಲ್ಲಿ ದೆಹಲಿ ಮುಖ್ಯಮಂತ್ರಿ, ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರು ಗುರುವಾರ ಮೊಬೈಲ್ ನಂಬರ್‌ಅನ್ನು ಬಿಡುಗಡೆ ಮಾಡಿದರು. ಅದರಂತೆ, 7074870748 ನಂಬರ್‌ಗೆ ಸಂದೇಶ ಕಳಿಸುವ ಮೂಲಕ ಮತದಾರರು ತಮ್ಮ ಆಯ್ಕೆಯ ಅಭ್ಯರ್ಥಿಯ ಹೆಸರನ್ನು ಸೂಚಿಸಬಹುದು. ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಬಹುದು. ಜ.17ರ ವರೆಗೆ ಪ್ರತಿದಿನ ಐದು ಗಂಟೆ ಒಳಗೆ ಸಂದೇಶ ಕಳಿಸಬಹುದು.

ಮುಖ್ಯಮಂತ್ರಿ ಅಭ್ಯರ್ಥಿ ಕುರಿತು ಸುದ್ದಿಗಾರರ ಎದುರು ವೈಯಕ್ತಿಕ ಅಭಿಪ್ರಾಯ ಹಂಚಿಕೊಂಡ ಕೇಜ್ರಿವಾಲ್, ಭಗವಂತ್ ಮಾನ್ ಅವರೇ ತಮ್ಮ ಆಯ್ಕೆ ಎಂದರು. ಜೊತೆಗೆ, ತಾವು ಮುಖ್ಯಮಂತ್ರಿ ಅಭ್ಯರ್ಥಿ ಅಲ್ಲ ಎಂದು ಸ್ಪಷ್ಟಪಡಿಸಿದರು. 'ಭಗವಂತ್ ಮಾನ್ ನನ್ನ ತಮ್ಮ, ಅವರು ಎಎಪಿಯ ಅತಿಮುಖ್ಯ ನಾಯಕ. ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸುವುದಾಗಿ ನಾನು ಹೇಳಿದೆ. ಆದರೆ, ಈ ಕುರಿತ ನಿರ್ಧಾರವನ್ನು ಪಂಜಾಬ್ ಜನರೇ ತೆಗೆದುಕೊಳ್ಳಲಿ ಮತ್ತು ಮುಖ್ಯಮಂತ್ರಿ ಅಭ್ಯರ್ಥಿ ಹೆಸರನ್ನು ಮುಚ್ಚಿದ ಬಾಗಿಲ ಹಿಂದೆ ನಿರ್ಧರಿಸುವ ಅಭ್ಯಾಸ ನಿಲ್ಲಬೇಕು ಎಂದು ಮಾನ್ ಹೇಳಿದರು' ಎಂದು ಕೇಜ್ರಿವಾಲ್ ವಿವರಿಸಿದರು.

'ಸ್ವತಂತ್ರ ಭಾರತದಲ್ಲಿ ಇದೇ ಮೊದಲ ಬಾರಿಗೆ ರಾಜಕೀಯ ಪಕ್ಷವೊಂದು ಮುಖ್ಯಮಂತ್ರಿ ಯಾರಾಗಬೇಕು ಎಂದು ಜನರನ್ನು ಕೇಳುತ್ತಿರುವುದು ಎಂದು ತೋರುತ್ತದೆ. ಯಾರಿಗೆ ಹೆಚ್ಚು ಮತ ದೊರಕುವುದೋ ಅವರನ್ನೇ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಲಾಗುವುದು' ಎಂದು ಕೇಜ್ರಿವಾಲ್ ಹೇಳಿದರು.

ಮುಖ್ಯಾಂಶಗಳು

- ಜನವರಿ 17ರವರೆಗೆ ಸಿಎಂ ಅಭ್ಯರ್ಥಿ ಆಯ್ಕೆಗೆ ಅವಕಾಶ
- ತಾವು ಮುಖ್ಯಮಂತ್ರಿ ಅಭ್ಯರ್ಥಿ ಅಲ್ಲ ಎಂದ ಕೇಜ್ರಿವಾಲ್
- ಹೆಚ್ಚು ಜನರ ಬೆಂಬಲ ಪಡೆದವರಿಗೆ ಸಿಎಂ ಅಭ್ಯರ್ಥಿ ಸ್ಥಾನ



ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಎಎಪಿ ನಾಯಕರಾದ ಭಗವಂತ್ ಮಾನ್ (ಬಲಬದಿ) ಮತ್ತು ರಾಘವ್ ಛಡ್ಡಾ (ಎಡಬದಿ) ಚಂಡೀಗಡದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದರು –ಪಿಟಿಐ ಚಿತ್ರ

ರಷ್ಯಾದ ಕ್ಷಿಪಣಿ ತಂತ್ರಜ್ಞಾನ ಪಡೆದರೆ ಭಾರತಕ್ಕೆ ನಿರ್ಬಂಧ: ಅಮೆರಿಕ

ವಾಷಿಂಗ್ಟನ್ (ಪಿಟಿಐ): ಭಾರತವು ರಷ್ಯಾದಿಂದ ಎಸ್–400 ಕ್ಷಿಪಣಿ ತಂತ್ರಜ್ಞಾನ ಪಡೆಯುವ ತೀರ್ಮಾನವನ್ನು ತಾನು ಬೆಂಬಲಿಸುವುದಿಲ್ಲ ಎಂದು ಅಮೆರಿಕ ಹೇಳಿದೆ. ಇದೇ ವೇಳೆ ಭಾರತದ ಮೇಲೆ ನಿರ್ಬಂಧ ಕ್ರಮಗಳನ್ನು ಹೇರುವ ಮೊದಲು 'ಪ್ರಮುಖ ಭೌಗೋಳಿಕ ಕಾರ್ಯತಂತ್ರಗಳನ್ನು ಪರಿಗಣಿಸಲಾಗುವುದು' ಎಂದು ತಿಳಿಸಿದೆ.

ಚುನಾವಣಾ ಕಣದಲ್ಲಿ

- ಚುನಾವಣಾ ನೀತಿ ಸಂಹಿತೆ ಮತ್ತು ಕೋವಿಡ್ ಮುಂಜಾಗ್ರತಾ ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ ಮೈದಾನದಲ್ಲಿ ಚುನಾವಣಾ ರ‍್ಯಾಲಿ ಹಮ್ಮಿಕೊಂಡಿದ್ದಕ್ಕಾಗಿ ಉತ್ತರ ಪ್ರದೇಶ ಸಚಿವ ಕಪಿಲ್ ದೇವ್ ಅಗರ್ವಾಲ್ ಮತ್ತು ಬಿಜೆಪಿಯ 40 ಕಾರ್ಯಕರ್ತರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ.
- ಬಿಜೆಪಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಚುನಾವಣಾ ಆಯೋಗ ತನ್ನ ನಿಯಮಗಳನ್ನು ಸಡಿಲಿಸಿ ಹೊಸ ಪಕ್ಷದ ನೋಂದಣಿಗೆ ಅವಕಾಶ ಮಾಡಿಕೊಡುತ್ತಿದೆ ಎಂದು ಎಎಪಿ ಗುರುವಾರ ಆರೋಪಿಸಿದೆ
- ಎಸ್‌ಪಿ ಮತ್ತು ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಡಿ) ಮೈತ್ರಿಕೂಟವು ಉತ್ತರ ಪ್ರದೇಶದ ಮೊದಲ ಹಂತದ ಚುನಾವಣೆಗಾಗಿ 29 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿತು. 29 ಸ್ಥಾನಗಳಲ್ಲಿ ಎಸ್‌ಪಿಯ 10 ಮತ್ತು ಆರ್‌ಎಲ್‌ಡಿಯ 19 ಅಭ್ಯರ್ಥಿಗಳು ಕಣಕ್ಕಿಳಿಯಲಿದ್ದಾರೆ

ನುಡಿ-ಕಿಡಿ

ಮೈತ್ರಿಯ ಬಗ್ಗೆ ಈವರೆಗೆ ಏನನ್ನೂ ಯೋಚನೆ ಮಾಡಿಲ್ಲ. ಆದರೆ ಉತ್ತರ ಪ್ರದೇಶದಿಂದ ಬಿಜೆಪಿಯನ್ನು ಕಿತ್ತೊಗೆಯಲು ನಾವು ಯಾವ ಪಕ್ಷದ ಜತೆಗಾದರೂ ಮೈತ್ರಿ ಮಾಡಿಕೊಳ್ಳಲು ಸಿದ್ಧರಿದ್ದೇವೆ

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಉತ್ತರ ಪ್ರದೇಶದಲ್ಲಿ ಮಹಿಳಾ ಸಬಲೀಕರಣದ ಕುರಿತು ಮಾತನಾಡುವ ಪ್ರಿಯಾಂಕಾ ಗಾಂಧಿ ಅವರು ಕಾಂಗ್ರೆಸ್ ಆಡಳಿತವಿರುವ ರಾಜಸ್ಥಾನದ ಅಲ್ವಾರ್‌ನಲ್ಲಿ ಮಾನಸಿಕ ಅಸ್ವಸ್ಥ ಬಾಲಕಿ ವಿರುದ್ಧ ನಡೆದ ಅತ್ಯಾಚಾರದ ಕುರಿತು ಮೌನ ತಾಳುತ್ತಾರೆ

ಗೌರವ್ ಭಾಟಿಯಾ, ಬಿಜೆಪಿ ವಕ್ತಾರ

ಐದು ರಾಜ್ಯಗಳಲ್ಲಿ ಚುನಾವಣೆ: 'ಕೂ'ನಿಂದ ನೈತಿಕ ಸಂಹಿತೆ

ನವದೆಹಲಿ (ಪಿಟಿಐ): ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿರುವ ಕಾರಣ ತಮ್ಮ ಸಾಮಾಜಿಕ ಬ್ಲಾಗಿಂಗ್ ತಾಣಗಳನ್ನು ಯಾರೂ ದುರ್ಬಳಕೆ ಮಾಡಬಾರದು ಎಂಬ ದೃಷ್ಟಿಯಿಂದ ಕೂ ಮತ್ತು ಟ್ವಿಟರ್ ಸಂಸ್ಥೆಗಳು ಸ್ವಯಂಪ್ರೇರಿವಾಗಿ ಕೆಲವು ಕ್ರಮಗಳನ್ನು ಘೋಷಿಸಿವೆ.

ಚುನಾವಣೆ ಸಂಬಂಧಿಸಿದ ಚರ್ಚೆಗಳು ದುರ್ಬಳಕೆ ಆಗದಂತೆ ತಡೆಯುವ ಸಲುವಾಗಿ ಸ್ವಯಂಪ್ರೇರಿತವಾಗಿ ನೀತಿ ಸಂಹಿತೆಗಳನ್ನು ಅಳವಡಿಸಿಕೊಂಡಿರುವುದಾಗಿ ಸಾಮಾಜಿಕ ಬ್ಲಾಗಿಂಗ್ ತಾಣ 'ಕೂ' ಹೇಳಿದೆ.

'ಉತ್ತರ ಪ್ರದೇಶ, ಪಂಜಾಬ್, ಗೋವಾ, ಮಣಿಪುರ ಮತ್ತು ಉತ್ತರಾಖಂಡದಲ್ಲಿ ಫೆಬ್ರುವರಿಯಿಂದ ಮಾರ್ಚ್‌ವರೆಗೆ ಚುನಾವಣೆ ನಿಗದಿ ಆಗಿರುವ ಹಿನ್ನೆಲೆಯಲ್ಲಿ ನೀತಿ ಸಂಹಿತೆಗಳನ್ನು ಅಳವಡಿಸಿಕೊಳ್ಳುವ ಮೂಲಕ, ಬಳಕೆದಾರರಿಗೆ ಸುರಕ್ಷಿತ ಮತ್ತು ನಿಷ್ಪಕ್ಷಪಾತ ಚುನಾವಣೆಯ ಭರವಸೆಯನ್ನು ಕೂ ಆ್ಯಪ್ ನೀಡುತ್ತಿದೆ' ಎಂದು ಸಂಸ್ಥೆ ಹೇಳಿದೆ.

ಭಾರತದ ಹಲವಾರು ಭಾಷೆಗಳಲ್ಲಿ ಅಭಿಪ್ರಾಯ ಹಂಚಿಕೊಳ್ಳಲು ಅನುವು ಮಾಡಿರುವ ಕೂ ಆ್ಯಪ್, ಚುನಾವಣಾ ಸಂಹಿತೆಯ ಉಲ್ಲಂಘನೆ ಆಗದಂತೆ ತಡೆಯಲು ಚುನಾವಣಾ ಆಯೋಗ ನೀಡಿರುವ ನಿರ್ದೇಶನಗಳನ್ನು ಪಾಲಿಸುವುದಾಗಿ ಹೇಳಿದೆ.

'ಯಾವುದೇ ಪ್ರಜಾಪ್ರಭುತ್ವದ ಹೆಗ್ಗುರುತಾದ ತೊಡಕಿಲ್ಲದ ಮತ್ತು ನ್ಯಾಯಬದ್ಧ ಚುನಾವಣೆ ನಡೆಯುವಂತೆ ಮಾಡುವತ್ತ ಕೆಲಸ ಮಾಡುತ್ತಿದೆ' ಎಂದು ಕೂ ಸಹಸಂಸ್ಥಾಪಕ ಮತ್ತು ಸಿಇಒ ಅಪ್ರಮೇಯ ರಾಧಾಕೃಷ್ಣ ಹೇಳಿದ್ದಾರೆ.

ಮಾಹಿತಿ ನೀಡಲು ಟ್ವಿಟರ್ ಕ್ರಮ

ವಿಧಾನಸಭೆ ಚುನಾವಣೆಯಲ್ಲಿ ಮತದಾನ ಮಾಡುವ ಮೊದಲು ಮತದಾರರಿಗೆ ಸರಿಯಾದ ತಿಳಿವಳಿಕೆ ನೀಡಲು ಸಾಮಾಜಿಕ ಬ್ಲಾಗಿಂಗ್ ತಾಣ ಟ್ವಿಟರ್ ಹಲವಾರು ಯೋಜನೆಗಳನ್ನು ಹಾಕಿಕೊಂಡಿರುವುದಾಗಿ ಗುರುವಾರ ಘೋಷಿಸಿದೆ.

'ಚುನಾವಣೆ ವೇಳೆ ಮತದಾನ, ಅಭ್ಯರ್ಥಿ ಮತ್ತು ಅವರ ಕಾರ್ಯಸೂಚಿ ಬಗ್ಗೆ ತಿಳಿಯಲು ಜನರು ಟ್ವಿಟರ್‌ಗೆ ಭೇಟಿ ನೀಡುತ್ತಾರೆ. ಜೊತೆಗೆ, ಆರೋಗ್ಯಕರ ಚರ್ಚೆ ಮತ್ತು ಮಾತುಕತೆಯಲ್ಲಿ ತೊಡಗುತ್ತಾರೆ. ಜನರು ತಮ್ಮ ನಾಗರಿಕ ಹಕ್ಕನ್ನು ಚಲಾಯಿಸುವ ವೇಳೆ ಮಾಹಿತಿಪೂರ್ಣ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಮಾಡಲು ಟ್ವಿಟರ್ ಬದ್ಧವಾಗಿದೆ' ಎಂದು ಪ್ರಕಟಣೆ ನೀಡಿದೆ.

ಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಮತ ನೀಡುವಂತೆ ಮಾಡುವುದಷ್ಟೇ ನಮ್ಮ ಗುರಿಯಲ್ಲ. ಚುನಾವಣೆಯ ಎಲ್ಲಾ ಪ್ರಕ್ರಿಯೆಯಲ್ಲಿ ಎಲ್ಲಾ ಮತದಾರರು ಭಾಗವಹಿಸುವಂತೆ ಮತ್ತು ಮಾಹಿತಿ ಪಡೆಯುವಂತೆ ಮಾಡುವುದು ನಮ್ಮ ಗುರಿ ಎಂದು ಟ್ವಿಟರ್ ಹೇಳಿದೆ.

ಈ ಉಪಕ್ರಮಗಳ ಭಾಗವಾಗಿ ಟ್ವಿಟರ್ ಇಮೋಜಿಗಳನ್ನು ಪರಿಚಯಿಸಲಿದೆ. ಈ ಇಮೋಜಿಗಳು ಮತದಾನದ ದಿನಾಂಕವನ್ನು ನೆನಪಿಸುತ್ತವೆ. ಚುನಾವಣೆ ಕುರಿತು ಅಧಿಕೃತ ಮಾಹಿತಿ ಪಡೆಯಲು ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಚುನಾವಣಾ ಆಯೋಗ ಮತ್ತು ಮುಖ್ಯ ಚುನಾವಣಾ ಅಧಿಕಾರಿಗಳ ಸರ್ಚ್ ಪ್ರಾಮ್ಪ್ಟ್‌ಗೆ ಚಾಲನೆ ನೀಡಲಾಗಿದೆ. ಇಂಗ್ಲಿಷ್ ಜೊತೆ ಹಿಂದಿ, ಪಂಜಾಬಿ ಮತ್ತು ಕೊಂಕಣಿ ಭಾಷೆಯಲ್ಲಿ ಕೂಡಾ ಸರ್ಚ್ ಪ್ರಾಮ್ಪ್ಟ್ ಒದಗಿಸಲಾಗಿದೆ ಎಂದು ಟ್ವಿಟರ್ ಹೇಳಿದೆ.

'ರಾಜಕೀಯ ಮತ್ತು ನಾಗರಿಕ ಮಹತ್ವ ಹೊಂದಿರುವ ಘಟನೆಗಳು ಸೇವೆಯ ವಿಚಾರದ ಚರ್ಚೆಯಲ್ಲಿ ಸದಾ ಸ್ಥಾನ ಪಡೆಯುತ್ತವೆ. ಸಾರ್ವಜನಿಕರ ಅಭಿಪ್ರಾಯಗಳು ರೂಪುಗೊಳ್ಳುವುದೇ ಇಂಥ ಚರ್ಚೆಗಳ ಮೂಲಕ. ಹೀಗಾಗಿ ನಾವು ನಮ್ಮ ಮೇಲಿರುವ ಜವಾಬ್ದಾರಿಯನ್ನು ಅರಿತು, ಜನರು ಮತ ಹಾಕಲು ಹೋಗುವ ಮುನ್ನ ಅವರಿಗೆ ಸಮರ್ಪಕ ಮತ್ತು ನಿರ್ದಿಷ್ಟ ಮಾಹಿತಿ ಸಿಗುವಂತೆ ಮಾಡಲಿದ್ದೇವೆ' ಎಂದು ಟ್ವಿಟರ್ ಇಂಡಿಯಾ ಸಾರ್ವಜನಿಕ ನೀತಿ ವ್ಯವಸ್ಥಾಪಕಿ ಪಾಯಲ್ ಕಾಮತ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಸಾರ್ವಜನಿಕ ನೀತಿಗೆ ವಿರುದ್ಧವಾಗಿದ್ದರಷ್ಟೇ ಆದೇಶ ರದ್ದು ಸಾಧ್ಯ'

ನವದೆಹಲಿ (ಪಿಟಿಐ): ಮಧ್ಯಸ್ಥಿಕೆ ಕಾಯ್ದೆಯಡಿ ನೀಡಿದ ಆದೇಶವು ಒಂದು ವೇಳೆ ಕಾನೂನಿನ ಪ್ರಕಾರ ಸಾರ್ವಜನಿಕ ನೀತಿಗೆ ವ್ಯತಿರಿಕ್ತವಾಗಿದ್ದರಷ್ಟೇ ಆ ಆದೇಶವನ್ನು ರದ್ದುಪಡಿಸಲು ಅವಕಾಶವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಚಂಡೀಗಡದ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಮತ್ತು ಮಧ್ಯಸ್ಥಿಕೆದಾರರು 2005ರಲ್ಲಿ ನೀಡಿದ್ದ ಆದೇಶ ರದ್ದುಪಡಿಸಿದ್ದ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಹರಿಯಾಣ ಪ್ರವಾಸೋದ್ಯಮ ಸಂಸ್ಥೆಯು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಹರಿಯಾಣ ಪ್ರವಾಸೋದ್ಯಮ ಸಂಸ್ಥೆಯು (ಎಚ್‌ಟಿಎಲ್) ತಂಪುಪಾನೀಯ ಪೂರೈಸಲು ಟೆಂಡರ್ ಕರೆದಿದ್ದು, ಕಂಧಾರಿ ಬಿವರೇಜಸ್ ಸಂಸ್ಥೆಯು ಸಲ್ಲಿಸಿದ್ದ ಟೆಂಡರ್ ಸ್ವೀಕೃತವಾಗಿತ್ತು. ಎಚ್‌ಟಿಎಲ್ ಬಳಿಕ ಟೆಂಡರ್ ರದ್ದುಪಡಿಸಿದ್ದು, ಈ ವಿವಾದವು ಮಧ್ಯಸ್ಥಿಕೆದಾರರ ಬಳಿಗೆ ಬಂದಿತ್ತು.

ಮಧ್ಯಸ್ಥಿಕೆದಾರರು ಕಂಧಾರಿ ಬಿವರೇಜಸ್ ಸಂಸ್ಥೆಗೆ ₹ 9.5 ಲಕ್ಷ ಪಾವತಿಸಲು ಆದೇಶಿಸಿದ್ದರು. ಬಳಿಕ, ₹ 13.92 ಲಕ್ಷ ಪಾವತಿಗೆ ಆದೇಶಿಸಬೇಕು ಎಂಬ ಮನವಿಯನ್ನು ತಿರಸ್ಕರಿಸಿದ್ದರು. ಇದು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ಜಿಲ್ಲಾ ಸೆಷನ್ಸ್ ಕೋರ್ಟ್ ತಳ್ಳಿಹಾಕಿದ್ದು, ಬಳಿಕ ವಿಷಯ ಹೈಕೋರ್ಟ್ ಮೆಟ್ಟಿಲೇರಿತ್ತು. ಹೈಕೋರ್ಟ್ ಆಕ್ಷೇಪಣೆಯನ್ನು ಒಪ್ಪಿದ್ದು, ಮಧ್ಯಸ್ಥಿಕೆದಾರರು ಮತ್ತು ಜಿಲ್ಲಾ ಸೆಷನ್ಸ್ ಕೋರ್ಟ್ ಆದೇಶವನ್ನು ವಜಾಮಾಡಿತ್ತು.

ಪತ್ರಕರ್ತೆ ಖುಲಾಸೆ ವಿರುದ್ಧ ಮೇಲ್ಮನವಿ

ನವದೆಹಲಿ (ಪಿಟಿಐ): ಮಾನಹಾನಿ ಮೊಕದ್ದಮೆಗೆ ಸಂಬಂಧಿಸಿದಂತೆ ಪತ್ರಕರ್ತೆ ಪ್ರಿಯಾ ರಮಣಿ ಅವರನ್ನು ಖುಲಾಸೆಗೊಳಿಸಿದ್ದ ಕೆಳಹಂತದ ಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಕೇಂದ್ರದ ಮಾಜಿ ಸಚಿವ ಎಂ.ಜೆ.ಅಕ್ಬರ್ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಗುರುವಾರ ವಿಚಾರಣೆಗೆ ಮಾನ್ಯ ಮಾಡಿದೆ.

'ಅರ್ಜಿ ಸ್ವೀಕರಿಸಲಾಗಿದೆ. ವಿಚಾರಣೆ ಪಟ್ಟಿಗೆ ಸೇರಿಸಲಾಗುವುದು' ಎಂದು ನ್ಯಾಯಮೂರ್ತಿ ಮುಕ್ತಾ ಗುಪ್ತಾ ತಿಳಿಸಿದ್ದು, ಪತ್ರಕರ್ತೆ ಪ್ರಿಯಾ ರಮಣಿ ಅವರಿಗೆ ನೋಟಿಸ್ ಜಾರಿ ಮಾಡಿದರು.

ರಮಣಿ ಅವರನ್ನು ಪ್ರತಿನಿಧಿಸಿದ್ದ ವಕೀಲ ಭವೂಕ್ ಚೌಹಾಣ್ ಅವರು, ಪ್ರತಿಕ್ರಿಯೆಯನ್ನು ದಾಖಲಿಸಲು ಸಮಯ ಕೇಳಿದರು. ಅಕ್ಬರ್ ಅವರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ರಾಜೀವ್ ನಾಯರ್ ಅವರು, ತಾವು ಈ ಪ್ರಕರಣದಲ್ಲಿ ಯಾವುದೇ ಮಧ್ಯಂತರ ಆದೇಶ ನೀಡುವಂತೆ ಕೋರುತ್ತಿಲ್ಲ ಎಂದರು.

ಎನ್‌ಕೌಂಟರ್; ಪಾಕ್ ಉಗ್ರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಬುಧವಾರ ರಾತ್ರಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಜೈಶ್–ಮೊಹಮ್ಮದ್(ಜೆಇಎಂ) ಉಗ್ರ ಹತ್ಯೆಯಾಗಿದ್ದು, ಪೊಲೀಸ್ ಕಾನ್‌ಸ್ಟೆಬಲ್‌ವೊಬ್ಬರು ಹುತಾತ್ಮರಾಗಿದ್ದಾರೆ. ಮೂವರು ಯೋಧರು ಸೇರಿ ಐವರು ಗಾಯಗೊಂಡಿದ್ದಾರೆ.

'ಹತ್ಯೆಯಾದ ಉಗ್ರನನ್ನು ಬಾಬರ್ ಭಾಯ್ ಎಂದು ಗುರುತಿಸಲಾಗಿದ್ದು, ಪಾಕಿಸ್ತಾನಕ್ಕೆ ಸೇರಿದವನಾಗಿದ್ದಾನೆ. ಈತ 2018ರಿಂದ ಭಯೋತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ. ಹತ್ಯೆಯಾದ ಉಗ್ರನಿಂದ ಒಂದು ಪಿಸ್ತೂಲ್ ಹಾಗೂ ಎರಡು ಗ್ರೆನೇಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಇಲ್ಲಿನ ಪರಿವಾನ್ ಪ್ರದೇಶದಲ್ಲಿ ಉಗ್ರನಿದ್ದ ಮನೆಯನ್ನು ಸುತ್ತುವರೆದಿದ್ದ ಭದ್ರತಾ ಪಡೆಗಳ ಮೇಲೆ ಉಗ್ರ ಗುಂಡಿನ ದಾಳಿ ನಡೆಸಿದ. ಭದ್ರತಾ ಪಡೆಗಳ ಪ್ರತಿದಾಳಿಗೆ ಉಗ್ರ ಹತನಾದನು. ಈ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ರೋಹಿತ್ ಹುತಾತ್ಮರಾದರು. ಅಲ್ಲದೇ ಸೇನೆಯ ಮೂವರು ಯೋಧರು ಹಾಗೂ ಇಬ್ಬರು ನಾಗರಿಕರು ಗಾಯಗೊಂಡರು. ಗಾಯಗೊಂಡವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ' ಎಂದು ಕಾಶ್ಮೀರ ವಲಯ ಐಜಿಪಿ ವಿಜಯಕುಮಾರ್ ತಿಳಿಸಿದ್ದಾರೆ.

ಕ್ಷಮೆಯಾಚಿಸಿದ ಚನ್ನಿ

ನವದೆಹಲಿ:ಪಂಜಾಬ್ ಭೇಟಿ ವೇಳೆ ಆಗಿರುವ ಭದ್ರತೆ ಲೋಪಕ್ಕಾಗಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಪ್ರಧಾನಿ ನರೇಂದ್ರ ಮೋದಿಯ ಕ್ಷಮೆಯಾಚಿಸಿದ್ದಾರೆ.

ಕೋವಿಡ್ ಕುರಿತು ಚರ್ಚಿಸಲು ಗುರುವಾರ ಸಂಜೆ ಮೋದಿ ಅವರು ಮುಖ್ಯಮಂತ್ರಿಗಳೊಂದಿಗೆ ಸಭೆ ನಡೆಸಿದ ವೇಳೆ ಚನ್ನಿ ಅವರು ವಿಷಾದ ವ್ಯಕ್ತಪಡಿಸಿದ್ದು, 'ಮೋದಿ ಅವರು ದೀರ್ಘ ಕಾಲ ಜೀವಿಸಲಿ' ಎಂಬುದಾಗಿ ಹಾರೈಸಿದರು ಎಂದು ಮೂಲಗಳು ತಿಳಿಸಿವೆ

ಹಡಗು ಒತ್ತೆ: ಭಾರತೀಯ ಸಿಬ್ಬಂದಿ ಬಿಡುಗಡೆಗೆ ಪ್ರಯತ್ನ

ವಿಶ್ವಸಂಸ್ಥೆ (ಪಿಟಿಐ): ಯೆಮನ್‌ನಲ್ಲಿ ಹೊಡೈದಾ ಬಂದರಿನಲ್ಲಿ ಹೌಥಿ ಬಂಡುಕೋರರು ಒತ್ತೆ ಇರಿಸಿಕೊಂಡಿರುವ ಯುಎಇಯ ಸರಕುಸಾಗಣೆ ಹಡಗಿನಲ್ಲಿ ಇರುವ ಸಿಬ್ಬಂದಿ ಜೊತೆಗೆ ಚರ್ಚಿಸಲಾಗಿದೆ ಎಂದು ವಿಶ್ವಸಂಸ್ಥೆಯು ತಿಳಿಸಿದೆ. ಈ ಹಡಗಿನಲ್ಲಿ ಭಾರತದ ಏಳು ಜನರು ಇದ್ದಾರೆ.

ಹುಡೈದಾ ಒಪ್ಪಂದ ಕುರಿತ ವಿಶ್ವಸಂಸ್ಥೆ ಮಿಷನ್ ಅಧಿಕಾರಿಗಳು ವಾರದ ಗಸ್ತು ವೇಳೆ ಅಸ್ ಸಾಲಿಫ್ ಬಂದರಿಗೆ ತೆರಳಿದ್ದರು. ಆಗ ಸಿಬ್ಬಂದಿ ಜೊತೆಗೆ ಮಾತನಾಡಿದ್ದಾರೆ ಎಂದು ಟ್ವೀಟ್ ಮಾಡಲಾಗಿದೆ.


ಈ ಮಧ್ಯೆ ಹಡಗಿನಲ್ಲಿರುವ ಏಳು ಭಾರತೀಯರನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಭಾರತ ಆಗ್ರಹಪಡಿಸಿದೆ. ವಿಶ್ವಸಂಸ್ಥೆಯ ರಾಯಭಾರ ಕಚೇರಿಯ ಭಾರತದ ಶಾಶ್ವತ ಪ್ರತಿನಿಧಿ ಟಿ.ಎಸ್.ತಿರುಮೂರ್ತಿ ಅವರು, ಯಮೆನ್‌ಗೆ ಸಂಬಂಧಿಸಿ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿ ಗಮನಸೆಳೆದರು.

ಹಡಗಿನಲ್ಲಿರುವ ಭಾರತದ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ. ಶೀಘ್ರ ಮತ್ತು ಸುರಕ್ಷಿತ ಬಿಡುಗಡೆಗಾಗಿ ಭಾರತ ಸರ್ಕಾರ ಅಗತ್ಯ ಕ್ರಮವಹಿಸಲಿದೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ಅರಿಂದಮ್ ಬಾಗ್ಚಿ ತಿಳಿಸಿದ್ದಾರೆ.

ಕಾಂಗ್ರೆಸ್ ಬಿಜೆಪಿ ನಡುವೆ ನೇರ ಹಣಾಹಣಿ: ಪಿ. ಚಿದಂಬರಂ

ಗೋವಾ: 'ಬಿಜೆಪಿ ವಿರೋಧಿ ಮತ ವಿಭಜಿಸಲಿವೆ'

ನವದೆಹಲಿ (ಪಿಟಿಐ): ಗೋವಾ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನೇರ ಎದುರಾಳಿಗಳು ಎಂದು ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಅವರು ಗುರುವಾರ ಹೇಳಿದ್ದಾರೆ. ಎಎಪಿ ಹಾಗೂ ಟಿಎಂಸಿ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸಿ ಒಂದಿಷ್ಟು ಮತಗಳನ್ನು ಪಡೆಯಬಹುದಾದರೂ, ಅವು ಬಿಜೆಪಿಯೇತರ ಮತಗಳನ್ನು ವಿಭಜಿಸಿದಂತಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.


ಪಿ. ಚಿದಂಬರಂ

ಗೋವಾದಲ್ಲಿ ಕಾಂಗ್ರೆಸ್ ಹಾಗೂ ಇತರೆ ಪಕ್ಷಗಳ ಜೊತೆ ಮೈತ್ರಿಕೂಟ ರಚಿಸುವ ಸುಳಿವನ್ನು ಟಿಎಂಸಿ ನೀಡಿತ್ತು. 'ಟಿಎಂಸಿ ತನ್ನ ಉದ್ದೇಶವನ್ನು ತಿಳಿಸಿದೆ. ಈ ಬಗ್ಗೆ ಎಐಸಿಸಿ ಪ್ರತಿಕ್ರಿಯಿಸಲಿದೆ. ಈ ಬಗ್ಗೆ ತಮಗೆ ಸದ್ಯಕ್ಕೆ ಮಾಹಿತಿ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

'ಗೋವಾದಲ್ಲಿ ಬಿಜೆಪಿ ವಿರೋಧಿ ಮತ್ತು ಆಡಳಿತ ವಿರೋಧಿ ಅಲೆ ಜೋರಾಗಿ ಬೀಸುತ್ತಿದೆ. ಗೋವಾ ಜನರೇ ರಾಜ್ಯದ ಚುಕ್ಕಾಣಿ ಹಿಡಿಯಬೇಕು ಎಂಬ ಆಶಯವನ್ನು ಕಾಂಗ್ರೆಸ್ ಪಕ್ಷವು ಮತದಾರರ ಮುಂದೆ ಇಡಲಿದೆ' ಎಂದು ಚಿದಂಬರಂ ಹೇಳಿದ್ದಾರೆ.

ಕಾಂಗ್ರೆಸ್ ಒಳಗೊಂಡ ಎಲ್ಲ ಪ್ರತಿ ಪಕ್ಷಗಳ ಮೈತ್ರಿಕೂಟ ರಚಿಸುವ ಟಿಎಂಸಿ ತಂತ್ರಗಾರಿಕೆ ಬಗ್ಗೆ ನೇರವಾಗಿ ಉತ್ತರಿಸದ ಚಿದಂಬರಂ, 'ಟಿಎಂಸಿ ಪಕ್ಷವು ಶಾಸಕರಿಗೆ ಆಮಿಷವೊಡ್ಡಿ ತನ್ನತ್ತ ಸೆಳೆದುಕೊಂಡಿದ್ದು ಕಾಂಗ್ರೆಸ್‌ಗೆ ನಿರಾಸೆ ಮೂಡಿಸಿದೆ' ಎಂದು ಹೇಳಿದ್ದಾರೆ. ಕಾಂಗ್ರೆಸ್‌ನ ಬ್ಲಾಕ್ ಮಟ್ಟದ ಸದಸ್ಯರು ಹಾಗೂ ಸರಪಂಚ್‌ಗಳನ್ನು ಟಿಎಂಸಿ ತನ್ನತ್ತ ಸೆಳೆದುಕೊಳ್ಳುತ್ತಿದೆ ಎಂಬ ಬಗ್ಗೆ ವಿಶ್ವಾಸಾರ್ಹ ಮೂಲಗಳ ಮಾಹಿತಿ ಇದೆ ಎಂದು ತಿಳಿಸಿದರು.

2017ರ ಚುನಾವಣೆಯಲ್ಲಿ ಎಲ್ಲ 40 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಎಎಪಿಗೆ ಒಂದೂ ಸ್ಥಾನ ಗೆಲ್ಲಲು ಆಗಲಿಲ್ಲ. ಈಗ ಟಿಎಂಸಿ ರಾಜ್ಯಕ್ಕೆ ಹೊಸದಾಗಿ ಪ್ರವೇಶ ಪಡೆದಿದೆ. ಈ ಎರಡೂ ಪಕ್ಷಗಳಿಗೆ ರಾಜ್ಯದಲ್ಲಿ ಗಟ್ಟಿ ಬುನಾದಿ ಇಲ್ಲ. ಕಾಂಗ್ರೆಸ್ ಅನ್ನು ಒಳಗೊಂಡಂತೆ ಪಕ್ಷಾಂತರಿಗಳನ್ನು ನೆಚ್ಚಿಕೊಂಡೇ ಎರಡೂ ಪಕ್ಷಗಳು ಸ್ಪರ್ಧೆಗೆ ಇಳಿದಿವೆ ಎಂದು ಹೇಳಿದ್ದಾರೆ.

'ಹಳೆಯದ್ದು ಪುನರಾವರ್ತಿಸಲು ಬಿಡುವುದಿಲ್ಲ': 2017ರ ಚುನಾವಣೆಯಲ್ಲಿ ಆದಂತೆ, ಈ ಬಾರಿ ಕಾಂಗ್ರೆಸ್ ಶಾಸಕರು ಪಕ್ಷಾಂತರ ಮಾಡುವುದಿಲ್ಲ ಎಂದು ಚಿದಂಬರಂ ವಿಶ್ವಾಸ ವ್ಯಕ್ತಪಡಿಸಿದರು. '2017–19ರ ಅವಧಿಯಲ್ಲಿ ಏನೇನು ನಡೆದಿದೆಯೋ ಅದು ನಾಚಿಕೆಗೇಡು. ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಜನರಿಂದ ಆಯ್ಕೆಯಾದ ಶಾಸಕರು ಪಕ್ಷಾಂತರ ಮಾಡಿ ದ್ರೋಹ ಎಸಗಿದ್ದಾರೆ. ಬ್ಲಾಕ್ ಮಟ್ಟದಲ್ಲಿ ಸಭೆ ನಡೆಸಿ, ಅರ್ಹ ಅಭ್ಯರ್ಥಿಗಳ ಹೆಸರು ಶಿಫಾರಸು ಮಾಡುವಂತೆ ಈ ಬಾರಿ ಸೂಚಿಸಲಾಗಿದೆ' ಎಂದು ಅವರು ಹೇಳಿದರು.

'ಕಾಂಗ್ರೆಸ್ ಏಕಾಂಗಿ ಸ್ಪರ್ಧೆ ಫಲ ನೀಡದು'


ನವದೆಹಲಿ: ಗೋವಾದಲ್ಲಿ ಕಾಂಗ್ರೆಸ್ ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸಿದರೆ ಒಂದಂಕಿ ಸ್ಥಾನಗಳೂ ಲಭಿಸುವುದಿಲ್ಲ ಎಂದು ಶಿವಸೇನಾ ವಕ್ತಾರ ಸಂಜಯ್ ರಾವುತ್ ಹೇಳಿದ್ದಾರೆ.

ಗೋವಾದಲ್ಲಿ ಕಾಂಗ್ರೆಸ್‌ನ ಮೂವರು ಶಾಸಕರು ಮಾತ್ರ ಇದ್ದಾರೆ. ಕಾಂಗ್ರೆಸ್‌ನ ಕಷ್ಟದ ಕಾಲದಲ್ಲಿ ನಾವು (ಶಿವಸೇನಾ, ಎನ್‌ಸಿಪಿ) ಬೆಂಬಲ ನೀಡಲು ಮುಂದೆ ಬಂದಿದ್ದೇವೆ. ಆದರೆ ಕಾಂಗ್ರೆಸ್ ಏನು ಯೋಚಿಸುತ್ತಿದೆ ಎಂಬುದು ತಿಳಿದಿಲ್ಲ ಎಂದು ಅವರು ಹೇಳಿದ್ದಾರೆ.

ಗೋವಾ ಕಾಂಗ್ರೆಸ್ ಉಸ್ತುವಾರಿ ದಿನೇಶ್ ಗುಂಡೂರಾವ್, ಸಿಎಲ್‌ಪಿ ನಾಯಕ ದಿಗಂಬರ್ ಕಾಮತ್ ಹಾಗೂ ಗೋವಾ ಕಾಂಗ್ರೆಸ್ ಘಟಕದ ಮುಖ್ಯಸ್ಥ ಗಿರೀಶ್ ಚೋಡಂಕರ್ ಅವರ ಜೊತೆ ರಾವುತ್ ಹಲವು ಸುತ್ತಿನ ಮಾತುಕತೆ ನಡೆಸಿದ್ದಾರೆ. 40ರ ಪೈಕಿ 30 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಸ್ಪರ್ಧಿಸಿ, ಉಳಿದ ಸ್ಥಾನಗಳನ್ನು ಮಿತ್ರಪಕ್ಷಗಳಿಗೆ ಬಿಟ್ಟುಕೊಡುವಂತೆ ಮನವಿ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ 50 ವರ್ಷಗಳಿಂದ ಗೆಲ್ಲಲು ಸಾಧ್ಯವಾಗಿಲ್ಲದ 10 ಕ್ಷೇತ್ರಗಳನ್ನು ಶಿವಸೇನಾ, ಎನ್‌ಸಿಪಿ ಹಾಗೂ ಗೋವಾ ಫಾರ್ವರ್ಡ್ ಪಾರ್ಟಿಗಳಿಗೆ ನೀಡಬಹುದು ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮಿತ್ರಪಕ್ಷಗಳಿಗೆ ಸೀಟು ಬಿಟ್ಟುಕೊಡುವ ಉದ್ದೇಶದಲ್ಲಿ ರಾಹುಲ್ ಗಾಂಧಿ ಇದ್ದರೂ, ರಾಜ್ಯ ಕಾಂಗ್ರೆಸ್ ಘಟಕವು ಬೇರೆಯದೇ ಉದ್ದೇಶ ಹೊಂದಿದೆ ಎನ್ನಲಾಗಿದೆ.

ಮಾಜಿ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಅವರ ಪುತ್ರ ಉತ್ಪಲ್ ಅವರು ಸ್ಪರ್ಧಿಸಿದರೆ ಅವರನ್ನು ಶಿವಸೇನಾ ಬೆಂಬಲಿಸಲಿದೆ ಎಂದು ರಾವುತ್ ಹೇಳಿದ್ದಾರೆ.


ಸಂಜಯ್ ರಾವುತ್


'ಕಾಂಗ್ರೆಸ್ ಮುಖಂಡರು ಚಕ್ರವರ್ತಿಗಳಲ್ಲ'

ಪಣಜಿ: ಕಾಂಗ್ರೆಸ್ ವಿರುದ್ಧ ಹರಿಹಾಯ್ದಿರುವ ಟಿಎಂಸಿ ನಾಯಕಿ ಮೊಹುವಾ ಮೊಯಿತ್ರಾ, 'ಕಾಂಗ್ರೆಸ್ ಮುಖಂಡರು ಭಾರತದ ಚಕ್ರವರ್ತಿಗಳಲ್ಲ' ಎಂದಿದ್ದಾರೆ.

ಗೋವಾದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಮಾತ್ರ ಪ್ರತಿಸ್ಪರ್ಧಿಗಳು ಎಂದಿರುವ ಚಿದಂಬರಂ ಹೇಳಿಕೆಗೆ ಕಿಡಿಕಾರಿರುವ ಮೊಯಿತ್ರಾ, 'ಗೋವಾದಲ್ಲಿ ಕಾಂಗ್ರೆಸ್ ಪಕ್ಷವು ತನ್ನ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಿದ್ದಿದ್ದರೆ, ಬಿಜೆಪಿಯನ್ನು ಸೋಲಿಸಲು ಗೋವಾ ಚುನಾವಣಾ ಕಣಕ್ಕೆ ಟಿಎಂಸಿ ಧುಮುಕುವ ಪ್ರಮೇಯವೇ ಉದ್ಭವವಾಗುತ್ತಿರಲಿಲ್ಲ' ಎಂದಿದ್ದಾರೆ.

'ಬಿಜೆಪಿಯನ್ನು ಸೋಲಿಸುವುದು ಸದ್ಯದ ಅಗತ್ಯಗಳಲ್ಲಿ ಒಂದಾಗಿದ್ದು, ಈ ಕಾರಣಕ್ಕೆ ಮೈತ್ರಿ ಮಾಡಿಕೊಳ್ಳಲು ಟಿಎಂಸಿ ಸಿದ್ಧವಿದೆ. ಆದರೆ, ಕಾಂಗ್ರೆಸ್ ತಾನು ಏರಿರುವ ಅಹಮ್ಮಿನ ಕುದುರೆಯಿಂದ ಕೆಳಗಿಳಿಯಬೇಕು ಎಂದು ಹೇಳಿದ್ದಾರೆ. ಗೋವಾದಲ್ಲಿ ಬಿಜೆಪಿ ಹಾಗೂ ಬಿಜೆಪಿ ವಿರೋಧಿ ಶಕ್ತಿಗಳ ನಡುವೆ ಹೋರಾಟ ನಡೆಯಲಿದೆ. ಬಿಜೆಪಿ ವಿರೋಧಿ ಶಕ್ತಿಗಳ ಗುಂಪಿನಲ್ಲಿ ಕಾಂಗ್ರೆಸ್, ಟಿಎಂಸಿ ಹಾಗೂ ಎಎಪಿ ಇವೆ. ಬಿಜೆಪಿಯನ್ನು ಸೋಲಿಸುವ ಸ್ಥಿತಿಯಲ್ಲಿ ಕಾಂಗ್ರೆಸ್ ಇಲ್ಲ ಎಂಬ ಕಾರಣಕ್ಕೆ ಟಿಎಂಸಿ ಇಲ್ಲಿಗೆ ಬಂದಿದೆ' ಎಂದು ಅವರ ಸಮಜಾಯಿಷಿ ನೀಡಿದ್ದಾರೆ.

ಪಕ್ಷಾಂತರ ಬಗ್ಗೆ ಮಾತನಾಡಿದ ಚಿದಂಬರಂ ಅವರನ್ನು ಕುಟುಕಿರುವ ಮೊಯಿತ್ರಾ, 'ಮೈಕೆಲ್ ಲೋಬೊ, ಡೆಲಿಲಾ ಲೋಬೊ, ಕಾರ್ಲಸ್ ಅಲ್ಮೆಡಾ ಅವರನ್ನು ಕಾಂಗ್ರೆಸ್ ಸ್ವಾಗತಿಸಿದೆ ಎಂದು ನೆನಪಿಸಿದ್ದಾರೆ. ಅವರು ಮಾಡಿದರೆ ಸರಿ, ಬೇರೆಯವರು ಮಾಡಿದರೆ ತಪ್ಪು ಎಂಬ ಕಾಂಗ್ರೆಸ್‌ನ ವರ್ತನೆ ಬದಲಾಗಬೇಕು' ಎಂದು ಸಲಹೆ ನೀಡಿದ್ದಾರೆ.


ಮೊಹುವಾ ಮೊಯಿತ್ರಾ



ಸುಭಾಷಿತ

ನಮ್ಮ ಹಣೆಬರಹ ನಿರ್ಧರಿಸುವವರು ನಾವೇ. ಅದಕ್ಕಾಗಿ ಯಾರನ್ನೂ ದೂರಬಾರದು ಅಥವಾ ಯಾರನ್ನೂ ಶ್ಲಾಘಿಸಬಾರದು.

-ಸ್ವಾಮಿ ವಿವೇಕಾನಂದ

ಹೆಚ್ಚುತ್ತಲೇ ಇರುವ ಚಿಲ್ಲರೆ ಹಣದುಬ್ಬರ ಬೆಲೆ ಇಳಿಸಲು ಸರ್ಕಾರಗಳೂ ಮುಂದಾಗಲಿ

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ಡಿಸೆಂಬರ್‌ನಲ್ಲಿ ಶೇಕಡ 5.59ಕ್ಕೆ ಹೆಚ್ಚಳ ಆಗಿದೆ. ಇದು ಆರು ತಿಂಗಳ ಗರಿಷ್ಠ ಮಟ್ಟ. ಹಿಂದಿನ ವರ್ಷದ ಜುಲೈ ತಿಂಗಳಿನಲ್ಲಿಯೂ ಶೇ 5.59ರಷ್ಟು ಚಿಲ್ಲರೆ ಹಣದುಬ್ಬರ ದಾಖಲಾಗಿತ್ತು. ಅದಾದ ನಂತರದಲ್ಲಿ ಹಣದುಬ್ಬರವು ಈ ಮಟ್ಟಕ್ಕೆ ಬಂದಿರುವುದು ಇದೇ ಮೊದಲು. 2021ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಇಳಿಕೆಯ ಹಾದಿಯಲ್ಲಿ ಇತ್ತು. ಆದರೆ, ನಂತರದಲ್ಲಿ ಇದು ನಿರಂತರವಾಗಿ ಹೆಚ್ಚಾಗುತ್ತ ಸಾಗಿದೆ. ಕಚ್ಚಾ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಆಗುತ್ತಿರುವುದು, ತೈಲೋತ್ಪನ್ನಗಳ ಬೆಲೆಯಲ್ಲಿ ಏರಿಕೆ ಆಗುತ್ತಿರುವುದರ ಪರಿಣಾಮವಾಗಿ ಹಣದುಬ್ಬರ ದರದಲ್ಲಿ ಹೆಚ್ಚಳ ಆಗುತ್ತಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) 2021ರ ಆಗಸ್ಟ್‌ನಲ್ಲಿ ಅಂದಾಜಿಸಿತ್ತು. ಕೇಂದ್ರೀಯ ಬ್ಯಾಂಕ್‌ನ ಅಂದಾಜಿಗೆ ಅನುಗುಣವಾಗಿ ಹಣದುಬ್ಬರ ದರವು ಹೆಚ್ಚುತ್ತಲೇ ಸಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಎಕ್ಸೈಸ್ ಸುಂಕ ಹಾಗೂ ಮೌಲ್ಯವರ್ಧಿತ ತೆರಿಗೆ ಪ್ರಮಾಣವನ್ನು ಒಂದಿಷ್ಟು ತಗ್ಗಿಸಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯಲ್ಲಿ ಏರಿಳಿತಗಳು ಇದ್ದರೂ, ಕಳೆದ ಎರಡು ತಿಂಗಳುಗಳಿಂದ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಸ್ಥಿರತೆ ಕಂಡುಬಂದಿದೆ. ಈ ಎರಡು ಅತ್ಯವಶ್ಯಕ ಉತ್ಪನ್ನಗಳ ಬೆಲೆಯು



ಒಮ್ಮೆ ಏರಿಕೆ ಕಂಡು, ಎರಡು ತಿಂಗಳುಗಳಿಂದ ಒಂದೇ ಮಟ್ಟದಲ್ಲಿ ಇದೆ. ಇಷ್ಟಿದ್ದರೂ, ಚಿಲ್ಲರೆ ಹಣದುಬ್ಬರ ದರವು ತಿಂಗಳಿಂದ ತಿಂಗಳಿಗೆ ಏರುಗತಿಯಲ್ಲಿಯೇ ಇದೆ. ಅಂದರೆ, ಕೋವಿಡ್‌ನ ಆರ್ಥಿಕ ದುಷ್ಪರಿಣಾಮಗಳಿಂದಾಗಿ ಬಸವಳಿದಿರುವ ಜನಸಾಮಾನ್ಯರ ಕಿಸೆ ಸುಡುವುದು ಇನ್ನೂ ಕಡಿಮೆ ಆಗಿಲ್ಲ.

ಕೇಂದ್ರ ಸರ್ಕಾರವು ಆರ್‌ಬಿಐಗೆ ಚಿಲ್ಲರೆ ಹಣದುಬ್ಬರ ದರವನ್ನು ಶೇ 4ಕ್ಕೆ ಮಿತಿಗೊಳಿಸಬೇಕು ಎಂಬ ಗುರಿ ನಿಗದಿ ಮಾಡಿದೆ. ಈ ಗುರಿಯಲ್ಲಿ ಶೇ 2ರಷ್ಟು ಕಡಿಮೆ ಅಥವಾ ಶೇ 2ರಷ್ಟು ಹೆಚ್ಚಳ ಆಗಲು ಅವಕಾಶ ಇದೆ. ಡಿಸೆಂಬರ್‌ನಲ್ಲಿ ದಾಖಲಾಗಿರುವ ಹಣದುಬ್ಬರದ ಪ್ರಮಾಣವು ಗರಿಷ್ಠ ಮಿತಿಯಾದ ಶೇ 6ಕ್ಕೆ ಬಹಳ ಸನಿಹದಲ್ಲಿ ಇದೆ. ಸಾಮಾನ್ಯ ಸಂದರ್ಭದಲ್ಲಿ, ಹಣದುಬ್ಬರ ಜಾಸ್ತಿ ಆದಾಗ ಕೇಂದ್ರೀಯ ಬ್ಯಾಂಕ್‌ಗಳು ರೆಪೊ ದರವನ್ನು ತಗ್ಗಿಸಿ, ವ್ಯವಸ್ಥೆಯಲ್ಲಿ ನಗದು ಹರಿವಿನ ಮೇಲೆ ಒಂದಿಷ್ಟು ನಿಯಂತ್ರಣ ಹಾಕಿ, ಹಣದುಬ್ಬರ ಇಳಿಸಲು ಮುಂದಾಗುತ್ತವೆ. ಆದರೆ, ಓಮೈಕ್ರಾನ್ ಸೃಷ್ಟಿಸಿರುವ ಆರ್ಥಿಕ ಅನಿಶ್ಚಿತ ಪರಿಸ್ಥಿತಿಯ ಕಾರಣದಿಂದಾಗಿ, ಫೆಬ್ರುವರಿಯಲ್ಲಿ ನಡೆಯಲಿರುವ ಹಣಕಾಸು ನೀತಿ ಸಮಿತಿಯ ಸಭೆಯಲ್ಲಿಯೂ ಆರ್‌ಬಿಐ ಬಡ್ಡಿ ದರ ಹೆಚ್ಚಿಸುವ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇಲ್ಲ. ಬಡ್ಡಿ ದರವು ಕನಿಷ್ಠ ಮಟ್ಟದಲ್ಲಿಯೇ ಮುಂದುವರಿಯುವ ಸಾಧ್ಯತೆಗಳು ಹೆಚ್ಚಿವೆ. ಹಾಗಾಗಿ, ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸಲು ಆರ್‌ಬಿಐ ಬಡ್ಡಿ ದರ ಹೆಚ್ಚಿಸುವ ಬದಲು ಬೇರೆ ಯಾವ ಕ್ರಮಕ್ಕೆ ಮುಂದಾಗಲಿದೆ ಎಂಬುದನ್ನು ಕಾದು ನೋಡಬೇಕು. ಈಗ ಹಣದುಬ್ಬರದಲ್ಲಿ ಆಗಿರುವ ಹೆಚ್ಚಳಕ್ಕೆ ಮುಖ್ಯ ಕಾರಣ ಆಹಾರ ವಸ್ತುಗಳ ಬೆಲೆಯಲ್ಲಿ ಆಗಿರುವ ಏರಿಕೆ. ದೇಶದ ಮಟ್ಟದಲ್ಲಿ ತರಕಾರಿಗಳ ಬೆಲೆಯಲ್ಲಿ ತುಸು ಇಳಿಕೆ ಆಗಿದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ ಹೇಳಿದೆ. ಆದರೆ, ಸ್ಥಳೀಯವಾಗಿ ಅಲ್ಲಲ್ಲಿ ತರಕಾರಿಗಳ ಬೆಲೆಯಲ್ಲಿ ವಿಪರೀತ ಏರಿಕೆ ಆದ ವರದಿಗಳು ಇವೆ. ಮೀನು ಮತ್ತು ಮಾಂಸ, ಮೊಟ್ಟೆ, ಧಾನ್ಯಗಳು ಮತ್ತು ಅವುಗಳ ಉತ್ಪನ್ನಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳ ಬೆಲೆಯಲ್ಲಿ ಹೆಚ್ಚಳ ಆಗಿದೆ.

ಸಾಗಣೆ ಮತ್ತು ಸಂಪರ್ಕ ವಿಭಾಗದಲ್ಲಿ ವೆಚ್ಚಗಳು ಹೆಚ್ಚಾಗಿರುವುದನ್ನು ಅಂಕಿ-ಅಂಶಗಳು ತೋರಿಸುತ್ತಿವೆ. ಕಚ್ಚಾ ವಸ್ತುಗಳ ಬೆಲೆಯು ವಿಪರೀತವಾಗಿ ಹೆಚ್ಚಳ ಆಗುತ್ತಿರುವ ಕಾರಣ, ಸಿದ್ಧ ಉತ್ಪನ್ನಗಳ ಬೆಲೆ ಏರಿಕೆ ಮಾಡುವುದು ಅನಿವಾರ್ಯವಾಗಲಿದೆ ಎಂದು ಕೆಲವು ಉದ್ದಿಮೆಗಳು ಈಚಿನ ದಿನಗಳಲ್ಲಿ ಹೇಳುತ್ತ ಬಂದಿದ್ದಾರೆ. ಹಣದುಬ್ಬರವನ್ನು ತಗ್ಗಿಸುವ ಹೊಣೆಯು ಆರ್‌ಬಿಐನದ್ದು ಮಾತ್ರ ಎಂದು ಸರ್ಕಾರಗಳು ಸುಮ್ಮನೆ ಕುಳಿತುಕೊಳ್ಳುವ ಅಗತ್ಯ ಇಲ್ಲ. ಹಣದುಬ್ಬರ ತಗ್ಗಿಸಲು ಅವು ಕೂಡ ತಮ್ಮ ಕೈಲಾದ ಯತ್ನ ನಡೆಸಬೇಕು. ಮೊದಲ ಹೆಜ್ಜೆಯಾಗಿ ತೈಲೋತ್ಪನ್ನಗಳ ಬೆಲೆಯನ್ನು ತಗ್ಗಿಸಬೇಕು. ಆಗ ಸರಕು ಸಾಗಣೆ ವೆಚ್ಚದಲ್ಲಿ ಇಳಿಕೆ ಆಗುತ್ತದೆ. ಕಚ್ಚಾ ವಸ್ತುಗಳ ಬೆಲೆಯಲ್ಲಿ ಕೂಡ ಇಳಿಕೆ ಆಗುತ್ತದೆ. ಅದರಿಂದಾಗಿ ಕೆಲವು ಅಗತ್ಯ ವಸ್ತುಗಳ ಬೆಲೆ ಕಡಿಮೆ ಆಗುತ್ತದೆ. ಹಣದುಬ್ಬರವನ್ನು ತಗ್ಗಿಸಲು ಅದು ನೆರವಾಗಬಹುದು. ಕೊರೊನಾ ಹರಡುವಿಕೆಯ ಸ್ವರೂಪವು ಮುಂದಿನ ದಿನಗಳಲ್ಲಿ ಯಾವ ರೀತಿಯ ತಿರುವು ತೆಗೆದುಕೊಳ್ಳಬಹುದು ಎಂಬುದನ್ನು ಖಚಿತವಾಗಿ ಹೇಳಲು ಆಗದು. ಹಾಗಾಗಿ, ಚಿಕ್ಕ ಪ್ರಮಾಣದಲ್ಲಿ ಕಂಡುಬಂದಿರುವ ಆರ್ಥಿಕ ಚೇತರಿಕೆಗೆ ಇನ್ನಷ್ಟು ಶಕ್ತಿ ತುಂಬಲು ಆರ್‌ಬಿಐ, ಬಡ್ಡಿ ದರಗಳಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆಯೇ ಹೆಚ್ಚು. ಈ ಕಾರಣದಿಂದಾಗಿ, ಸರ್ಕಾರಗಳು ಹಣದುಬ್ಬರ ನಿಯಂತ್ರಣಕ್ಕೆ ತಾವೇ ಮುಂದಾಗಿ ಒಂದಿಷ್ಟು ಕ್ರಮಗಳನ್ನು ಕೈಗೊಳ್ಳುವುದು ಯುಕ್ತವಾದೀತು.

ಹಣದುಬ್ಬರ ತಗ್ಗಿಸುವ ಮೊದಲ ಹೆಜ್ಜೆಯಾಗಿ ತೈಲೋತ್ಪನ್ನಗಳ ಬೆಲೆಯನ್ನು ತಗ್ಗಿಸಬೇಕು

ದಿನದ ಟ್ವೀಟ್



ಉತ್ತಮ ಬೆಳವಣಿಗೆ

ಉತ್ತರ ಪ್ರದೇಶದಲ್ಲಿ ಉನ್ನಾವ್ ಅತ್ಯಾಚಾರ ಸಂತ್ರಸ್ತೆಯ ತಾಯಿಯನ್ನು ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಅಭ್ಯರ್ಥಿಯನ್ನಾಗಿಸಿರುವುದು ಪ್ರಬಲ ಸಂಕೇತವಾಗಿದೆ. ಈ ಬೆಳವಣಿಗೆಯು ಅಂತಹ ಘೋರ ಅಪರಾಧಗಳನ್ನೇನೂ ಕೊನೆಗಾಣಿಸುವುದಿಲ್ಲ, ಆದರೆ ಹೆಚ್ಚಿನ ಮಹಿಳೆಯರು ಮುಕ್ತವಾಗಿ ಮಾತನಾಡಲು ಬಲ ನೀಡಬಲ್ಲದೆಂಬ ಭರವಸೆಯನ್ನು ಮೂಡಿಸಿದೆ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ



ಪಾದಯಾತ್ರೆ ನಡೆಸಿದವರನ್ನು ಬಂಧಿಸುವುದು, ಲಾಠಿ ಚಾರ್ಜ್ ಮಾಡುವುದು ದೊಡ್ಡ ವಿಚಾರ ಅಲ್ಲ. ನೀರಾವರಿ ವಿಷಯದಲ್ಲಿ ಆಳ ಜ್ಞಾನ ಹೊಂದಿರುವ ಮುಖ್ಯಮಂತ್ರಿ ಬೊಮ್ಮಾಯಿ ಅವರು ಇಂದಿನ ಸ್ಥಿತಿಯಲ್ಲಿ ಉತ್ತಮವಾಗಿ ನಿರ್ವಹಣೆ ಮಾಡಿದ್ದಾರೆ. ಮೇಕೆದಾಟು ಅಂತರರಾಜ್ಯ ಸಮಸ್ಯೆಯಾಗಿದ್ದು, ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಹೋಗಿದೆ. ಡಿಎಂಕೆ ಪಕ್ಷ ಯಾರೊಂದಿಗೆ ಸರ್ಕಾರ ರಚಿಸಿದೆ ಎಂದು ನೋಡಬೇಕು. ಅವರ ಹೈಕಮಾಂಡ್ ಜೊತೆಯೇ ಕಾಂಗ್ರೆಸ್‌ನವರು ಚರ್ಚೆ ಮಾಡಬಹುದಿತ್ತು.

ಡಾ. ಕೆ.ಸುಧಾಕರ್, ಆರೋಗ್ಯ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 14-1-1997

● **ಪೆಟ್ರೋಲ್ ಬೆಲೆ ಏರಿಕೆ ಇಲ್ಲ: ಪ್ರಧಾನಿ**

ಬೀದರ್, ಜ. 13– ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ ಎಂದು ಪ್ರಧಾನ ಮಂತ್ರಿ ಎಚ್.ಡಿ.ದೇವೇಗೌಡ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು. ಈ ಸಂಬಂಧ ಕೆಲವು ಪತ್ರಿಕೆಗಳಲ್ಲಿ ಬಂದಿರುವ ವರದಿಯನ್ನು ಅವರು ಸ್ಪಷ್ಟವಾಗಿ ನಿರಾಕರಿಸಿದರು.

ತಾವು ಅಧಿಕಾರಕ್ಕೆ ಬಂದ ನಂತರದ ಏಳು ತಿಂಗಳ ಅವಧಿಯಲ್ಲಿ ಯಾವುದೇ ವಸ್ತುಗಳ ಬೆಲೆ ಹೆಚ್ಚಿಸಿಲ್ಲ. ಆದರೆ ಹಿಂದಿನ ಸರ್ಕಾರ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಿಸದೇ ಇದ್ದುದರ ಪರಿಣಾಮವಾಗಿ ತೈಲನಿಧಿಯ ಕೊರತೆ ಪ್ರಮಾಣ ರೂ. 12,500 ಕೋಟಿ ಮೀರಿತ್ತು. ಆದ್ದರಿಂದ ಅದನ್ನು ಸರಿದೂಗಿಸಲು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಿಸಬೇಕಾಯಿತು ಎಂದು ಪ್ರಧಾನಿ ವಿವರಣೆ ನೀಡಿದರು.

ಆದರೆ ಈಗ ಮತ್ತೆ ಪೆಟ್ರೋಲಿಯಂ ಬೆಲೆ ಹೆಚ್ಚಿಸುವ ಇಂಗಿತ ವ್ಯಕ್ತಪಡಿಸಿದ್ದೇನೆ ಎಂದು ಕೆಲವು ಪತ್ರಿಕೆಗಳಲ್ಲಿ ವರದಿಯಾಗಿರುವುದು ಸರಿಯಲ್ಲ ಎಂದೂ ಅವರು ನುಡಿದರು.

50 ವರ್ಷಗಳ ಹಿಂದೆ

ಶುಕ್ರವಾರ, 14-1-1972

● **ಗೌರವಯುತ ಶಾಂತಿ: ಭಾರತಕ್ಕೆ ಭುಟ್ಟೊ ಕರೆ**

ನವದೆಹಲಿ, ಜ. 13– ‘ಭಾರತದ ಜೊತೆ ಶಾಂತಿ, ಸ್ನೇಹದಿಂದ ಬಾಳಲು ಪಾಕಿಸ್ತಾನ ಇಚ್ಛಿಸಿದೆ. ಆದರೆ ಈ ಶಾಂತಿ ‘ಮರ್ಯಾದೆ’ಯೊಡನೆ ನೆಲೆಗೊಳ್ಳಬೇಕು’ ಎಂದು ಅಧ್ಯಕ್ಷ ಭುಟ್ಟೊ ಇಂದು ತಿಳಿಸಿದುದಾಗಿ ಪಾಕಿಸ್ತಾನ ರೇಡಿಯೊ ವರದಿ ಮಾಡಿದೆ.

ಮರ್ಯಾದೆಯೊಡನೆ ಬಾಳಲು ಪಾಕಿಸ್ತಾನಕ್ಕೆ ಅವಕಾಶ ನೀಡದಿದ್ದರೆ ‘ಇತರ ಕ್ರಮಗಳನ್ನು’ ಪಾಕಿಸ್ತಾನವು ಕೈಗೊಳ್ಳ-ಬೇಕಾಗುತ್ತದೆಂದೂ ಭುಟ್ಟೊ ಅವರು ಹುಸೇನಿವಾಲಾ ವಿಭಾಗದಲ್ಲಿನ ಮುಂಚೂಣಿ ಪ್ರದೇಶದಲ್ಲಿ ಸೈನ್ಯಾಧಿಕಾರಿಗಳನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು.

ಪಾಕಿಸ್ತಾನದ ಅಸ್ತಿತ್ವವನ್ನೇ ಭಾರತವು ಒಪ್ಪಿಕೊಂಡಿಲ್ಲವೆಂದು ಮತ್ತೊಮ್ಮೆ ಆಪಾದಿಸಿದ ಭುಟ್ಟೊ, ಭಾರತವು ಕಳೆದ 24 ವರ್ಷಗಳಲ್ಲಿ ಮೂರು ಬಾರಿ ಪಾಕಿಸ್ತಾನದ ಮೇಲೆ ದಾಳಿ ನಡೆಸಿದೆಯೆಂದು ತಿಳಿಸಿದರು.

● **ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡಿದ ರಾಷ್ಟ್ರಗಳ ಜೊತೆ ರಾಜತಾಂತ್ರಿಕ ಬಾಂಧವ್ಯ ರದ್ದು: ಪಾಕ್ ನಿರ್ಧಾರ**

ರಾವಲ್ಪಿಂಡಿ, ಜ. 13– ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡಿದ ಬಲ್ಗೇರಿಯಾ ಜೊತೆ ಪಾಕಿಸ್ತಾನ ರಾಜತಾಂತ್ರಿಕ ಬಾಂಧವ್ಯವನ್ನು ಕಡಿದುಕೊಂಡಿದೆ.

ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡುವ ದುಡುಕಿನ ಕ್ರಮವೇ ಪಾಕಿಸ್ತಾನವು ಬಲ್ಗೇರಿಯಾ ಜೊತೆ ಬಾಂಧವ್ಯ ಕಡಿದುಕೊಳ್ಳಲು ಕಾರಣವೆಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯದ ವಕ್ತಾರರು ಇಂದು ಇಲ್ಲಿ ತಿಳಿಸಿದರು.

ಹರಿದ್ವಾರದಲ್ಲಿ ನರಮೇಧಕ್ಕೆ ಕರೆ, ಉಡುಪಿಯಲ್ಲಿ ದ್ವೇಷಭಾಷಣ...

ಹೀಗೆಯೇ ಆದಲ್ಲಿ ಈ ಸಂವಿಧಾನ ಉಳಿಯದು



ಅನುರಣನ

ನಾರಾಯಣ ಎ.

ಕಾಣುವ ಕಣ್ಣಿದ್ದವರಿಗೆ, ಮಾನವೀಯವಾಗಿ ಮಿಡಿಯಬಲ್ಲ ಹೃದಯವಿದ್ದವರಿಗೆ ಎಲ್ಲವೂ ಸ್ಪಷ್ಟವಾಗಿ ಅನುಭವಕ್ಕೆ ಬರಲೇಬೇಕು. ಈ ದೇಶದಲ್ಲಿ ಸಂವಿಧಾನ ವಿರೋಧಿ ಶಕ್ತಿಗಳು ದಿನದಿಂದ ದಿನಕ್ಕೆ ಬಲ ವೃದ್ಧಿಸಿಕೊಂಡು ವಿಜೃಂಭಿಸುತ್ತಿದ್ದರೆ, ಸಂವಿಧಾನದ ರಕ್ಷಣೆಗೆ ನಿಂತಿದ್ದೇವೆ ಅಂತ ಹೇಳುತ್ತಿರುವವರೆಲ್ಲಾ ಘೋರ ಆತ್ಮವಂಚನೆಯಲ್ಲಿ ನಿರತರಾಗಿದ್ದಾರೆ ಅನ್ನಿಸುತ್ತಿದೆ. ಈ ದೇಶವನ್ನು ಸಂವಿಧಾನದ ಮೂಲಕ ಆಳುವ ಬದಲಿಗೆ ಹಿಂಸೆಯ ಮೂಲಕ ಆಳುವ ಸನ್ನಾಹ ಒಂದೆಡೆ ನಡೆಯುತ್ತಿದ್ದರೂ ಸಂವಿಧಾನದ ಪರವಾಗಿ ದೊಡ್ಡ ಧ್ವನಿಗಳೇನೂ ಕೇಳಿಸುತ್ತಿಲ್ಲ. ಅಲ್ಲೊಂದು ಇಲ್ಲೊಂದು ಎಂಬಂತೆ ಕೇಳಿದ ಪ್ರತಿರೋಧದ ಧ್ವನಿಗಳು ಹಿಂಸಾವಾದಿಗಳ ರಣಕೇಕೆಯ ಮಧ್ಯೆ ಉಡುಗಿ ಹೋಗುತ್ತಿವೆ.

ಡಿಸೆಂಬರ್ ತಿಂಗಳ ಕೊನೆಗೆ ಹರಿದ್ವಾರದ ಪ್ರಾಂಗಣದಲ್ಲಿ ಧರ್ಮಸಂಸತ್ತು ನಡೆಸಿದ ಕೆಲ ಹಿಂದೂ ‘ಸಂತ’ರು ಅಕ್ಷರಶಃ ನರಮೇಧಕ್ಕೆ ಕರೆ ನೀಡಿದರು. ಭಾರತವನ್ನು ‘ಹಿಂದೂರಾಷ್ಟ್ರ’ವನ್ನಾಗಿ ಪರಿವರ್ತಿಸಲು ಮುಸ್ಲಿಮರ ಹತ್ಯೆಗೆ ಆಯುಧ ಕೈಗೆತ್ತಿಕೊಳ್ಳಿ ಅಂತ ಯಾವುದೇ ಅಳುಕಿಲ್ಲದೆ ಹೇಳಿದರು. ಇದು ನಿಜಕ್ಕೂ ಎಪ್ಪತ್ತು ವರ್ಷಗಳಲ್ಲಿ ಈ ದೇಶ ಕಾಣದ ಮತ್ತು ಕೇಳದ ವಿದ್ಯಮಾನ. ಕ್ಯಾಮೆರಾದ ಮುಂದೆ ನಿಂತು ಈ ರೀತಿ ಸಾಮೂಹಿಕ ಕಗ್ಗೊಲೆಗೆ ಕರೆ ನೀಡಿದ ಉದಾಹರಣೆ ಹಿಂದೆಂದೂ ನಡೆದ ಹಾಗಿಲ್ಲ.

ಇದೇನೂ ಯಾರೋ ಎಲ್ಲೋ ಆವೇಶದಿಂದ ಬಾಯಿತಪ್ಪಿ ಹೇಳಿದ್ದು ಅಂತ ಉಪೇಕ್ಷಿಸಬಹುದಾದ ಒಂದು ಬಿಡಿ ಘಟನೆಯಲ್ಲ. ಹೆಚ್ಚುಕಡಿಮೆ ಇಂತಹದ್ದೇ ಕರೆ, ಅದೇ ರೀತಿಯ ಮಾತುಗಳು ಛತ್ತೀಸಗಡ ಮತ್ತು ದೆಹಲಿಯಲ್ಲಿ ನಡೆದ ಧರ್ಮಸಂಸತ್ತುಗಳಲ್ಲೂ ಪುನರುಚ್ಚಾರಗೊಂಡವು. ಅದೇ ವೇಳೆಗೆ ಕರ್ನಾಟಕದ ಉಡುಪಿಯ ಮಠದಲ್ಲಿ ಏರ್ಪಾಡಾದ ಸಮಾವೇಶವೊಂದರಲ್ಲಿ ಮಾತನಾಡಿದ ಕೆಲವರು ಅದ್ಭುತ ದ್ವೇಷಭಾಷಣ ಮಾಡಿದರು. ಅಲ್ಲಿ ನೆಹರೂ ಅವರ ಅಪಹಾಸ್ಯ, ಇತರ ಧರ್ಮಗಳ ನಿಂದನೆ, ‘ಸತ್ಯಮೇವ ಜಯತೆ’ ಕಾರ್ಯಕ್ರಮ ಮಾಡಿದ್ದಕ್ಕಾಗಿ ಅಮೀರ್ ಖಾನ್ ಅವರನ್ನು ಜಿಹಾದ್ ಖಾನ್ ಅಂತ ಹಂಗಿಸಿದ್ದು ಇತ್ಯಾದಿಗಳೆಲ್ಲಾ ಆಯಿತು. ಅಲ್ಲಿ ಮಾತನಾಡಿದವರ ಪೈಕಿ ಓರ್ವ ವ್ಯಕ್ತಿ ತನ್ನ ಮಾತುಗಳನ್ನು ಹಿಂತೆಗೆದುಕೊಂಡೆ ಅಂತ ಘೋಷಿಸಬೇಕಾಯಿತು. ಕಳಪೆ ರಾಜಕೀಯ ಸಭೆಗಳಲ್ಲೂ ಕೇಳಲು ಸಿಗದ, ‘ಅನ್ಯರಿಗೆ ಅಸಹ್ಯಪಡುವ, ತನ್ನ ಬಣ್ಣಿಸುವ, ಇದಿರ ಹಳಿಯುವ’ ಪದಪುಂಜಗಳನ್ನು ಧರ್ಮಪ್ರವಚನದ ಭಾಗವಾಗಿ, ಮಠದ ಮುಖ್ಯಸ್ಥರ ‘ದಿವ್ಯ ಸಾನ್ನಿಧ್ಯದಲ್ಲಿ’ ಕೇಳಿಸಿಕೊಂಡು ಪುಳಕಿತಾನಂದರಾದ ಭಕ್ತಾದಿಗಳು ಎಂಥವರೋ ಗೊತ್ತಿಲ್ಲ. ‘ದ್ವೇಷ ಮನುಷ್ಯನೊಳಗೋ ಮನುಷ್ಯ ದ್ವೇಷದೊಳಗೋ’ ಎಂಬ ಪ್ರಶ್ನೆ ಇದನ್ನೆಲ್ಲಾ ಕೇಳಿಸಿಕೊಂಡ ಕೆಲವರ ಮನಸ್ಸಿನಲ್ಲಾದರೂ ಮೂಡಿರಬಹುದು ಎಂದು ಭಾವಿಸೋಣ.

ಯಾರನ್ನೋ ಕೊಲ್ಲಲು ಕರೆ ನೀಡುವುದು, ಒಂದು ಸಮುದಾಯದ ಬಗ್ಗೆ ಅರ್ಧಸತ್ಯ ಲೇಪಿತ ಸುಳ್ಳುಗಳನ್ನು ಹರಡಿ ಇನ್ನೊಂದು ಸಮುದಾಯದವರ ಮಧ್ಯೆ ಅಭದ್ರತೆ ಸೃಷ್ಟಿಸುವುದು ಇತ್ಯಾದಿಗಳೆಲ್ಲಾ ಅಧಿಕಾರ ದಾಟದ ಭಾಗವಾಗಿ ನಡೆಯುವುದುಂಟು. ರಾಜಕೀಯವು ರಕ್ತಪಿಪಾಸಿ ಮಾರ್ಗ ಹಿಡಿದಾಗ ಧರ್ಮದ ಮರ್ಮ ತಿಳಿದವರು ದ್ವೇಷ ತಣಿಸುವುದಕ್ಕೆ ಮುಂದಾದರೆ ಅದು ಮನುಷ್ಯ ಸಮಾಜದ ಲಕ್ಷಣ. ಅಧಿಕಾರಕ್ಕಾಗಿ ಯಾವ ಆಟವನ್ನಾದರೂ ಆಡಲು ಸಿದ್ಧವಿರುವ ಮಂದಿಯ ಜತೆಗೆ ಧರ್ಮದ ಪೋಷಾಕು ಹಾಕಿಕೊಂಡ ಮಂದಿ ಕೂಡಾ ಸೇರಿಕೊಂಡು ನರಮೇಧಕ್ಕೆ ಮುಹೂರ್ತ ನಿಗದಿಪಡಿಸಲು ಹೊರಟರೆ ಅದು ಘೋರ ದುರಂತಕ್ಕೆ ದಾರಿಯಾಗುತ್ತದೆ. ಹಾಗಂತ ಚರಿತ್ರೆ ಮತ್ತೆ ಮತ್ತೆ ದಾಖಲಿಸಿದೆ. ಯಾರು ಯಾವ ಪಕ್ಷದ ಬೆಂಬಲಿಗರು ಎನ್ನುವುದಕ್ಕಿಂತಾಚೆಗೆ, ಯಾರು ಯಾವ ಐಡಿಯಾಲಜಿಗೆ ಬದ್ಧರಾಗಿರುವವರು ಎಂಬುದಕ್ಕಿಂತ ಆಚೆಗೆ, ಯಾರು ಸಂಪ್ರದಾಯವಾದಿಗಳು, ಯಾರು ಉದಾರವಾದಿಗಳು ಎನ್ನುವುದಕ್ಕಿಂತಾಚೆಗೆ, ಯಾರು ಎಡ, ಯಾರು ಬಲ ಎನ್ನುವುದರಾಚೆಗೆ ಇಲ್ಲಿರುವುದು ಮನುಷ್ಯತ್ವದ ಪ್ರಶ್ನೆ. ಮನುಷ್ಯ ಸಮುದಾಯಗಳ ಬಗ್ಗೆ ಸಾವಿರಾರು ಕಗ್ಗಂಟುಗಳು ಉಂಟಾಗುತ್ತವೆ. ಪ್ರಶ್ನೆ ಏನೇ ಇರಲಿ, ಮನುಷ್ಯರಾದವರು ನರಮೇಧಕ್ಕೆ ಕರೆ ನೀಡುವುದಿಲ್ಲ.

ಖ್ಯಾತ ಸಮಾಜಶಾಸ್ತ್ರಜ್ಞ ಅರ್ಜುನ್ ಅಪ್ಪಾದೊರೈ ಈ ಕುರಿತು ಎಚ್ಚರಿಕೆಯ ರೂಪದಲ್ಲಿ ಬರೆದಿರುವ ಒಂದು ಅವಲೋಕನವನ್ನು ಗಮನಿಸಬೇಕು. ಅವರ ಪ್ರಕಾರ, ಭಾರತದಲ್ಲಿ ರಾಷ್ಟ್ರೀಯವಾದ ಎನ್ನುವುದು ಈಗ ಹಿಂಸಾವಾದದ ಹಂತವನ್ನೂ ದಾಟಿ ‘ನರಮೇಧವಾದ’ದ (genocidism) ಘಟ್ಟವನ್ನು ಪ್ರವೇಶಿಸುತ್ತಿದೆ. ರಾಜಕೀಯದಲ್ಲಿ ಹಿಂಸೆಯ ಭಾಷೆಯನ್ನು ಒಮ್ಮೆ ಬಳಸಲು ಪ್ರಾರಂಭಿಸಿದರೆ ಮರುಬಳಕೆಯಲ್ಲಿ ಅದನ್ನು ಮತ್ತೂ ತೀವ್ರಗೊಳಿಸಬೇಕಾಗುತ್ತದೆ. ಹಿಂದೆ ಮಾತನಾಡಿದ್ದಕ್ಕಿಂತ ಹೆಚ್ಚು ವ್ಯಗ್ರವಾಗಿ ಈಗ ಮಾತನಾಡಬೇಕಾಗುತ್ತದೆ, ಈಗ ಮಾತನಾಡಿದ್ದಕ್ಕಿಂತ ಉಗ್ರವಾಗಿಯೂ ಮುಂದೆ ಮಾತನಾಡಬೇಕಾಗುತ್ತದೆ. ಭಾಷೆಯ ವ್ಯಗ್ರತೆಯನ್ನು ಇನ್ನಷ್ಟು ಹರಿತಗೊಳಿಸಲು ಸಾಧ್ಯವಾಗುವುದಿಲ್ಲ ಎನ್ನುವ ಹಂತದಲ್ಲಿ ಆಡಿದ್ದನ್ನು ಕೃತಿಗಿಳಿಸಿ ತೋರಿಸಬೇಕಾಗುತ್ತದೆ. ಹಿಂಸೆಯನ್ನು ಮೆಟ್ಟಿಲಾಗಿ ಬಳಸುವ ರಾಜಕೀಯ ಸಾಗುವ ಮಾಮೂಲಿ ಹಾದಿ ಇದು. ಈ ಹಾದಿ ಹಿಡಿದು ಭಾರತದಲ್ಲಿ ರಾಜಕೀಯ ಮಾಡುತ್ತಿರುವವರು ‘ನಮ್ಮ ಧರ್ಮದಲ್ಲೇ ಮತನಿರಪೇಕ್ಷತೆ ಇದೆ, ನಮ್ಮ ಸಂಸ್ಕೃತಿಯಲ್ಲೇ ಸೌಹಾರ್ದ ಇದೆ’ ಎನ್ನುತ್ತಾರೆ. ಸಂವಿಧಾನ ಸಾರುವ ಮತನಿರಪೇಕ್ಷತೆ ಅಪ್ರಸ್ತುತ ಎನ್ನುತ್ತಾರೆ. ಅವರು ನಿಜಕ್ಕೂ ಏನು ಹೇಳುತ್ತಿದ್ದಾರೆ ಎನ್ನುವುದನ್ನು ಹರಿದ್ವಾರದಲ್ಲಿ, ಉಡುಪಿಯಲ್ಲಿ ಕೇಳಿಸಿದ ಮಾತುಗಳು ಸ್ಪಷ್ಟಪಡಿಸುತ್ತವೆ.



ಈ ಬೆಳವಣಿಗೆಗಳ ಕುರಿತಾಗಿ ಬಂದ ಪ್ರತಿಕ್ರಿಯೆ ನೋಡಿ. ಮತ್ತೆ ಅದೇ ಒಂದಷ್ಟು ಪ್ರಗತಿಪರ ಸಂಘಟನೆಗಳು ಮತ್ತು ಚಿಂತಕರು ಮಾತ್ರ ಜೋರಾಗಿ ಧ್ವನಿ ಎತ್ತಿದ್ದಾರೆ. ಒಂದೇ ವ್ಯತ್ಯಾಸವೆಂದರೆ, ಈ ಬಾರಿ ಸೇನಾಪಡೆಗಳ ನಾಲ್ಕೈದು ಮಂದಿ ಮಾಜಿ ಮುಖ್ಯಸ್ಥರು, ಒಂದಷ್ಟು ಮಂದಿ ಸುಪ್ರೀಂ ಕೋರ್ಟ್ ನ್ಯಾಯವಾದಿಗಳು ಸೇರಿ ‘ದೇಶದಲ್ಲಿ ನಡೆಯಬಾರದೆಲ್ಲಾ ನಡೆಯುತ್ತಿದೆ ಅಂತ ಹೇಳುವ ಧೈರ್ಯ ತೋರಿದ್ದಾರೆ. ಸೇನಾಪಡೆಗಳ ಈ ಮಾಜಿ ಮುಖ್ಯಸ್ಥರುಗಳಂತೂ ಪ್ರಧಾನಿಯವರಿಗೆ ಪತ್ರ ಬರೆದು, ಇವೆಲ್ಲವೂ ಹೀಗೇ ಮುಂದುವರಿದರೆ ಈ ದೇಶದ ಸೇನಾಪಡೆಗಳನ್ನು ಒಗ್ಗಟ್ಟಿನಿಂದ ಉಳಿಸಿಕೊಳ್ಳುವುದು ಕಷ್ಟ ಅಂತಲೂ, ಸೇನಾಪಡೆಗಳಲ್ಲಿ ಸಾಮಾಜಿಕ ಒಡಕು ಕಾಣಿಸಿಕೊಂಡದ್ದೇ ಆದರೆ ಒದಗಬಹುದಾದ ಗಂಡಾಂತರವನ್ನು ಊಹಿಸಲೂ ಸಾಧ್ಯವಿಲ್ಲ ಅಂತಲೂ ತಿಳಿಹೇಳಿದ್ದಾರೆ. ಸರ್ಕಾರ ಇಂತಹ ಗಂಡಾಂತರಕಾರಿ ಶಕ್ತಿಗಳ ಜೊತೆಗೆ ಇಲ್ಲ ಎನ್ನುವ ಸ್ಪಷ್ಟನೆ ಅತ್ಯುನ್ನತ ಸ್ಥಾನದಲ್ಲಿ ಇರುವವರಿಂದಲೇ ಬರಬೇಕು ಅಂತಲೂ ಅವರು ಹೇಳಿದ್ದಾರೆ. ದ್ವೇಷ ರಾಜಕೀಯ ಮತ್ತು ಈಗ ಮೇಲೇಳುತ್ತಿರುವ ದ್ವೇಷೋತ್ತರ ರಾಜಕೀಯವು ಸರ್ಕಾರದ ಅಘೋಷಿತ ಯೋಜನೆಯ ಭಾಗವೇ (undeclared state project) ಆಗಿರುವಾಗ ಅಂತಹದ್ದೊಂದು ಸ್ಪಷ್ಟನೆ ಎಲ್ಲಿಂದ ಬರಬೇಕು?

ದೇಶದ ಪ್ರಮುಖ ವಿರೋಧ ಪಕ್ಷಗಳೆಲ್ಲಾ ಈ ವಿಚಾರಕ್ಕೆ ಸಂಬಂಧಿಸಿದಂತೆ ಔಪಚಾರಿಕವಾಗಿ ಒಂದೆರಡು ಖಂಡನೆಯ ನುಡಿಗಳನ್ನಾಡಿ ಮೌನಕ್ಕೆ ಜಾರಿವೆ. ಎಲ್ಲಿ ತಮಗೆ ಹಿಂದೂ ವೋಟುಗಳು ನಷ್ಟವಾಗಿ ಬಿಡುವವೋ ಎಂಬ ಆತಂಕವು ವಿರೋಧ ಪಕ್ಷಗಳನ್ನು ಕಾಡಿರಬೇಕು. ವೋಟುಗಳ ಲೆಕ್ಕಾಚಾರ ಬದಿಗಿಟ್ಟು ಸಂವಿಧಾನ ಮತ್ತು ಮನುಷ್ಯತ್ವದ ರಕ್ಷಣೆಗೆ ನಿಲ್ಲುವ ಪ್ರಮುಖ ರಾಜಕೀಯ ಪಕ್ಷಗಳು ಈ ದೇಶದಲ್ಲಿ ಇಲ್ಲ ಎಂದು ಮತ್ತೊಮ್ಮೆ ಸಾಬೀತಾಗಿ ಹೋಯಿತು. ನ್ಯಾಯಾಂಗವು ಪ್ರಕರಣವೊಂದನ್ನು ದಾಖಲಿಸಿಕೊಂಡಿದೆ.

ಈ ದೇಶದ ಸಂವಿಧಾನವನ್ನು ಇನ್ನೂ ಉಳಿಸಬೇಕು ಎಂದರೆ ಅದು ಜನದನಿಯಿಂದ ಸಾಧ್ಯ. ಅಂತಹ ಜನದನಿಯೊಂದು ಗಟ್ಟಿಯಾಗಿ ಮೊಳಗುವುದರ ಮೂಲಕ ನಿರ್ಣಾಯಕ ಮುಖಾಮುಖಿಯೊಂದು ನಡೆಯದೇ ಹೋದರೆ ದೇಶದಲ್ಲಿ ಅನಪೇಕ್ಷಿತ ಸಂಘರ್ಷವೊಂದು ಉಂಟಾಗಬಹುದು. ಆ ಮುಖಾಮುಖಿಯಲ್ಲಿ ಸಂವಿಧಾನದ ಮೌಲ್ಯಗಳಿಗೆ ಬದ್ಧರಾಗಿರುವವರು ಒಂದೆಡೆ ಇರುತ್ತಾರೆ. ಸಂವಿಧಾನವನ್ನು ಬಹಿರಂಗವಾಗಿ ಕೊಂಡಾಡುತ್ತಾ ಅದನ್ನು ಒಳಗಿಂದಲೇ ಶಿಥಿಲಗೊಳಿಸಿ, ಅದು ನಾಶವಾಗುವ ಕ್ಷಣಕ್ಕಾಗಿ ಕಾಯುತ್ತಿರುವ ಕುತಂತ್ರೀ ಶಕ್ತಿಗಳೆಲ್ಲಾ ಇನ್ನೊಂದೆಡೆ ಇರುತ್ತವೆ. ಒಂದು ಕಡೆ ಮನುಷ್ಯರಿರುತ್ತಾರೆ, ಇನ್ನೊಂದು ಕಡೆ ಇರುವವರನ್ನು ಏನೆಂದು ಕರೆಯುವುದು ಗೊತ್ತಾಗುತ್ತಿಲ್ಲ.

ಚುರುಮುರಿ



‘ಪ್ರಾಣ’ಸಂಕಟ!

• ಚಂದ್ರಕಾಂತ ವಡ್ಡು

‘ಓಮೈಕ್ರಾನ್, ಲಾಕ್‌ಡೌನ್, ನೈಟ್ ಕರ್ಫ್ಯೂ, ವೀಕೆಂಡ್ ಶಾಕ್, ಪಾಸಿಟಿವಿಟಿ, ಡೆತ್ ರೇಟ್, ಟಫ್ ರೂಲ್ಸ್...’ ಕನ್ನಡದಲ್ಲಿ ಇಷ್ಟೆಲ್ಲಾ ಪದಗಳು ಇರುವುದು ಗೊತ್ತೇ ಇರಲಿಲ್ಲ ನೋಡ್ರಿ...!’ ಎಂದು ಜೋಕ್ ಕಟ್ ಮಾಡಿದಳು ಸುದ್ದಿವಾಹಿನಿ ನೋಡುತ್ತಿದ್ದ ಮಡದಿ.

ಅವಳ ಜೋಕು ನಿರ್ಲಕ್ಷಿಸುವಷ್ಟು ಸ್ವಾತಂತ್ರ್ಯ ಹೊಂದಿರದ ತಿಂಗಳೇಶ, ‘ಈ ಪದಗಳನ್ನೆಲ್ಲಾ ಇಂಗ್ಲಿಷಿಗೆ ತರ್ಜುಮೆ ಮಾಡಿಸುವುದೊಂದೇ ಬಾಕಿ!’ ಎಂದು ಉಪಜೋಕು ಹೊಡೆದ.

‘ನಾನು ತಮಾಷೆ ಮಾಡ್ತಿಲ್ಲ... ಕನ್ನಡ ಭಾಷೆ ಕಲಬೆರಕೆ ಆಗ್ತಿರೋದು ನೋಡಿದರೆ ಭಾಳ ಸಂಕಟ ಆಗುತ್ತೆ’.

‘ನೀನು ಮೊದಲು ‘ಭಾಳ’ ಸಂಕಟ ಪಡೋದು ನಿಲ್ಲಿಸಬೇಕು, ‘ಬಾಳ’ ಸಂಕಟ ಸಾಕು. ಬಾಶೆ ತನ್ನಶ್ಶಕ್ಕೆ ತಾನೇ ಸರಿಹೋಗುತ್ತದೆ’ ಲಿಪಿ ಬದಲಿಸುವ ಸಾಮಾಜಿಕ ಮಾಧ್ಯಮದ ಚರ್ಚೆಯನ್ನು ಕೌಟುಂಬಿಕ ಕೋಣೆಗೆ ಎಳೆತಂದ ತಿಂಗಳೇಶ.

‘ನಿಮಗೆ ಎಲ್ಲಿ, ಯಾರಿಗೆ ಬಾಲ ಸೀಳಬೇಕು, ಯಾರಿಗೆ ಯಾವಾಗ ಬಾಲ ಕತ್ತರಿಸಬೇಕು ಎಂಬ ಕನಿಷ್ಠ ಲಿಪಿಜ್ಞಾನ ಇಲ್ಲವಲ್ರೀ...?’

‘ನಾನೇನು ಅಷ್ಟು ದಡ್ಡ ಅಲ್ಲ. ‘ವಿದ್ಯಾರ್ಥಿಗೆ ಬಾಲ ಇರುವುದಿಲ್ಲ, ಅಧ್ಯಾಪಕರಿಗೆ ಬಾಲ ಇರುತ್ತದೆ’ ಅಂತ ಚನ್ನಬಸಯ್ಯ ಮೇಷ್ಟ್ರು ಶಾಲೆಯಲ್ಲಿ ಹೇಳಿದ್ದನ್ನು ಮರೆತೇನು ಹ್ಯಾಂಗ, ನನ್ನ ಪ್ರೀತಿಯ ಮಂಗ!’ ಕಸ್ತೂರಿ ಕನ್ನಡದಲ್ಲಿ ಮುದ್ದಣನಂತೆ ಪ್ರಾಸ ಸೇರಿಸಿ ರೇಗಿಸಿದ ಪ್ರಾಣೇಶ.

‘ಮತ್ತೇಕೆ ಲಿಪಿ ಬದಲಿಸುವವರ ಬಾಲಬಡುಕನಂತೆ ಆಡ್ತೀರಿ...? ನೀವು ಮೊದಲು ಬಾಲಸುಟ್ಟ ಬೆಕ್ಕಿನಂತೆ ಫೇಸ್ಬುಕ್ಕು, ವಾಟ್ಸ್ಆ್ಯಪು ನಡುವೆ ಓಡಾಡೋದನ್ನ ನಿಲ್ಲಿಸಿ. ನನ್ನ ಪ್ರಾಣ ಹಿಂಡಬೇಡಿ!’ ಮನೋರಮೆಯ ಉವಾಚ.

‘ಈ ಓಮೈಕ್ರಾನ್ ಕಾಲದಲ್ಲಿ ಮನುಷ್ಯರ ಮೂಲಪ್ರಾಣ ಉಳಿದರೆ ಸಾಕಾಗಿದೆ. ಇನ್ನು ಅಕ್ಷರಗಳ ಅಲ್ಪಪ್ರಾಣ ಉಳಿಸಲು, ಮಹಾಪ್ರಾಣ ಅಳಿಸಲು ನಾನೇಕೆ ಹೋರಾಡಲಿ...’ ಪ್ರಾಣಸಖಿಗೆ ವಚನ ನೀಡಿದ ಪ್ರಾಣವಲ್ಲಭ.

‘ನೀವು ಅಲ್ಪಪ್ರಾಣಕ್ಕಾಗಿ ಮಹಾಪ್ರಾಣ ಬಿಡ್ತೀರೋ ಮಹಾಪ್ರಾಣಕ್ಕಾಗಿ ಅಲ್ಪಪ್ರಾಣ ತೆಗಿತೀರೋ... ಒಟ್ಟಿನಲ್ಲಿ ಕನ್ನಡದ ಪ್ರಾಣ ಉಳಿದರೆ ಸಾಕು. ಅದೇ ನನ್ನ ‘ಪ್ರಾಣ’ಸಂಕಟ!’

ಸಂಗತ

ನವೋಲ್ಲಾಸದಿಂದ ನವೋದ್ಯಮ

ಉದ್ದಿಮೆ ಕಟ್ಟುವುದಕ್ಕೆ ಹಣವೊಂದೇ ಮುಖ್ಯವಲ್ಲ...

• ಮಲ್ಲಿಕಾರ್ಜುನ ಹೆಗ್ಗಳಗಿ

ಕೌಶಲ ಅಭಿವೃದ್ಧಿ ತರಬೇತಿ ಕೇಂದ್ರಕ್ಕೆ ಉಪನ್ಯಾಸ ನೀಡಲು ಹೋಗಿದ್ದೆ. ‘ಕೈಗಾರಿಕೆಗಳನ್ನು ಕಟ್ಟುವುದು, ವ್ಯವಸ್ಥಿತವಾಗಿ ನಡೆಸುವುದು ಒಂದು ಕಲೆ. ಅದನ್ನು ಸ್ವಪ್ರಯತ್ನದಿಂದ ಸಾಧಿಸಬಹುದು. ಯುವಕರು ನೌಕರಿಗೆ ಅಲೆಯದೇ ಸ್ವಂತ ಉದ್ಯೋಗ ಆರಂಭಿಸಬೇಕು. ಕಾರ್ಖಾನೆಗಳನ್ನು ಕಟ್ಟಬೇಕು. ಹೊಸ ಉದ್ಯೋಗಗಳನ್ನು ಸೃಷ್ಟಿಸಬೇಕು’ ಎಂದು ಹೇಳುತ್ತಿದ್ದಾಗ ಯುವಕನೊಬ್ಬ ಥಟ್ಟನೇ ಎದ್ದು ನಿಂತು ‘ಸರ್, ಉದ್ಯಮಿಯಾಗಿರಿ, ಕಾರ್ಖಾನೆ ಕಟ್ಟಿರಿ ಎಂದು ಹೇಳುತ್ತಿದ್ದೀರಿ. ನಾವು ಬಡವರು, ನಮಗೆ ಬಂಡವಾಳ ಬೇಕಲ್ಲ?’ ಎಂದು ಕೇಳಿದ. ಅವನ ಧ್ವನಿಯಲ್ಲಿ ಸಿಟ್ಟು ಕಾಣಿಸಿತು.

‘ಗೆಳೆಯನೆ, ದುಡ್ಡು ಇಲ್ಲದವ ಬಡವನಲ್ಲ, ಕನಸು ಇಲ್ಲದವ ಬಡವ ಎಂಬ ಮೌಲಿಕ ಮಾತೊಂದಿದೆ. ಉತ್ಸಾಹ ಕೂಡ ದೊಡ್ಡ ಬಂಡವಾಳ. ಜಗತ್ತಿನ ಎಲ್ಲ ಸಾಧನೆಗಳು ಕನಸು ಮತ್ತು ಉತ್ಸಾಹದಿಂದ ಸಾಧ್ಯವಾಗಿವೆ. ತಾರುಣ್ಯ ಎಂಬುದು ಒಂದು ಮಂತ್ರದಂಡ. ಅದರೊಂದಿಗೆ ದೊಡ್ಡ ಕನಸು ಮೇಳೈಸಿದರೆ ಇನ್ನೊಂದು ವಿಶ್ವವನ್ನೇ ಕಟ್ಟಬಹುದು’ ಎಂದು ಹೇಳಿದಾಗ ಅಲ್ಲಿದ್ದವರೆಲ್ಲ ಚಪ್ಪಾಳೆ ತಟ್ಟಿದರು.

‘ಕೈಗಾರಿಕೋದ್ಯಮಿಯಾಗಿ ಬೆಳೆಯಲು ಬಹಳಷ್ಟು ಬಂಡವಾಳ ಬೇಕು. ತಂತ್ರಜ್ಞಾನದ ಅರಿವಿರಬೇಕು. ಕುಟುಂಬದವರ ಪ್ರೋತ್ಸಾಹ ಬೇಕು. ರಾಜಕೀಯ ಬೆಂಬಲ ಬೇಕು, ಅವಕ್ಕೆಲ್ಲ ಏನು ಮಾಡುವುದು’ ಎಂಬ ಚಿಂತೆ ಯುವಕರನ್ನು ಕಾಡುತ್ತಿದೆ. ಉದ್ಯಮಿಯಾಗುವುದು ತಮಗೆ ನಿಲುಕದ ಗುರಿ ಎಂಬ ಹಿಂಜರಿಕೆ ಬಹಳಷ್ಟು ಜನರಲ್ಲಿ ಇದೆ.

ಸ್ಟೀಲ್ ಉದ್ಯಮಿ ಲಕ್ಷ್ಮಿನಿವಾಸ ಮಿತ್ತಲ್ ಅವರು ಓದಿದ್ದು ಬಿ.ಕಾಂ. ರಾಜಸ್ಥಾನದ ಸದಲ್ಪುರ ಅವರು ಹುಟ್ಟಿದ ಹಳ್ಳಿ. ಮೊದಲಿಗೆ ಅವರು ಸ್ಥಗಿತಗೊಂಡಿದ್ದ ಸ್ಟೀಲ್ ಕಾರ್ಖಾನೆಯೊಂದನ್ನು ಕಂತುಗಳಲ್ಲಿ ಹಣ ಪಾವತಿಸುವಕರಾರಿನಲ್ಲಿಖರೀದಿಸಿಧೈರ್ಯದಿಂದನಡೆಸಿದರು. ಇಂದು ಅವರು 3 ಲಕ್ಷ ಜನರಿಗೆ ಉದ್ಯೋಗ ನೀಡಿರುವ ವಿಶ್ವದ ಪ್ರಮುಖ ಸ್ಟೀಲ್ ಉದ್ಯಮಿ.

ಮೋಹನ್ ಸಿಂಗ್ ಓಬೆರಾಯ್ ತಮ್ಮ ಆರಂಭಿಕ ದಿನಗಳಲ್ಲಿ ಹೋಟೆಲ್ ವ್ಯವಸ್ಥಾಪಕ ಆಗಿದ್ದರು. ಆ ಹೋಟೆಲ್ ವಿದ್ಯುತ್ ಅವಘಡದಿಂದ ಬಾಗಿಲು ಮುಚ್ಚಿತು. ಓಬೆರಾಯ್ ಅವರು ಭೋಗ್ಯದ ಮೇಲೆ ಹೋಟೆಲ್ ಪಡೆದು ನಡೆಸತೊಡಗಿದರು. ಈಗ ಓಬೆರಾಯ್ ಹೋಟೆಲ್ ಉದ್ಯಮ ಜಗತ್ತಿನ ತುಂಬ ಬೆಳೆದಿದೆ.

ಬಹಳಷ್ಟು ಯುವಕರು ಹೊಸ ಸಾಹಸಕ್ಕೆ ಹೆದರುತ್ತಾರೆ. ಉದ್ದಿಮೆ ಕಟ್ಟುವುದಕ್ಕೆ ಹಣವೊಂದೇ ಮುಖ್ಯವಲ್ಲ.ಸಾಹಸಮನೋಭಾವ,ಹುಮ್ಮಸ್ಸು,ಮುಖ್ಯವಾಗಿ ಕನಸನ್ನು ಸಾಕಾರಗೊಳಿಸುವ ಇಚ್ಛಾಶಕ್ತಿ ಬೇಕು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗಾರಿಕೆ ಸ್ಥಾಪನೆಯ ವಿಧಾನಗಳನ್ನು ಬಹಳ ಸರಳಗೊಳಿಸಿವೆ. 2020-25ನೇ ಸಾಲಿನ ಕೈಗಾರಿಕಾ ನೀತಿಯ ಪ್ರಕಾರ, ಹೊಸ ಕಂಪನಿಯ ನೋಂದಣಿ ಒಂದೇ ದಿನದಲ್ಲಿ ಆಗುತ್ತದೆ. ಹಿಂದೆ ಮೂರು ತಿಂಗಳು ಕಾಲಾವಕಾಶ ಬೇಕಾಗುತ್ತಿತ್ತು. ಆರೋಗ್ಯ, ಪೊಲೀಸ್, ಪರಿಸರ, ಕಂದಾಯ ಇಲಾಖೆಗಳು ಹಾಗೂ ಗ್ರಾಮ ಪಂಚಾಯಿತಿಯಿಂದ ನಿರಾಕ್ಷೇಪಣಾ (ಎನ್‌ಒಸಿ) ಪ್ರಮಾಣಪತ್ರ ಪಡೆಯಲು ಐದಾರು ತಿಂಗಳು ಅಲೆಯಬೇಕಾಗುತ್ತಿತ್ತು. ಏಕಗವಾಕ್ಷ ಯೋಜನೆ ಜಾರಿಗೊಳಿಸಲಾಗಿದೆ. ಒಂದೇ ಕಡೆ ಎಲ್ಲ ಅವಶ್ಯಕ ಒಪ್ಪಿಗೆ ಪತ್ರಗಳನ್ನು ಸುಲಭವಾಗಿ ಪಡೆಯಬಹುದಾಗಿದೆ.

ಕಂಪನಿ ನೋಂದಣಿಯಾಗುತ್ತಿದ್ದಂತೆ ನೌಕರರ ಪ್ರಾವಿಡೆಂಟ್ ಫಂಡ್, ಇಎಸ್‌ಐ, ಹಣ ಪಾವತಿಗೆ ಕೋಡ್ ನಂಬರ್ ರೂಪುಗೊಳ್ಳುತ್ತವೆ. ಬ್ಯಾಂಕರ್‌ಗಳು ಸಾಲ ನೀಡಲು ಭೇಟಿಯಾಗ ತೊಡಗುತ್ತಾರೆ. ಇದು ನಿಜಕ್ಕೂ ಒಂದು ವರದಾನ.

ಉದ್ಯಮಿ ಕಿರಣ್ ಮಜುಮ್‌ದಾರ್ ಶಾ ತಮ್ಮ ತಂದೆಯ ಗ್ಯಾರೇಜಿನಲ್ಲಿ ಉದ್ದಿಮೆ ಆರಂಭಿಸಿದರು. ಆಗ ಅವರು ತೊಡಗಿಸಿದ್ದು ಕೇವಲ ₹ 7 ಸಾವಿರ ಬಂಡವಾಳ. ಅವರು ಮಹಿಳಾ ಉದ್ದಿಮೆದಾರರಿಗೆ ಮಾದರಿಯಾಗಿ ನಿಂತಿದ್ದಾರೆ.



ಜಮಖಂಡಿಯ ಜಗದೀಶ ಗುಡಗುಂಟಿ, ಸಕ್ಕರೆ ಕಾರ್ಖಾನೆಯೊಂದರಲ್ಲಿ ಸಾಮಾನ್ಯ ಉದ್ಯೋಗಿಯಾಗಿದ್ದರು. ಡಿಪ್ಲೊಮಾ ಮಾತ್ರ ಓದಿದವರು. ಆದರೆ ಕಣ್ಣುಗಳಲ್ಲಿ ಕನಸು ತುಂಬಿಕೊಂಡಿದ್ದರು. ಒಂದು ಸ್ವಂತದ ಬೃಹತ್ ಸಕ್ಕರೆ ಕಾರ್ಖಾನೆಯನ್ನು ಕಟ್ಟಿದ್ದಾರೆ ಮಾತ್ರವಲ್ಲ, ದೇಶ-ವಿದೇಶಗಳಲ್ಲಿ 60ಕ್ಕೂ ಹೆಚ್ಚು ಸಕ್ಕರೆ ಕಾರ್ಖಾನೆಗಳಿಗೆ ತಂತ್ರಜ್ಞಾನ ಒದಗಿಸಿದ್ದಾರೆ.

ಏಷ್ಯಾದ ನಂಬರ್ 1 ಶ್ರೀಮಂತ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಉದ್ಯಮಿ ಗೌತಮ್ ಅದಾನಿ ಅರ್ಧಕ್ಕೇ ಕಾಲೇಜು ಓದು ನಿಲ್ಲಿಸಿ, ವಜ್ರದ ವ್ಯಾಪಾರಿ ಬಳಿ ನೌಕರರಾಗಿ ಸೇರಿಕೊಂಡಿದ್ದರು. ತಾವೇ ವಜ್ರ ವ್ಯಾಪಾರಿಯಾಗಿ ಬೆಳೆದು ಗುಜರಾತಿನ ಮುಂದ್ರ ಎಂಬಲ್ಲಿ ಜಗತ್ತಿನ ಅತಿ ದೊಡ್ಡ ಖಾಸಗಿ ಬಂದರು ಕಟ್ಟಿದ್ದಾರೆ.

ನಿರ್ವಹಣೆ (ಮ್ಯಾನೇಜ್‌ಮೆಂಟ್) ಬಹಳ ಮುಖ್ಯ. ನಿರ್ವಹಣಾ ಕೌಶಲ ಪ್ರತಿಯೊಬ್ಬರ ವೈಯಕ್ತಿಕ ಬೆಳವಣಿಗೆಗೂ ದೇಶದ ಸಮಗ್ರ ಬೆಳವಣಿಗೆಗೂ ಅತ್ಯಂತ ಅವಶ್ಯ. ದೂರದೃಷ್ಟಿ, ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ಸಂಪತ್ತಾಗಿ ಪರಿವರ್ತಿಸುವುದರಲ್ಲಿಯೇ ದೇಶದ ಭವಿಷ್ಯ ಅಡಗಿದೆ. ಉತ್ಸಾಹಕ್ಕಿಂತ ಮಿಗಿಲಾದ ಬಲವಿಲ್ಲ. ಉದ್ದಿಮೆ ಕಟ್ಟಿ ಆರ್ಥಿಕವಾಗಿ ಬೆಳೆದ ಮೇಲೆ ಹಣದ ಝೇಂಕಾರದಲ್ಲಿ ಕಳೆದುಹೋಗದೇ ಸಮಾಜಕ್ಕೆ ಒಳಿತನ್ನು ಮಾಡಬೇಕು.

ಭಾರತದ ಸ್ವಾತಂತ್ರ್ಯ ಚಳವಳಿಯನ್ನು ಆರ್ಥಿಕವಾಗಿ ಪೊರೆದವರಲ್ಲಿ ಉದ್ಯಮಿ ಜೆ.ಡಿ.ಬಿರ್ಲಾ ಪ್ರಮುಖರು. ಬಿರ್ಲಾ ಅವರನ್ನು ಗಾಂಧೀಜಿ ತಮ್ಮ ಕ್ಯಾಪಿಟಲಿಸ್ಟ್ ಫ್ರೆಂಡ್ (ಧನಿಕ ದೋಸ್ತ್) ಎಂದು ಕರೆಯುತ್ತಿದ್ದರು.

ವಾಚಕರ ವಾಣಿ

ವಿ.ವಿ. ಶಿಕ್ಷಣ ಉಳ್ಳವರ ಸೊತ್ತೇ?

ಹೆಗ್ಗೋಡಿನ ಚರಕ ಸಂಸ್ಥೆಯಲ್ಲಿ ನನ್ನೊಡನೆ ಬಣ್ಣಗಾರಿಕೆ ಕೆಲಸ ಮಾಡುತ್ತಿದ್ದ ನನ್ನ ಸ್ನೇಹಿತನ ಮಗಳು ಶೇ 81ರಷ್ಟು ಅಂಕಗಳೊಂದಿಗೆ ಬಿ.ಎ. ಪಾಸಾಗಿದ್ದಾಳೆ. ಕುವೆಂಪು ವಿಶ್ವವಿದ್ಯಾಲಯದಲ್ಲಿ ಎಂ.ಎ.ಗೆ ಪ್ರವೇಶ ಕೂಡ ಸಿಕ್ಕಿದೆ. ತರಗತಿಗಳು ಈ ತಿಂಗಳ 3ರಿಂದಲೇ ಆರಂಭವಾಗಿವೆ. ಆದರೆ ವಸತಿನಿಲಯ ಮಾತ್ರ (ಒಬಿಸಿ) ಆರಂಭವಾಗಲು ಇನ್ನೂ ಒಂದು ತಿಂಗಳು ಬೇಕಂತೆ. ಜನರಲ್ ಹಾಸ್ಟೆಲ್ ಆರಂಭವಾಗಿದೆ. ಅಲ್ಲಿ ₹ 12,000 ಪ್ರವೇಶ ಶುಲ್ಕ ಮತ್ತು ಮಾಸಿಕ ₹ 2000 ಅಂದಾಜು ಊಟದ ಶುಲ್ಕವಿದೆ. ಒಬಿಸಿ ಹಾಸ್ಟೆಲ್‌ನಲ್ಲಿ ಪ್ರವೇಶ ಸಿಕ್ಕರೆ ಈ ಹಣವನ್ನೇನೂ ಹಿಂದಿರುಗಿಸುವುದಿಲ್ಲವಂತೆ.

ಕೇವಲ ಒಂದು- ಎರಡು ಎಕರೆ ಗದ್ದೆ, ಹತ್ತು ಗುಂಟೆ ತೋಟ ಇರುವ ಅವನು, ಒಬ್ಬಳೇ ಮಗಳು ಮತ್ತು ಬುದ್ಧಿವಂತೆ ಎಂಬ ಕಾರಣಕ್ಕೆ ಸಾಲ ಮಾಡಿಯಾದರೂ ಎಂ.ಎ. ಓದಿಸಲು ಮುಂದಾಗಿದ್ದಾನೆ. ಇಲ್ಲವಾದಲ್ಲಿ ಇಷ್ಟಕ್ಕೇ ಓದು ನಿಲ್ಲಿಸಿ ಮದುವೆಗೆ ಸಿದ್ಧತೆ ಮಾಡುತ್ತಿದ್ದನೇನೊ. ವಾಸ್ತವವಾಗಿ ಶಾಲಾ- ಕಾಲೇಜು ಅಥವಾ ವಿಶ್ವವಿದ್ಯಾಲಯದ ತರಗತಿಗಳು ಆರಂಭವಾಗುವ ಮೊದಲೇ ಆಯಾ ಹಾಸ್ಟೆಲ್‌ಗಳು ಆರಂಭವಾಗಿರಬೇಕಲ್ಲವೇ? ಇಲ್ಲವಾದರೆ ಹಳ್ಳಿಯಿಂದ ಬರುವ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗುವುದಾದರೂ ಹೇಗೆ? ಇಷ್ಟು ಸಣ್ಣ ಸಾಮಾನ್ಯ ಜ್ಞಾನವು ಸಮಾಜ ಕಲ್ಯಾಣ ಇಲಾಖೆಗಾಗಲೀ ವಿಶ್ವವಿದ್ಯಾಲಯದ ಆಡಳಿತ ಮಂಡಳಿಗಾಗಲೀ ಇರಬೇಡವೇ? ಬಡವರ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ವಿಶ್ವವಿದ್ಯಾಲಯದ ಮೆಟ್ಟಿಲು ಹತ್ತದಿರಲು ಇಂತಹವೇ ಹತ್ತು ಹಲವು ಕಾರಣಗಳು ಇರಬಹುದಲ್ಲವೇ?

ಎನ್.ಎಂ.ಕುಲಕರ್ಣಿ, ಹೆಗ್ಗೋಡು

ನಂಬಿಕೆ ನಮ್ಮೊಳಗಿನ ಬೆಳಕಾಗಲಿ

ಕೋಳಿ ಕೂಗದ, ಮಂಚ ಇಲ್ಲದ ಮೈಲಾಪುರ ಸುದ್ದಿ (ಪ್ರ.ವಾ., ಜ. 13) ಓದಿ ಒಂದು ಕ್ಷಣ ದಂಗುಬಡಿದಂತಾಯಿತು. ಯಾದಗಿರಿ ತಾಲ್ಲೂಕಿನ ಮೈಲಾಪುರ ಗ್ರಾಮದಲ್ಲಿ 350 ಕುಟುಂಬಗಳು, ಎರಡು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇದೆ. ಮಲ್ಲಯ್ಯ ದೇವರಿಗೆ ಕೋಳಿ ಕೂಗುವ ಶಬ್ದ ಕೇಳಬಾರದು ಎಂಬ ಕಾರಣಕ್ಕೆ ಊರಲ್ಲಿ ಯಾರೊಬ್ಬರೂ ಶತಮಾನಗಳಿಂದಲೂ ಕೋಳಿ ಸಾಕುವುದಿಲ್ಲ, ದೇಗುಲದಲ್ಲಿ ಮಂಚ ಇರುವುದರಿಂದ ಗ್ರಾಮದ ಯಾರೊಬ್ಬರೂ ಮಂಚ ಬಳಸುವುದಿಲ್ಲ. ಇದು ಮೈಲಾರಲಿಂಗೇಶ್ವರ ದೇವಸ್ಥಾನದ ವಿಶೇಷ ಎಂದು ಹೇಳಲಾಗುತ್ತಿದೆ. ವಾಸ್ತವವಾಗಿ ಇದು ಊರಿನ ವಿಶೇಷ ಅಲ್ಲ. ಆ ಊರಿಗೆ ಅಂಟಿರುವ ಮೌಢ್ಯ ಅಷ್ಟೇ.

ಮದುವೆಯ ಹೊಸತರಲ್ಲಿ ಸಂಗಾತಿಗಳು ಮಂಚದ ಮೇಲೆ ಒರಗಿಕೊಳ್ಳಲು ಅವಕಾಶ ಇಲ್ಲ. ದಣಿದು ಬಂದ ಜೀವಗಳಿಗೆ ಮಂಚದ ಮೇಲೆ ಸಣ್ಣ ನಿದ್ದೆಗೂ ಆಸ್ಪದವಿಲ್ಲ. ತುಂಬು ಗರ್ಭಿಣಿಯರಿಗೆ, ಹೆರಿಗೆ ಆದವರಿಗೆ ಮಂಚದ ಅಗತ್ಯ ಬಂದಾಗ, ಅವರಿಗಾಗುವ ನೋವಿಗೆ ಯಾವ ದೇವರ ಹೆಸರು ಹೇಳಿ ಸಮಾಧಾನಪಡಿಸುವಿರಿ? ವೃದ್ಧರು, ಅಂಗವಿಕಲರಿಗೆ ಮಂಚದ ಅನಿವಾರ್ಯ ಇದ್ದೇ ಇರುತ್ತದೆ. ಇವರೆಲ್ಲ ದೇವರ ಹೆಸರಲ್ಲಿ ಹಿಂಸೆ ಅನುಭವಿಸಬೇಕೆ?

ಅನಾರೋಗ್ಯದಿಂದ ಬಳಲುವವರು, ರೋಗಿಗಳು, ಮೂಳೆ ಮುರಿತಕ್ಕೆ ಒಳಗಾದವರಿಗೆ ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ವೈದ್ಯರು ನೀಡುವ ಮೊದಲ ಸಲಹೆ, ನಾಟಿ ಕೋಳಿ ಮೊಟ್ಟೆ ತಿನ್ನಿ ಎಂದು. ಆಗ ಮೊಟ್ಟೆ ತರಲು ಪರ ಊರನ್ನು ಅವಲಂಬಿಸಬೇಕೆ? ದೇವರು ಮತ್ತು ನಂಬಿಕೆ ನಮ್ಮೊಳಗಿನ ಬೆಳಕಾಗಬೇಕು. ಅದುಬಿಟ್ಟು, ಇರುವ ಬೆಳಕಿನ ಬದುಕನ್ನು ಕತ್ತಲಾಗಿಸುವಂತೆ ಇರಬಾರದು.

ಸಂಜೀವ್ ಜಗ್ಲಿ, ಮಾನ್ವಿ

ಪಶ್ಚಿಮ ಘಟ್ಟ ಸಂರಕ್ಷಣೆ: ವರದಿ ಗಂಭೀರವಾಗಿ ಪರಿಗಣಿಸಿ

ಪಶ್ಚಿಮ ಘಟ್ಟಗಳ ಹದಗೆಟ್ಟ ಪರಿಸ್ಥಿತಿಯ ಬಗ್ಗೆ ಮಾಧವ ಗಾಡ್ಗೀಳರ ಮಾತನ್ನು (ಪ್ರ.ವಾ., ಅ. 10) ಈಗಲಾದರೂ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇದು ಕೇವಲ ಕರಾವಳಿ- ಮಲೆನಾಡುಗಳಿಗೆ ಸಂಬಂಧಿಸಿದ ವಿಚಾರ ಅಲ್ಲ. ಶಿವರಾಮ ಕಾರಂತರನ್ನು ಬೇಡ್ತಿ ಬಗೆಗೆ ವಿಚಾರಿಸಿದಾಗ ‘ದೇಶದಲ್ಲಿ ಇಂತಹ ಇಪ್ಪತ್ತು ಸಮಸ್ಯಾತ್ಮಕ ಯೋಜನೆಗಳಿವೆ’ ಎಂದಿದ್ದರು. ನರ್ಮದಾ, ಟೆಹ್ರಿ ವಿಷಯಗಳ ಬಗೆಗೂ ಅವರು ಚಿಂತಿಸಿದ್ದರು.

ನಮ್ಮ ಈಗಿನ ಜನಪ್ರತಿನಿಧಿಗಳ ಗುಣಮಟ್ಟ, ಸಂವೇದನಾಶೀಲತೆ, ಪ್ರಾಶಸ್ತ್ಯಗಳನ್ನು ನೋಡಿದರೆ ಅವರ ಮೇಲೆ ‘ಒತ್ತಡ ಹೇರಲು’ ಸಾಧ್ಯವೇ ಎಂಬ ಸಂಶಯ ಹುಟ್ಟುತ್ತದೆ. ಕೇರಳ ಹಾಗೂ ಕರಾವಳಿ ಕರ್ನಾಟಕದ ಜಿಲ್ಲೆಗಳಿಗೆ ಹೋಲಿಕೆ ಇದೆ. ಹಾಗೆಯೇ ನಮ್ಮ ಮಲೆನಾಡು ಹಾಗೂ ಕೇರಳದ ಒಳಭಾಗದ ಗುಡ್ಡಪ್ರದೇಶಗಳಲ್ಲಿ ಕೆಲವು ಸಮಾನ ಅಂಶಗಳಿವೆ. ಈ ವರ್ಷ ಮುಂಗಾರು ಹಿಂದೆ ಸರಿಯುವುದು ತಡವಾಗಿದೆ, ಹಿಂಗಾರು ಸಮೀಪಿಸುತ್ತಿದೆ. ಎರಡು- ಮೂರು ಲೋ ಪ್ರೆಶರ್ ಸಿಸ್ಟಮ್‌ಗಳ ಮಧ್ಯೆ ಒಮ್ಮೆಗೇ ಸಿಲುಕಿದಾಗ ಎಲ್ಲ ಅಸ್ತವ್ಯಸ್ತ ಆಗುತ್ತದೆ. ಹವಾಮಾನ ಬದಲಾವಣೆ ಬರೀ ಮಳೆಯ ಮೇಲೆ ಪ್ರಭಾವ ಬೀರುವುದಿಲ್ಲ, ತಾಪಮಾನ ಮತ್ತು ಅದರಿಂದಾಗಿ ಕೃಷಿ, ಮೀನುಗಾರಿಕೆಯಂತಹ ಜನರ ಜೀವನೋಪಾಯ ಚಟುವಟಿಕೆಗಳ ಮೇಲೂ ದುಷ್ಪರಿಣಾಮ ಬೀರಬಹುದು.

ಗಾಡ್ಗೀಳರ ವರದಿ ವಾಸ್ತವಕ್ಕೆ ಹತ್ತಿರವಿದ್ದು ‘ಬಿಗಿ’ಯಾಗಿತ್ತು, ಕಸ್ತೂರಿ ರಂಗನ್ ವರದಿ ಸ್ಯಾಟಲೈಟ್ ಸರ್ವೆ ಆಧರಿಸಿ ಹಲವು ರಿಯಾಯಿತಿಗಳನ್ನು ಒಳಗೊಂಡಿದೆ. ಅದರ ಬಗೆಗೂ ಸುಪ್ರೀಂ ಕೋರ್ಟ್‌ನ ಮಧ್ಯಪ್ರವೇಶದ ನಂತರವೂ ಒಮ್ಮತ ಮೂಡದೆ ಏನೂ ಕೆಲಸ ನಡೆದಿಲ್ಲ. ಪರಿಸರವಾದಿಗಳಲ್ಲಿ ಕೆಲವರಿಗೆ ವಯಸ್ಸಾಗಿದೆ, ಕೆಲವರು ಬೆಂಗಳೂರು ಸೇರಿಕೊಂಡಿದ್ದಾರೆ. ಕೆಲವು ಎನ್‌ಜಿಒಗಳಿಗೆ ವಿದೇಶಿ ನೆರವಿನ ಮೂಲ ಬಂದ್ ಆಗಿದೆ. ಸರ್ಕಾರಿ ಟಾಸ್ಕ್ ಫೋರ್ಸ್ ಸೇರಿಕೊಂಡವರೂ ಇದ್ದಾರೆ. ನೇತಾರರಲ್ಲಿ ಕೆಲವರು ದಿಲ್ಲಿ ಮುಖಿಯಾಗಿ, ಹಿಂದಿರುಗಿ ರಾಜ್ಯ ರಾಜಧಾನಿಯಲ್ಲಿ ನೆಲೆಸಿದ್ದಾರೆ. ರಿಯಲ್ ಎಸ್ಟೇಟ್, ಹೋಟೆಲ್, ರೆಸಾರ್ಟ್ ಉದ್ಯಮಗಳಲ್ಲಿ ಯಶಸ್ವಿಯಾದವರು ‘ಅಭಿವೃದ್ಧಿ’ಗೆ ಬೆಂಬಲ ನೀಡುವುದರ ಬದಲು ಪರಿಸರ ಸಂರಕ್ಷಣೆಯ ಪರ ನಿಲ್ಲುವರೇ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸರ್ವರಿಗೂ ಎಲ್‌ಪಿಜಿ ಸಂಪರ್ಕ
ತಾಳೆಯಾಗದ ಸರ್ಕಾರದ ಲೆಕ್ಕ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ದೇಶದಲ್ಲಿ ಎಲ್‌ಪಿಜಿ ಸಂಪರ್ಕ ಇರುವ ಕುಟುಂಬಗಳ ಪ್ರಮಾಣ ಮತ್ತು ಎಲ್‌ಪಿಜಿ ಸಂಪರ್ಕ ಇಲ್ಲದೇ ಇರುವ ಜನರ ಪ್ರಮಾಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಬೇರೆ ಬೇರೆ ವರದಿಗಳಲ್ಲಿ ನೀಡಲಾಗಿರುವ ದತ್ತಾಂಶದಲ್ಲಿ ಭಾರಿ ಅಂತರವಿದೆ. ದೇಶದ ಶೇ 99.50ರಷ್ಟು ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕ ನೀಡಲಾಗಿದೆ ಎಂದು ಇಂಧನ ಸಚಿವಾಲಯವು ರಾಜ್ಯಸಭೆಗೆ ಮಾಹಿತಿ ನೀಡಿತ್ತು. ಆದರೆ ಈಚೆಗೆ ಬಿಡುಗಡೆಯಾಗಿರುವ ನೀತಿ ಆಯೋಗದ ಬಹು ಆಯಾಮದ ಬಡತನ ಸೂಚ್ಯಂಕ ವರದಿಯಲ್ಲಿ ದೇಶದ ಶೇ 40ಕ್ಕೂ ಹೆಚ್ಚು ಜನರಿಗೆ ಎಲ್‌ಪಿಜಿ ಸಂಪರ್ಕವೇ ಇಲ್ಲ ಎಂದು ಹೇಳಲಾಗಿದೆ.

ದೇಶದ ಎಲ್ಲಾ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕವನ್ನು ಒದಗಿಸಬೇಕು ಎಂಬ ಮಹತ್ವಾಕಾಂಕ್ಷೆಯಿಂದ ಕೇಂದ್ರ ಸರ್ಕಾರವು 2016ರಲ್ಲಿ ಉಜ್ವಲ ಯೋಜನೆಯನ್ನು ಆರಂಭಿಸಿತ್ತು. ಮೊದಲ ಹಂತದ ಯೋಜನೆಯಲ್ಲಿ 8.05 ಕೋಟಿ ಹೊಸ ಎಲ್‌ಪಿಜಿ ಸಂಪರ್ಕವನ್ನು ಒದಗಿಸಲಾಗಿದೆ. ಎರಡನೇ ಹಂತವೂ ಸೇರಿ ಹೊಸದಾಗಿ 9 ಕೋಟಿಗೂ ಹೆಚ್ಚು ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕವನ್ನು ನೀಡಲಾಗಿದೆ. ಇದರಿಂದ ದೇಶದ ಬಹುತೇಕ ಎಲ್ಲಾ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕ ನೀಡಲಾಗಿದೆ. ಈ ಕುಟುಂಬಗಳು ಎಲ್‌ಪಿಜಿ ಬಳಸುತ್ತಿವೆ ಎಂದು ಸರ್ಕಾರವು ಹೇಳಿದೆ.

‘2021ರ ಜನವರಿ 1ರ ವೇಳೆಗೆ ದೇಶದ 28.90 ಕೋಟಿ ಕುಟುಂಬಗಳು ಎಲ್‌ಪಿಜಿ ಸಂಪರ್ಕ ಪಡೆದಿವೆ. ಅಲ್ಲದೆ, ಎಲ್‌ಪಿಜಿ ಸಂಪರ್ಕ ಹೊಂದಿರುವ ಕುಟುಂಬಗಳ ಪ್ರಮಾಣ ಶೇ 99.50ರಷ್ಟು’ ಎಂದು ಇಂಧನ ಸಚಿವಾಲಯವು 2021ರ ಫೆಬ್ರುವರಿ 3ರಂದು ರಾಜ್ಯಸಭೆಗೆ ಮಾಹಿತಿ ನೀಡಿತ್ತು. ಸರ್ಕಾರವು ರಾಜ್ಯಸಭೆಗೆ ನೀಡಿದ್ದ ವರದಿಯ ಅವಧಿಗೇ ಅನ್ವಯವಾಗುವ ಬಹು ಆಯಾಮದ ಬಡತನ ಸೂಚ್ಯಂಕ ವರದಿಯ ಪ್ರಕಾರ ದೇಶದ ಶೇ 41.40ರಷ್ಟು ಜನರು ಎಲ್‌ಪಿಜಿ ಸಂಪರ್ಕ ವಂಚಿತರು. ಈ ಎರಡೂ ವರದಿಗಳ ಮಾಹಿತಿಯಲ್ಲಿ ಸಾಕಷ್ಟು ಅಂತರವಿದೆ.


ಎರಡೂ ವರದಿಗಳಲ್ಲಿ ಒಂದು ಮೂಲಭೂತ ವ್ಯತ್ಯಾಸವಿದೆ. ರಾಜ್ಯಸಭೆಗೆ ನೀಡಲಾದ ವರದಿಯಲ್ಲಿ ಎಲ್‌ಪಿಜಿ ಸಂಪರ್ಕ ಹೊಂದಿರುವ ಕುಟುಂಬಗಳ ಪ್ರಮಾಣವನ್ನು (ಶೇ 99.50) ತೋರಿಸಲಾಗಿದೆ. ಆದರೆ ಬಹು ಆಯಾಮದ ಬಡತನ ಸೂಚ್ಯಂಕ ವರದಿಯಲ್ಲಿ ಎಲ್‌ಪಿಜಿ ಸಂಪರ್ಕ ವಂಚಿತ ಜನರ ಪ್ರಮಾಣವನ್ನು ತೋರಿಸಲಾಗಿದೆ.

2011ರ ಜನಗಣತಿ ಪ್ರಕಾರ ದೇಶದಲ್ಲಿ 24.50 ಕೋಟಿ ಕುಟುಂಬಗಳಿದ್ದವು. ಅವುಗಳ ಸಂಖ್ಯೆ ಈಗ ಸಹಜವಾಗಿ ಹೆಚ್ಚಳವಾಗಿರುತ್ತದೆ. 2021ರ ಜನಗಣತಿ ನಡೆಯದೇ ಇರುವ ಕಾರಣ, ದೇಶದಲ್ಲಿ ಈಗ ಎಷ್ಟು ಕುಟುಂಬಗಳಿವೆ ಎಂಬುದರ ಕರಾರುವಕ್ಕಾದ ಮಾಹಿತಿ ಇಲ್ಲ. ಆದರೆ ಸರ್ಕಾರವು ರಾಜ್ಯಸಭೆಗೆ ನೀಡುವ ಮಾಹಿತಿಯನ್ನು ಆಧರಿಸಿ ಅಂದಾಜಿಸಿದರೆ ದೇಶದಲ್ಲಿ ಈಗ 29.5 ಕೋಟಿ ಕುಟುಂಬಗಳಿರಬಹುದು. ಇದರಲ್ಲಿ 28.90 ಕೋಟಿ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕ ನೀಡಿರುವುದಾದರೆ, ದೇಶದ ಶೇ 99.50ರಷ್ಟು ಜನರಿಗೆ ಎಲ್‌ಪಿಜಿ ಸಂಪರ್ಕ ಇರಬೇಕಿತ್ತು. ಆದರೆ ಸರ್ಕಾರದ್ದೇ ಇನ್ನೊಂದು ವರದಿಯ ಪ್ರಕಾರ ದೇಶದ ಶೇ 40ಕ್ಕೂ ಹೆಚ್ಚು ಜನರು ಎಲ್‌ಪಿಜಿ ವಂಚಿತರು.

ಕೆಲವು ರಾಜ್ಯಗಳಲ್ಲಿ ಎಲ್‌ಪಿಜಿ ಸಂಪರ್ಕ ಇರುವ ಕುಟುಂಬಗಳ ಪ್ರಮಾಣ ಮತ್ತು ಎಲ್‌ಪಿಜಿ ಸಂಪರ್ಕ ಹೊಂದಿರುವ ಜನರ ಪ್ರಮಾಣ ಬಹುತೇಕ ತಾಳೆಯಾಗುತ್ತವೆ. ಕೆಲವು ರಾಜ್ಯಗಳಲ್ಲಿ ಎರಡೂ ದತ್ತಾಂಶಗಳ ನಡುವೆ ಭಾರಿ ಅಂತರವಿದೆ. ಆದರೆ ದೇಶದ ಯಾವ ರಾಜ್ಯದಲ್ಲೂ ಎಲ್‌ಪಿಜಿ ಸಂಪರ್ಕ ಹೊಂದಿರುವವರ ಪ್ರಮಾಣ ಶೇ 99ರಷ್ಟನ್ನು ಮುಟ್ಟಿಲ್ಲ.


ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ

ಎಲ್‌ಪಿಜಿ ಸಂಪರ್ಕ ಹೊಂದಿರುವವರು | 0.0 ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ | ಎಲ್‌ಪಿಜಿ ಸಂಪರ್ಕ ವಂಚಿತರ ಸಂಖ್ಯೆ ಶೇ 30ಕ್ಕಿಂತಲೂ ಹೆಚ್ಚು ಇರುವ ರಾಜ್ಯಗಳು



ರಾಜ್ಯ	ವಂಚಿತರ ಪ್ರಮಾಣ	ರಾಜ್ಯ	ವಂಚಿತರ ಪ್ರಮಾಣ
ಜಮ್ಮು ಮತ್ತು ಕಾಶ್ಮೀರ	45.21%	ಲಡಾಖ್	45.21%
ಪಂಜಾಬ್	20.30%	ಹಿಮಾಚಲ ಪ್ರದೇಶ	53.10%
ಹರಿಯಾಣ	40.50%	ಉತ್ತರಾಖಂಡ	40.80%
ರಾಜಸ್ಥಾನ	58.60%	ದೆಹಲಿ	1.10%
ಗುಜರಾತ್	35.50%	ಉತ್ತರ ಪ್ರದೇಶ	50.50%
ಮಧ್ಯಪ್ರದೇಶ	59.90%	ಸಿಕ್ಕಿಂ	23.40%
ಪಶ್ಚಿಮ ಬಂಗಾಳ	61.60%	ಅರುಣಾಚಲ ಪ್ರದೇಶ	46.80%
ಛತ್ತೀಸಗಡ	67%	ಅಸ್ಸಾಂ	60.50%
ಮಹಾರಾಷ್ಟ್ರ	20.80%	ನಾಗಾಲ್ಯಾಂಡ್	56.90%
ತೆಲಂಗಾಣ	7.8%	ಮಣಿಪುರ	28.70%
ಗೋವಾ	3.10%	ಮಿಜೋರಾಂ	16.80%
ಕರ್ನಾಟಕ	21.90%	ತ್ರಿಪುರಾ	56.20%
ಆಂಧ್ರಪ್ರದೇಶ	16.40%	ಮೇಘಾಲಯ	69.20%
ಕೇರಳ	28.20%	ಬಿಹಾರ	63.2%
ತಮಿಳುನಾಡು	17.10%	ಜಾರ್ಖಂಡ್	68.10%
ಒಡಿಶಾ	65.3%		

ಎಲ್‌ಪಿಜಿ ಸಂಪರ್ಕ ಹೊಂದಿರುವವರು | 0.0 ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ | ಎಲ್‌ಪಿಜಿ ಸಂಪರ್ಕ ವಂಚಿತರ ಸಂಖ್ಯೆ ಶೇ 30ಕ್ಕಿಂತಲೂ ಹೆಚ್ಚು ಇರುವ ಜಿಲ್ಲೆಗಳು



ಜಿಲ್ಲೆ	ವಂಚಿತರ ಪ್ರಮಾಣ	ಜಿಲ್ಲೆ	ವಂಚಿತರ ಪ್ರಮಾಣ
ಬೀದರ್	67.68%	ಕಲಬುರಗಿ	63.27%
ವಿಜಯಪುರ	71.40%	ಯಾದಗಿರಿ	79.11%
ಬಾಗಲಕೋಟೆ	66.52%	ರಾಯಚೂರು	72.5%
ಬೆಳಗಾವಿ	52.08%	ಕೊಪ್ಪಳ	68.63%
ಧಾರವಾಡ	25.12%	ಗದಗ	76.02%
ಹಾವೇರಿ	65.91%	ಬಳ್ಳಾರಿ	52.73%
ಉತ್ತರ ಕನ್ನಡ	ಮಾಹಿತಿ ಲಭ್ಯವಿಲ್ಲ	ದಾವಣಗೆರೆ	47.60%
ಶಿವಮೊಗ್ಗ	38.32%	ಚಿತ್ರದುರ್ಗ	60.86%
ಉಡುಪಿ	57.57%	ತುಮಕೂರು	57.83%
ಚಿಕ್ಕಮಗಳೂರು	50.91%	ಚಿಕ್ಕಬಳ್ಳಾಪುರ	49.33%
ಹಾಸನ	43.20%	ಕೋಲಾರ	39.13%
ದಕ್ಷಿಣ ಕನ್ನಡ	49.06%	ಬೆಂ. ಗ್ರಾಮಾಂತರ	31.32%
ಕೊಡಗು	53.03%	ಬೆಂಗಳೂರು ನಗರ	3.96%
ಮೈಸೂರು	31.01%	ರಾಮನಗರ	40.75%
ಮಂಡ್ಯ	42.35%	ಚಾಮರಾಜನಗರ	60.67%

- ದೇಶದ 13 ರಾಜ್ಯಗಳಲ್ಲಿ ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ ಶೇ 50ಕ್ಕಿಂತಲೂ ಹೆಚ್ಚು ಇದೆ
- ಹಿಂದಿ ಭಾಷಿಕ ರಾಜ್ಯಗಳು, ಪಶ್ಚಿಮ ಬಂಗಾಳ, ಒಡಿಶಾ ಮತ್ತು ಈಶಾನ್ಯ ಭಾರತದ ರಾಜ್ಯಗಳಲ್ಲೇ ಎಲ್‌ಪಿಜಿ ವಂಚಿತರು ಅತ್ಯಧಿಕ ಪ್ರಮಾಣದಲ್ಲಿ ಇದ್ದಾರೆ
- ದಕ್ಷಿಣ ಭಾರತದ ಯಾವ ರಾಜ್ಯಗಳಲ್ಲೂ ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ ಶೇ 30ನ್ನು ಮುಟ್ಟಿಲ್ಲ
- ಗೋವಾ ಮತ್ತು ತೆಲಂಗಾಣದಲ್ಲಿ ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ ಶೇ 10ಕ್ಕಿಂತಲೂ ಕಡಿಮೆ ಇದೆ
- ದೆಹಲಿಯಲ್ಲಿ ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ ದೇಶದ ಎಲ್ಲೆಡೆಗಿಂತ ಕಡಿಮೆ ಇದೆ

7 ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ ಶೇ 60ಕ್ಕಿಂತಲೂ ಹೆಚ್ಚು ಇರುವ ರಾಜ್ಯಗಳು

6 ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ ಶೇ 50-60ರಷ್ಟು ಇರುವ ರಾಜ್ಯಗಳು

5 ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ ಶೇ 40-50ರಷ್ಟು ಇರುವ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು

ಕರ್ನಾಟಕ: 17 ಜಿಲ್ಲೆಗಳಲ್ಲಿ ಅರ್ಧದಷ್ಟೂ ತಲುಪಿಲ್ಲ

ದೇಶದ ಶೇ 99ರಷ್ಟು ಕುಟುಂಬಗಳಿಗೆ ಸ್ವಚ್ಛ ಇಂಧನ ನೀಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರವು ಹೇಳಿಕೊಳ್ಳುತ್ತಿದೆಯಾದರೂ, ಕರ್ನಾಟಕದ ಮಟ್ಟಿಗೆ ವಾಸ್ತವ ಹಾಗಿಲ್ಲ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5ರ ವರದಿ ಆಧರಿಸಿ ಸಿದ್ಧಪಡಿಸಲಾಗಿರುವ ‘ಬಹು ಆಯಾಮದ ಬಡತನ ಸೂಚ್ಯಂಕ ವರದಿ’ ಪ್ರಕಾರ, ಕರ್ನಾಟಕದ ಶೇ 21.9ರಷ್ಟು ಜನರು ಅಡುಗೆ ಅನಿಲ ಬಳಕೆಯಿಂದ ವಂಚಿತರಾಗಿದ್ದಾರೆ. ರಾಜ್ಯದ 17 ಜಿಲ್ಲೆಗಳ ಶೇ 50ಕ್ಕೂ ಹೆಚ್ಚು ಜನರು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ಸೌಲಭ್ಯ ವಂಚಿತ ಜನರ ಪ್ರಮಾಣ ಅತ್ಯಧಿಕವಾಗಿದೆ. ಜಿಲ್ಲೆಯ ಶೇ 79.11ರಷ್ಟು ಜನರಿಗೆ ಈ ಸವಲತ್ತು ಸಿಕ್ಕಿಲ್ಲ ಎಂದು ವರದಿಯ ದತ್ತಾಂಶಗಳು ಹೇಳುತ್ತವೆ. ವಿಜಯಪುರ, ಗದಗ ಹಾಗೂ ರಾಯಚೂರು ಜಿಲ್ಲೆಗಳ ಶೇ 70ಕ್ಕಿಂತಲೂ ಹೆಚ್ಚು ಜನರಿಗೆ ಈ ಸೌಲಭ್ಯ ದೊರೆತಿಲ್ಲ. ಬೆಂಗಳೂರು ನಗರದ ಶೇ 3.96 ಜನರು ಇನ್ನೂ ಈ ಸೌಲಭ್ಯಕ್ಕೆ ಒಳಪಡಬೇಕಿದೆ.

ಈ ದತ್ತಾಂಶಗಳು 2019ರ ‘ಪ್ರಧಾನಮಂತ್ರಿ ಉಜ್ವಲ ಯೋಜನೆ’ ಕುರಿತ ಸಿಎಜಿ ವರದಿಯ ದತ್ತಾಂಶಗಳಿಗೂ ಹೊಂದಿಕೆಯಾಗುವುದಿಲ್ಲ. ಸಿಎಜಿ ವರದಿ ಪ್ರಕಾರ, ರಾಜ್ಯದ 1.48 ಕೋಟಿ ಕುಟುಂಬಗಳಿದ್ದು, 1.54 ಕೋಟಿ ಸಕ್ರಿಯ ಎಲ್‌ಪಿಜಿ ಸಂಪರ್ಕಗಳಿವೆ. ಅಂದರೆ ಶೇ 103ರಷ್ಟು ಗುರಿ ಸಾಧನೆಯಾಗಿದೆ ಎಂದು ವರದಿ ತಿಳಿಸಿದೆ.

ಆಧಾರ: ಬಹು ಆಯಾಮದ ಬಡತನ ಸೂಚ್ಯಂಕ ವರದಿ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5ರ ವರದಿ, ರಾಜ್ಯಸಭೆಯಲ್ಲಿ ಇಂಧನ ಸಚಿವಾಲಯ ನೀಡಿರುವ ಉತ್ತರ (ಪಿಐಬಿ ಪ್ರಕಟಣೆ ಸಂಖ್ಯೆ:1694710), ಉಜ್ವಲ ಯೋಜನೆಗೆ ಸಂಬಂಧಿಸಿದ ಸಿಎಜಿ ವರದಿ, ಜನಸಂಖ್ಯಾ ವರದಿ–2011



ರುದ್ರ ಕೈಲಾಸಸಂಹಿತೆಗಳೇ ಶ್ರೇಷ್ಠ

ಶಿವಪುರಾಣದಲ್ಲಿರುವ ಕೈಲಾಸಸಂಹಿತೆ ಎಂಬುದು ರುದ್ರಸಂಹಿತೆಗಿಂತಲೂ ಅತ್ಯಂತ ಉತ್ಕೃಷ್ಟವಾದುದು. ಅದು ಸರ್ವವೇದಗಳಿಗೂ ಮೂಲವಾದ ಪ್ರಣವದ ಅರ್ಥವನ್ನು ಪ್ರಕಾಶಪಡಿಸುವುದು. ಆದ್ದರಿಂದ ಕೈಲಾಸಸಂಹಿತೆ ಸಾಕ್ಷಾತ್ ಬ್ರಹ್ಮಸ್ವರೂಪವೇ ಆಗಿದೆ. ಪರಮಪವಿತ್ರವಾದ ಕೈಲಾಸಸಂಹಿತೆಯ ಮಹಾತ್ಮೆಯನ್ನು ಸಾಕ್ಷಾತ್ ಪರಮೇಶ್ವರನೊಬ್ಬ ಮಾತ್ರ ಸಂಪೂರ್ಣವಾಗಿ ಬಲ್ಲ. ನನ್ನ ಗುರುವಾದ ವ್ಯಾಸಮಹರ್ಷಿಯು ಅರ್ಥವನ್ನೂ, ನಾನು ಅದರಲ್ಲರ್ಥವನ್ನೂ ಬಲ್ಲೆನು. ಆದುದರಿಂದ ಅದರ ಮಹಾತ್ಮೆಯನ್ನು ಸ್ವಲ್ಪಮಟ್ಟಿಗೆ ನಿಮಗೆ ಹೇಳುವೆನು. ಕೈಲಾಸಸಂಹಿತೆಯನ್ನು ತಿಳಿಯುವವನು ತಕ್ಷಣದಲ್ಲಿಯೇ ಚಿತ್ತಶುದ್ಧಿ ಪಡೆವನು ಎನ್ನುತ್ತಾನೆ, ಸೂತಮುನಿ.

ಶಿವಪುರಾಣದಲ್ಲಿ ರುದ್ರಸಂಹಿತೆ ಮತ್ತು ಕೈಲಾಸಸಂಹಿತೆಗಳಲ್ಲದೆ, ಇನ್ನೂ ಕೆಲ ಸಂಹಿತೆಗಳಿವೆ. ಅವೂ ಸರ್ವ ಇಷ್ಟಾರ್ಥಗಳನ್ನು ಕೊಡುತ್ತವೆ. ಆದರೆ ರುದ್ರ ಮತ್ತು ಕೈಲಾಸಸಂಹಿತೆಗಳು ಪರಮೇಶ್ವರನ ಲೀಲೆಗಳನ್ನೂ ಬ್ರಹ್ಮಜ್ಞಾನವನ್ನೂ ಉಪದೇಶಿಸುವುದರಿಂದ ಈ ಎರಡು ಸಂಹಿತೆಗಳೇ ಉತ್ಕೃಷ್ಟವಾದುವುಗಳು. ಬ್ರಹ್ಮಹತ್ಯೆ ಮತ್ತಿತರ ಮಹಾಪಾತಕಗಳ ಪಾಪನಿವಾರಣೆ ಮಾಡಿಕೊಳ್ಳಲು, ಕೈಲಾಸಸಂಹಿತೆಯನ್ನು ಒಂದು ಮಾಸ ಕಾಲ ಪಠಿಸಿದರೆ ಮುಕ್ತಿಯನ್ನು ಪಡೆಯಬಹುದು. ದುರ್ದಾನ ಪಡೆದವರು, ಮದ್ಯ–ಮಾಂಸಾಹಾರ ಸೇವನೆಮಾಡಿದವರು, ಗುರು-ದೇವಾದಿಗಳನ್ನು ದೂಷಣೆಮಾಡಿದವರು, ಹಲವಾರು ದುಷ್ಕೃತ್ಯಗಳನ್ನು ಮಾಡಿದವರು ಕೈಲಾಸಸಂಹಿತೆಯನ್ನು ಒಂದು ಬಾರಿ ಪಠಿಸುವುದರಿಂದ ತಮ್ಮ ಪಾಪ ತೊಳೆದುಕೊಳ್ಳುವರು. ಶಿವಾಲಯದಲ್ಲಾಗಲಿ, ಬಿಲ್ವವೃಕ್ಷಗಳ ನೆಲೆಯಲ್ಲಾಗಲಿ, ಈ ಸಂಹಿತೆಯನ್ನು ಯಾರು ಪಠಿಸುವನೋ ಅವರು ಬಯಸಿದ ಫಲವನ್ನು ಪಡೆಯುವರು.

ವ್ಯಾಸರು ರಚಿಸಿದ ಸ್ಕಂದಪುರಾಣದಲ್ಲಿ ಬರುವ ಶಿವಪುರಾಣಮಹಾತ್ಮೆಯಲ್ಲಿ ಶಿವಮಹಾಪುರಾಣದಲ್ಲಿದ್ದ ಹನ್ನೆರಡು ಸಂಹಿತೆಗಳು ಹೇಗೆ ವ್ಯಾಸರಿಂದ ಏಳು ಸಂಹಿತೆಗಳಿಗೆ ಸಂಕ್ಷೇಪವಾದವೆಂಬ ವಿವರವೂ ಇದೆ. ಶಿವಮಹಾಪುರಾಣದ ಹಿಂದಿನ ಹನ್ನೆರಡು ಸಂಹಿತೆಗಳಾವುವೆಂದರೆ ವಿದ್ಯೇಶ್ವರ, ರುದ್ರ, ವಿನಾಯಕ, ಉಮಾ, ಮಾತೃ, ಏಕಾದಶ ರುದ್ರ, ಕೈಲಾಸ, ಶತರುದ್ರ, ಕೋಟಿರುದ್ರ, ಸಹಸ್ರ ಕೋಟಿ ರುದ್ರ, ವಾಯವೀಯ ಮತ್ತು ಧರ್ಮಸಂಹಿತೆಗಳು. ಹಿಂದಿನ ವಿದ್ಯೇಶ್ವರಸಂಹಿತೆಯಲ್ಲಿ ಹತ್ತು ಸಹಸ್ರ ಶ್ಲೋಕ ಇದ್ದರೆ, ವಿನಾಯಕ, ಉಮಾ ಮತ್ತು ಮಾತೃಸಂಹಿತೆಗಳಲ್ಲಿ ಎಂಟು ಸಹಸ್ರ ಶ್ಲೋಕಗಳಿದ್ದವು. ಏಕಾದಶರುದ್ರದಲ್ಲಿ ಹದಿಮೂರು ಸಾವಿರ, ಕೈಲಾಸಸಂಹಿತೆಯಲ್ಲಿ ಆರು ಸಹಸ್ರ, ಶತರುದ್ರದಲ್ಲಿ ಮೂರು ಸಹಸ್ರ, ಕೋಟಿರುದ್ರದಲ್ಲಿ ಒಂಬತ್ತು ಸಾವಿರ, ಸಹಸ್ರ ಕೋಟಿರುದ್ರದಲ್ಲಿ ಹನ್ನೊಂದು ಸಾವಿರ, ವಾಯವೀಯದಲ್ಲಿ ನಾಲ್ಕು ಸಾವಿರ, ಧರ್ಮಸಂಹಿತೆಯಲ್ಲಿ ಹನ್ನೆರಡು ಸಾವಿರ ಶ್ಲೋಕಗಳಿದ್ದವು. ಒಟ್ಟಾರೆ ಒಂದು ಲಕ್ಷ ಶ್ಲೋಕಗಳು ಈ ಶಿವಪ್ರೋಕ್ತವಾದ ಪುರಾಣದಲ್ಲಿತ್ತು.

ಆದಿಸೃಷ್ಟಿಯಲ್ಲಿ, ಅಂದರೆ ಶಿವನಿಂದ ನಿರ್ಮಿತವಾದ ಶಿವಪುರಾಣದಲ್ಲಿ ಒಂದು ನೂರು ಕೋಟಿ ಶ್ಲೋಕಗಳಿದ್ದವಂತೆ. ದ್ವಾಪರ ಯುಗದಲ್ಲಿ ವ್ಯಾಸರಿಂದ ಅದು ನಾಲ್ಕು ಲಕ್ಷ ಶ್ಲೋಕಗಳಿಗೆ ಸಂಕ್ಷೇಪವಾಯಿತು. ಈ ನಾಲ್ಕು ಲಕ್ಷ ಶ್ಲೋಕಗಳಿಂದ ಶಿವಪುರಾಣ ಸೇರಿದಂತೆ ಹದಿನೆಂಟು ಪುರಾಣಗಳನ್ನ ವ್ಯಾಸರು ರಚಿಸಿದರು. ಹೀಗಾಗಿ ವೇದಕ್ಕೆ ಸಮಾನವಾದ ಶಿವಪುರಾಣವು ಆಗ ಇಪ್ಪತ್ತುನಾಲ್ಕು ಸಹಸ್ರ ಶ್ಲೋಕಗಳಿಂದ ಕೂಡಿದ, ಏಳು ಸಂಹಿತೆಗಳಾಗಿ ರಚಿಸಲ್ಪಟ್ಟಿತು. ವೇದವ್ಯಾಸರು ಹನ್ನೆರಡು ಸಂಹಿತೆಗಳನ್ನು ಪರಿಷ್ಕರಿಸಿ, ಏಳು ಸಂಹಿತೆಗಳಾಗಿಸಿದ್ದಲ್ಲದೆ, ಒಂದುಲಕ್ಷ ಶ್ಲೋಕಗಳಿದ್ದ ಶಿವಪುರಾಣಗ್ರಂಥವನ್ನು ಇಪ್ಪತ್ತು ನಾಲ್ಕು ಸಾವಿರ ಶ್ಲೋಕಗಳಿಗೆ ಸಂಕ್ಷೇಪಗೊಳಿಸಿದರು. ಒಟ್ಟಾರೆ, ವ್ಯಾಸರು ಬರೆದ ಎಲ್ಲಾ ಹದಿನೆಂಟು ಮಹಾಪುರಾಣಗಳು ಮಹಾಶಿವನಿಂದ ಸೃಷ್ಟಿಯಾದವು. ವ್ಯಾಸರು ಬರೆದ ಹದಿನೆಂಟು ಮಹಾಪುರಾಣಗಳಲ್ಲಿ ಶಿವಮಹಾಪುರಾಣ ನಾಲ್ಕನೆಯ ಪುರಾಣವೆಂದು ಹೇಳಲಾಗಿದೆ.

ವೇದವ್ಯಾಸರಿಂದ ಸಂಕ್ಷೇಪಗೊಂಡ ಶಿವಪುರಾಣದ ಮೊದಲನೆ ಸಂಹಿತೆ ಹೆಸರು ವಿದ್ಯೇಶ್ವರಸಂಹಿತೆ. ಎರಡನೆಯದು ರುದ್ರಸಂಹಿತೆ. ಮೂರನೆಯದು ಶತರುದ್ರಸಂಹಿತೆ. ನಾಲ್ಕನೆಯದು ಕೋಟಿರುದ್ರಸಂಹಿತೆ, ಐದನೆಯದು ಉಮಾಸಂಹಿತೆ, ಆರನೆಯದು ಕೈಲಾಸಂಹಿತೆ, ಏಳನೆಯದು ವಾಯವೀಯಸಂಹಿತೆ. ಎರಡನೇ ಸಂಹಿತೆಯಾದ ರುದ್ರಸಂಹಿತೆಯಲ್ಲಿ ಸೃಷ್ಟಿಖಂಡ, ಸತಿಖಂಡ, ಪಾರ್ವತಿಖಂಡ, ಕುಮಾರಖಂಡ ಮತ್ತು ಯುದ್ಧಖಂಡ ಎಂಬ ಐದು ಖಂಡಗಳಿವೆ ಎಂದು ಸೂತಮುನಿಯು ಪ್ರಯಾಗದ ಋಷಿಮುನಿಗಳಿಗೆ ಹೇಳುವುದರೊಂದಿಗೆ ಶಿವಮಹಾಪುರಾಣದ ಮೊದಲನೆ ಸಂಹಿತೆಯಾದ ವಿದ್ಯೇಶ್ವರಸಂಹಿತೆಯ ಎರಡನೆ ಅಧ್ಯಾಯ ಮುಗಿಯುತ್ತದೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಅವರು ವಾರದ ಹಿಂದೆ ಮಾಡಿದ್ದ ಟ್ವೀಟ್ ಈಗ ವೈರಲ್ ಆಗುತ್ತಿದೆ. ಉತ್ತರ ಪ್ರದೇಶದ ಶಾಲೆಗಳ ಸ್ಥಿತಿಗತಿ ಎಸ್‌ಪಿ ಸರ್ಕಾರ ಇದ್ದಾಗ ಹೇಗಿತ್ತು ಮತ್ತು ಬಿಜೆಪಿ ಅವಧಿಯಲ್ಲಿ ಹೇಗೆ ಬದಲಾಯಿತು ಎಂದು ಫೋಟೊಗಳ ಮೂಲಕ ಅವರು ತೋರಿಸಿದ್ದಾರೆ. ‘2017ರ ಹಿಂದೆ’ ಎಂಬ ವಿಭಾಗದಲ್ಲಿ ದುಸ್ಥಿತಿಯಲ್ಲಿ ಇರುವ ಮೂರು ಶಾಲೆಗಳ ಚಿತ್ರಗಳಿವೆ. ‘2017ರ ನಂತರ’ ಎಂಬ ವಿಭಾಗದಲ್ಲಿ ಅತ್ಯುತ್ತಮ ವ್ಯವಸ್ಥೆ ಹೊಂದಿರುವ ಶಾಲೆಗಳ ಚಿತ್ರಗಳಿವೆ. ವ್ಯತ್ಯಾಸ ಸ್ಪಷ್ಟವಾಗಿದೆ ಎಂಬ ಅಡಿಬರಹ ಈ ಪೋಸ್ಟ್‌ಗೆ ನೀಡಲಾಗಿದೆ.

ಎಸ್‌ಪಿ ಅವಧಿಗೆ ಸೇರಿದವು ಎಂದು ಹೇಳಲಾದ ಫೋಟೊಗಳನ್ನು ಬಿಜೆಪಿ ಆಡಳಿತದಲ್ಲೇ ತೆಗೆಯಲಾಗಿದೆ ಎಂದು ಆಲ್ಟ್‌ನ್ಯೂಸ್ ವರದಿ ಮಾಡಿದೆ. ಈ ವಿಭಾಗದಲ್ಲಿರುವ ಮೊದಲ ಚಿತ್ರವನ್ನು 2021ರಲ್ಲಿ ಶಿಥಿಲಗೊಂಡಿರುವ ಶಾಲೆಗಳ ಪಟ್ಟಿ ಮಾಡುವ ವೇಳೆ ತೆಗೆಯಲಾಗಿದೆ. ಇನ್ನೆರಡು ಚಿತ್ರಗಳನ್ನು ಕ್ರಮವಾಗಿ 2018ರ ಆ.8ರಂದು ಮತ್ತು 2020 ಡಿ.17ರಂದು ತೆಗೆಯಲಾಗಿದೆ. ಉತ್ತಮ ಸ್ಥಿತಿಯಲ್ಲಿರುವ ಶಾಲೆಯ ಚಿತ್ರಗಳು, ಬುಲಂದ್‌ಶಹರ್‌ನ ಶಾಲೆಯಲ್ಲಿ ಸ್ಥಾಪಿಸಲಾಗಿರುವ ಪ್ರಯೋಗಾಲಯದ್ದು ಎನ್ನಲಾಗಿದೆ. ಸಂಬಿತ್ ಪಾತ್ರ ಪೋಸ್ಟ್ ಮಾಡಿರುವ ಎಲ್ಲಾ ಚಿತ್ರಗಳೂ ಯೋಗಿ ಆದಿತ್ಯನಾಥ ಅವರ ಅವಧಿಯದ್ದೇ ಎಂದು ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಪ್ರಾರಬ್ಧ ಕರ್ಮ

ಪ್ರಾಕ್ತನದ ವಾಸನೆಯೆ ಮನಕೆ ಮೊದಲಿನ ಮಂತ್ರಿ |
ಯುಕ್ತಿಗಳ ತನಗೊಪ್ಪುವಂತೆ ತಿರುಗಿಪುದು ||
ಸೂಕ್ತವೆನಿಪುದು ಸಹಜರುಚಿ ತನ್ನ ತರ್ಕವನೆ |
ಗುಪ್ತದೊಳು ಕುಟಿಲವಿದು – ಮಂಕುತಿಮ್ಮ
|| 541 ||

ಪದ-ಅರ್ಥ: ಪ್ರಾಕ್ತನದ = ಹಳೆಯ, ತನಗೊಪ್ಪುವಂತೆ = ತನಗೆ + ಒಪ್ಪುವಂತೆ, ಸೂಕ್ತವೆನಿಪುದು = ಸೂಕ್ತವು + ಎನಿಪುದು(ಎನ್ನಿಸುವುದು), ಸಹಜರುಚಿ = ಸಹಜವಾದಂತಹ ಅಭಿರುಚಿ, ಕುಟಿಲವಿದು = ಕುಟಿಲವು(ಮೋಸ) + ಇದು.

ವಾಚ್ಯಾರ್ಥ: ಪೂರ್ವಜನ್ಮದ ವಾಸನೆಯೆ ಮನಸ್ಸಿಗೆ ಮೊದಲ ಮಂತ್ರಿ. ಅದು ತನಗೆ ಬೇಕಾದ ಹಾಗೆ ಯುಕ್ತಿಗಳನ್ನು ಬಳಸಿಕೊಳ್ಳುತ್ತದೆ. ತರ್ಕದಿಂದ ತನಗೆ ಸಹಜವಾದಂಥ ಅಭಿರುಚಿಯೇ ಸೂಕ್ತವಾದದ್ದು ಎಂದು ವಾದ ಮಾಡುತ್ತದೆ. ಇದು ಗುಪ್ತವಾದ ಮೋಸ.

ವಿವರಣೆ: ‘ರಂಗನಾಥರಾಯರು ಹೋಗಿಬಿಟ್ಟರಂತೆ. ದೊಡ್ಡ ಹುದ್ದೆಯಲ್ಲಿದ್ದವರು. ಅವರಿಗೆ ಈ ಪರಿಯ ಸಾವು ಬರಬಾರದಿತ್ತು. ರಸ್ತೆಯಲ್ಲಿ ಅಪಘಾತವಾಗಿ ಹೆಣ ಅಲ್ಲಿಯೇ ಒಂದು ದಿನ ಅನಾಥವಾಗಿ ಬಿದ್ದಿತ್ತಂತೆ’ ಎಂದಾಗ ಮತ್ತೊಬ್ಬರು, ‘ಮಾಡಿದ ಕರ್ಮ ಎಲ್ಲಿಗೆ ಹೋಗುತ್ತದೆ? ಅದೆಷ್ಟು ಜನರಿಗೆ ಮೋಸ ಮಾಡಿದ್ದರೋ?’ ಎಂದರು.
‘ಮೊನ್ನೆ ಎರಡು ವರ್ಷದ ಪುಟ್ಟ ಮಗು ರಸ್ತೆಯ ಬದಿಯಲ್ಲಿ ಆಡುತ್ತಿದ್ದಾಗ ಒಬ್ಬ ಟ್ರಾಕ್ಟರ್‌ನ್ನು ಹಿಂದೆ ತೆಗೆದುಕೊಳ್ಳುವಾಗ ನೋಡಿಕೊಳ್ಳಲಿಲ್ಲ. ಪಾಪ! ಮಗುವಿನ ಮೇಲೆ ಅದು ಹರಿದು ಸತ್ತು ಹೋಯಿತು’ ಎಂದಾಗ ‘ಏನೋಪ್ಪ, ಯಾವ ಕರ್ಮವೋ? ಪುಟ್ಟ ಮಗು ಈ ಜನ್ಮದಲ್ಲಿ ಏನು ಪಾಪ ಮಾಡಿರಲು ಸಾಧ್ಯ? ಆದರೆ ಏನು ಮಾಡುವುದು ಪೂರ್ವಜನ್ಮದ ಕರ್ಮ ಇದೆಯಲ್ಲ, ಅದಕ್ಕೇನು ಮಾಡುವುದು’ ಎಂದರು ಇನ್ನೊಬ್ಬರು.

ಈ ತರಹದ ಮಾತುಗಳನ್ನು ನಾವು ಅನೇಕ ಬಾರಿ ಕೇಳಿದ್ದೇವೆ. ಉಪನಿಷತ್ಕಾಲದಲ್ಲಿ ಬಂದ ಒಂದು ಕಲ್ಪನೆ ಪುನರ್ಜನ್ಮ. ಆತ್ಮ ಒಂದು ಶರೀರವನ್ನು ತೊರೆದು ಮತ್ತೊಂದು ಶರೀರವನ್ನು ಪಡೆಯುವುದು, ಹುಟ್ಟು ಸಾವುಗಳ ಆವರ್ತನೆಯಲ್ಲಿ ಸಿಕ್ಕಿಹಾಕಿಕೊಳ್ಳುವುದು ಇದರ ರೂಪ. ಮರಣ ಜೀವನದ ಅಂತ್ಯವಲ್ಲ, ಅದೊಂದು ಅಂತರ ಅಷ್ಟೇ ಮತ್ತೊಂದು ಹೊಸಹುಟ್ಟಿಗೆ ಅದು ಕಾರಣವಾಗುತ್ತದೆ. ಶಂಕರಾಚಾರ್ಯರು ಹೇಳಿದರು, ‘ಪುನರಪಿ ಜನನಂ ಪುನರಪಿ ಮರಣಂ, ಪುನರಪಿ ಜನನೀ ಜಠರೇ ಶಯನಂ.....’. ಮನುಷ್ಯ ಪುನಃ ಪುನಃ ಹುಟ್ಟುತ್ತಾನೆ, ಸಾಯುತ್ತಾನೆ, ತಾಯಿಯ ಗರ್ಭದಲ್ಲಿ ನಿದ್ರಿಸುತ್ತಾನೆ. ಭಗವದ್ಗೀತೆಯೂ ಪುನರ್ಜನ್ಮದ ಬಗ್ಗೆ ಹೇಳುತ್ತದೆ. ನಾವು ಹಳೆಯ ಬಟ್ಟೆಯನ್ನು ಬಿಟ್ಟು ಹೊಸದಾದದ್ದನ್ನು ಧರಿಸುವಂತೆ ಆತ್ಮವೂ ಹಳೆಯ ಶರೀರವನ್ನು ತ್ಯಜಿಸಿ ಹೊಸ ಶರೀರವನ್ನು ಪಡೆಯುತ್ತದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳುವಂತೆ ಈ ಜನ್ಮದಲ್ಲಿ ಮಾಡಿದ ಕಾರ್ಯಗಳು ಮುಂದಿನ ಜನ್ಮವನ್ನು ತೀರ್ಮಾನಿಸುತ್ತವೆ. ಒಳ್ಳೆಯ ಕರ್ಮದಿಂದ ಒಳ್ಳೆಯ ಫಲ. ಕೆಟ್ಟ ಕರ್ಮದಿಂದ ಕೆಟ್ಟ ಫಲ.

ಕಗ್ಗ ಈ ಮಾತನ್ನೇ ಪುಷ್ಟೀಕರಿಸುತ್ತದೆ. ನಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳ ವಾಸನೆ ಮಂತ್ರಿಯಂತೆ ಬೋಧನೆ ಮಾಡಿ ನಮ್ಮ ಈ ಜನ್ಮವನ್ನು ನಿಯಂತ್ರಿಸುತ್ತದೆ. ಅದು ತನ್ನ ಗುರಿಯನ್ನು ಸಾಧಿಸಲು ಅನೇಕ ಯುಕ್ತಿಗಳನ್ನು ಮಾಡುತ್ತದೆ. ತನ್ನ ಮಾರ್ಗಕ್ಕೆ ಸರಿಯಾದದ್ದನ್ನೇ ಸಹಜವಾದದ್ದು ಎಂಬ ತರ್ಕವನ್ನು ಮಂಡಿಸುತ್ತದೆ. ಇದೊಂದು ಕುಟಿಲವೇ ಸರಿ. ಆದರೆ ಅದೊಂದು ಗುಪ್ತವಾದ ಕುಟಿಲ. ನಮಗೆ ಅದು ತಿಳಿಯದು. ತಿಳಿದರೂ ಬದಲಾಯಿಸುವುದು ಕಷ್ಟ. ಅದಕ್ಕೇ ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕ್ಕೆ ಮರುಜನ್ಮದಲ್ಲಿ ಭೀಷ್ಮನಾಗಿ ಕರ್ಮ ಸವೆಸಬೇಕಾಯಿತು. ರಾಮಾಯಣದಲ್ಲಿ ರಾಮನಿಂದ ಹತನಾದ ವಾಲಿ ಮುಂದೆ ಕೃಷ್ಣಾವತಾರದಲ್ಲಿ ಜರಾ ಎಂಬ ಬೇಡನಾಗಿ ಕೃಷ್ಣನಿಗೇ ಬಾಣ ಹೊಡೆದು ಪ್ರಾಣ ಹೀರಿದ. ವೈಕುಂಠದ ಬಾಗಿಲಲ್ಲೇ ಇದ್ದ ಜಯವಿಜಯರು ಮಾಡಿದ ತಪ್ಪಿನಿಂದಾಗಿ ಮೂರು ಜನ್ಮ ಭಗವಂತನ ವೈರಿಗಳಾಗಿ ಹುಟ್ಟಿ ಅವನಿಂದ ಹತರಾದರು. ಸನಾತನ ನಂಬಿಕೆಯಂತೆ ಇಲ್ಲಿ ಯಾವ ನ್ಯಾಯಾಧಿಕರಣ, ಶಿಕ್ಷೆ, ತಪ್ಪೊಪ್ಪಿಗೆ, ಪಶ್ಚಾತ್ತಾಪ, ಕ್ಷಮಾದಾನ ಯಾವುದೂ ಇಲ್ಲ. ಇರುವುದೆಲ್ಲ ಈ ಪ್ರಾಕ್ತನ ಕರ್ಮದ ಅನ್ವಯ ಮಾತ್ರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜನವರಿ 14, 2022

ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ –ಹೇಮಂತ ಋತು ಧನುರ್ಮಾಸದ 29 ನೇ ದಿನ ತಿಥಿ: (ಪೌಷ ಶುಕ್ಲ) ದ್ವಾದಶಿ ಗಂ. 22-20 ನಕ್ಷತ್ರ: ರೋಹಿಣಿ ಗಂ. 20-18 ಯೋಗ: ಶುಕ್ಲ ಗಂ. 13-35 ಕರಣ: ಬವ ಗಂ. 08-57, ಬಾಲವ ಗಂ. 22-20. ರಾಹುಕಾಲ: ಬೆಳಿಗ್ಗೆ 10:30 – 12:00 ಸೂರ್ಯೋದಯ: 07-01 ಸೂರ್ಯಾಸ್ತ: 06-18 ಮುಸ್ಲಿಂ ದಿನಾಂಕ : 10 ಜುಮಾದುಸ್ಸಾನಿ ದಿನ ವಿಶೇಷ: ಮಕರ ಸಂಕ್ರಾಂತಿ, ಮಾಘ ಬಿಹು (ಅಸ್ಸಾಂ), ಪೊಂಗಲ್ (ದ.ಭಾರತ), ಮಕರ ಸ್ನಾನ, ಸಂತ ಪರಮಾನಂದರ ಜನ್ಮದಿನ (ಸಿಂಧಿ), ತಿಲ ಸಂಕ್ರಾಂತಿ ಅದೃಷ್ಟ ಸಂಖ್ಯೆ: 10, 11

ಮೇಷ: ನಿಮ್ಮ ದಾರಿಗೆದುರಾಗಿ ಉತ್ತಮ ಅವಕಾಶಗಳು ಹುಡುಕಿ ಬರಲಿವೆ. ಈಗ ಆರಿಸಿಕೊಂಡಿರುವ ಕಾರ್ಯಕ್ಷೇತ್ರದಲ್ಲಿ ನಿರಾಸೆಯಿಂದ ಹಿಂದಿರುಗುವ ಆಲೋಚನೆ ಸರಿಯಲ್ಲ. ಸ್ನೇಹಿತರ ಬಗ್ಗೆ ಎಚ್ಚರಿಕೆ ಇರಲಿ.

ವೃಷಭ: ರಾಜಕೀಯ ಪ್ರತಿಸ್ಪರ್ಧಿಗಳು ನಿಮ್ಮನ್ನು ಹಿಂದಿಕ್ಕುವ ಪ್ರಯತ್ನ ಮಾಡಲಿದ್ದಾರೆ. ಬಹಳ ಹುಡುಕಾಟದಿಂದ ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಗೋಚರವಾಗಿ ಅದರಂತೆಯೇ ನಡೆದುಕೊಂಡರೆ ಲಾಭ.

ಮಿಥುನ: ಕಾರ್ಯಕ್ಷೇತ್ರದಲ್ಲಿನ ನಷ್ಟ ಪ್ರಮಾಣ ಅಧಿಕವಾಗಿದ್ದರೂ, ಹೊಸ ಜವಾಬ್ದಾರಿಗಳು ಅರಸಿ ಬರಲಿವೆ. ಮಾನಸಿಕ ಪೀಡೆಗಳಿಗೆ ಒಳಗಾಗದಂತೆ ಕಾಳಜಿವಹಿಸಿ. ಅನನ್ಯ ಭಕ್ತಿಯಿಂದ ಮಹಾಗಣಪತಿಯನ್ನು ಆರಾಧಿಸಿ.

ಕರ್ಕಾಟಕ: ನಿಮ್ಮಲ್ಲಿರುವ ಮಾತಿನ ಚತುರತೆಯಿಂದ ಇಂದು ನಿಮ್ಮ ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರುವುದು. ಈ ದಿನ ಮಗಳ ಮದುವೆಯ ವಿಚಾರದಲ್ಲಿ ನೀವು ಇಡುವ ಹೆಜ್ಜೆ ಬಹಳ ಪ್ರಮುಖವಾದುದು ಆಗಿರುತ್ತದೆ.

ಸಿಂಹ: ನಿರಂತರ ಕೆಲಸ–ಕಾರ್ಯಗಳಿಂದ ಹೊರ ಬರಲು ಪ್ರಯತ್ನಿಸುವಿರಿ. ಷೇರು ವ್ಯವಹಾರಗಳಿಂದ ಹೆಚ್ಚಿನ ಲಾಭಾಂಶವನ್ನು ಪಡೆದುಕೊಳ್ಳುವಿರಿ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಧಿಕ ಮಟ್ಟದಲ್ಲಿ ಹಣ ವ್ಯಯವಾಗುವುದು.

ಕನ್ಯಾ: ಕುಟುಂಬದಲ್ಲಿ ಆಸ್ತಿ ಸಂಬಂಧಿತ ಎದುರಾದ ಸಮಸ್ಯೆಗಳು ನಿರಾತಂಕವಾಗಿ ಮುಗಿಯಲಿದೆ. ಸಹೋದರನ ಬಹಳ ದಿನದ ನಂತರದ ಆಗಮನ ಸಂತೋಷಕ್ಕೆ ಕಾರಣವಾಗುತ್ತದೆ.

ತುಲಾ: ವಿದ್ಯಾರ್ಥಿಗಳಿಗೆ ಶಿಸ್ತುಬದ್ಧ ಅಭ್ಯಾಸವು ಉತ್ತಮ ಫಲ ಕೊಡಲಿದೆ. ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇ ಬೇಕಾದ ಸಂದರ್ಭ ಬರಲಿದೆ. ರಸಗೊಬ್ಬರದ ವ್ಯಾಪಾರ ಮಾಡುವವರಿಗೆ ಹೆಚ್ಚಿನ ಲಾಭ.

ವೃಶ್ಚಿಕ: ಈ ದಿನ ನೀವು ಸೇವಿಸುವ ಆಹಾರದಿಂದ ಆರೋಗ್ಯ ಹದಗೆಡುವಂತಾಗಬಹುದು. ಆದ್ದರಿಂದ ಆಹಾರದಲ್ಲಿ ಗುಣಮಟ್ಟ ಮತ್ತು ಶುಚಿತ್ವವನ್ನು ಕಾಪಾಡಿ. ಸರ್ಕಾರ ಅಥವಾ ಸಂಸ್ಥೆಗಳ ನಿಯಮಗಳಿಗೆ ಬೆಲೆ ಕೊಡುವುದನ್ನು ಕಲಿಯಿರಿ.

ಧನು: ನಿಮ್ಮ ಕುಟುಂಬದ ಹಿರಿಯರು ಮಾಡಿದ ಪುಣ್ಯದ ಫಲಗಳು ನಿಮಗೆ ಸಿಗಲಿದೆ. ದೇಹದಲ್ಲಿ ವಾಯುಪೀಡೆಯು ಹೆಚ್ಚಾಗುವುದರಿಂದ ಕಿರಿಕಿರಿ ಎನಿಸಲಿದೆ. ದುರ್ಗಾಪರಮೇಶ್ವರಿಯ ಅನುಗ್ರಹಕ್ಕಾಗಿ ಪ್ರಾರ್ಥನೆ ಸಲ್ಲಿಸಿ.

ಮಕರ: ಬೇರೆಯವರ ಸಮಸ್ಯೆಗಳಿಗೆ ನೆರವಾಗುವ ಗುಣ ಹೊಂದಿರುವ ನಿಮಗೆ ದೇವರ ಆಶೀರ್ವಾದ ಸದಾ ಇರುವುದು. ಸಾಲಗಳಿಂದ ದೂರವಾಗುವ ವಿಚಾರದ ಬಗ್ಗೆ ಗಮನ ನೀಡಿ. ಪಿತ್ರಾರ್ಜಿತ ಆಸ್ತಿಗಳ ಬಗ್ಗೆ ಕಿರಿಕಿರಿ.

ಕುಂಭ: ವ್ಯಾಪಾರದಲ್ಲಿ ಅಭಿವೃದ್ಧಿ ಕಂಡು ಅದನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಹಣ ತೊಡಗಿಸುವಿರಿ. ಮಕ್ಕಳಿಗಾಗಿ ವಿಶೇಷ ವಿನ್ಯಾಸದ ಉಡುಪುಗಳನ್ನು ತರುವಿರಿ. ಮಗನ ವಿದ್ಯಾಭ್ಯಾಸದ ಬಗ್ಗೆ ತಾಯಿ ಶಾರದಾಂಬೆಯನ್ನು ಪ್ರಾರ್ಥಿಸಿ.


ಮೀನ: ನಿಮ್ಮ ನೆಚ್ಚಿನ ಕ್ಷೇತ್ರದಲ್ಲಿ ಅಭೂತಪೂರ್ವ ಸ್ಪರ್ಧೆಗಳನ್ನು ಎದುರಿಸುವ ಕಾ. ಉನ್ನತಿ ನಿಮ್ಮ ಪಾಲಿಗೆ ಒದಗಿಬರಲಿದೆ. ಅನಗತ್ಯ ವಿಷಯಗಳನ್ನು ಪ್ರಸ್ತಾಪಿಸದಂತೆ ಮಡದಿಗೆ ಸೂಚಿಸುವಿರಿ. ವಿಮಾ ಸಲಗೆಗಾರರಿಗೆ ಉತ್ತಮ ದಿನ.

ಪದಬಂಧ 4838

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹೊಸ ಬಗೆಯಲ್ಲಿ ವ್ಯಕ್ತವಾದ ಸಂತೋಷ! (3)
4.ಸತ್ತವರನ್ನು ಹೂಳುವ ಜಾಗ (3)
5.ಒಪ್ಪಂದ ಪತ್ರವಿಲ್ಲಿದೆ (4)
6.ಭ್ರಮೆಯು ಹೀಗೆ ಬಂದಿದೆಯಲ್ಲಾ? (4)
8.ತಿರುಗಿ ನಿಂತು ಹೇಳಿದ ಸುಳ್ಳು! (2)
10.ಹಿಸ್ಸೆಯಿಲ್ಲಿ ಉಲ್ಟಾ ಪಲ್ಟಾ ಅಗಿಬಿಟ್ಟಿದೆ! (2)
13.ರಸಭರಿತವಾದುದು ಇದು (4)
14.ಈ ಪರಿ ಮಾಡಿರುವ ಗೇಲಿ! (4)
15.ಹಳ್ಳಿಯವನ ಬಾಯಲ್ಲಿ ಗ್ರಹಚಾರ! (3)
16.ಮೂಗಿನ ಆಭರಣವಿದು (3)

ಮೇಲಿಂದ ಕೆಳಕ್ಕೆ
1.ಹಳ್ಳಿಗಳಲ್ಲಿ ಕೈಗೊಳ್ಳುವ ಉದ್ಯಮ (6)
2.ಕೆಲಸಕ್ಕೆ ಬಾರದ ಮಾತು (5)
3.ಇನಿಯ ನೀಡಿದ ಬಹುಮಾನ ! (3)
5.ಗುಡಿಸಲ ಹತ್ತಿರವಿರುವ ಜಲಪಾತ ಕಾಣುತ್ತಿದೆಯೇ? (4)
7.ಹೊಟ್ಟೆ ಹೊರೆಯುವಿಕೆ (6)
9.ಸರಸ ಮತ್ತು ವಿರಸ ಸಮನಾಗಿರುವಿಕೆ (4)
11.ಸಣ್ಣ ಪ್ರಾಂತ್ಯದ ಮುಖಂಡ (5)
12.ಹೊಲಗದ್ದೆಗಳಲ್ಲಿ ಬೀಜ ಬಿತ್ತುವ ಉಪಕರಣ (3)



4837ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿದ್ರೋಹ 4.ರಕ್ಷಾಪತ್ರ 6.ಮಿತವ್ಯಯ 8.ಚಪಾಕ 11.ವರಿಸು 13.ಪುರಸ್ಕಾರ 17.ಪುಡಿಗಾಸು 18.ರದನಿ

ಮೇಲಿಂದ ಕೆಳಕ್ಕೆ: 1.ವಿಧ್ಯುಕ್ತ 2.ಹರತಾಳ 3.ನಸವ್ಯ 5.ತ್ರಮಿ 7.ಯಥೃಚ್ಛೆ 9.ಕಕವ 10.ಕದಪು 12.ಸುರಾಸುರ 14.ರಶೀತ 15.ರಪು 16.ಅವನಿ

ಸುಡೊಕು 5224

				5		7		2
			6		7		8	1
		7		3		6		9
	6			1		8		7
7		9	5		3		1	
	8			9		3		5
	7		3		1			
5		6		2			7	
	3		9		5			8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5223 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ವಿಪ್ರೊ ಮಾರುಕಟ್ಟೆ ಮೌಲ್ಯ ಇಳಿಕೆ

ನವದೆಹಲಿ (ಪಿಟಿಐ): ವಿಪ್ರೊ ಕಂಪನಿಯ ಮೂರನೇ ತ್ರೈಮಾಸಿಕದ ಆರ್ಥಿಕ ಸಾಧನೆಯು ಹೂಡಿಕೆದಾರರಲ್ಲಿ ನಿರಾಸೆ ಮೂಡಿಸಿದ್ದು, ಅದರಿಂದಾಗಿ ಕಂಪನಿಯ ಷೇರು ಮೌಲ್ಯವು ಗುರುವಾರ ಶೇಕಡ 6ರಷ್ಟು ಇಳಿಕೆ ಕಂಡಿತು.

ಮುಂಬೈ ಷೇರುಪೇಟೆಯಲ್ಲಿ ಕಂಪನಿಯ ಪ್ರತಿ ಷೇರಿನ ಬೆಲೆಯು ₹ 649.85ಕ್ಕೆ ತಲುಪಿತು.ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 22,712 ಕೋಟಿಯಷ್ಟು ಕರಗಿ, ₹ 3.56 ಲಕ್ಷ ಕೋಟಿಗೆ ಇಳಿಯಿತು.

ಮುಂಬೈ ಧಾರಣೆ

ಶೇಂಗಾ

13-1-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	9000-9050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1330)
ಒಂದು ವಾರದ ಡೆಲಿವರಿ	1335 (1325)
ಸೋಯಾ ಕಚ್ಚಾ	1150 (1150)
ಪಾಮ್ ವಾರದ ಡೆಲಿವರಿ	1163 (1160)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,750 (47,800)
ಬೆಳ್ಳಿ ಕೆ.ಜಿ	61,700 (60,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ


ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	450-500
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	800-850
ಜರಡಿ	900-950
ಹೆರಕಿದ್ದು	1100-1200
ಹಸಿರು ಸಾಧಾರಣ	750-800
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1450
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	22572-38099
ಕೋಕ	17109-29289
ಹಳೆಚಾಲಿ	48201-49679
ಹೊಸಚಾಲಿ	34669-42899
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	23199-30999
ಚಾಲಿ	48299-48299
ಕೋಕ	23699-31622
ಹೊಸಚಾಲಿ	30699-44089
ಕೆಂಪುಗೋಟು	31289-31289
ರಾಶಿ	44899-48929
ತಟ್ಟಿಬೆಟ್ಟೆ	38699-45399
ಶಿರಸಿ	
ಬೆಟ್ಟೆ	24899-45709
ಬಿಳಿಗೋಟು	23000-43199
ಚಾಲಿ	31899-49552
ರಾಶಿ	39199-48699
ಯಲ್ಲಾಪುರ	
ಬಿಳಿಗೋಟು	26899-34469
ಚಾಲಿ	36899-48926
ಕೋಕ	22417-31899
ಕೆಂಪುಗೋಟು	28899-36210
ರಾಶಿ	45989-52890
ತಟ್ಟಿಬೆಟ್ಟೆ	38369-45000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15650	15700	240.85 ಸೆಂಟ್ಸ್
ಎಸಿ	---	7000	6900	
ಆರ್‌ಪಿ	---	6900	7000	ಲಂಡನ್
ಆರ್‌ಸಿ	---	4000	3900	2282 ಡಾಲರ್ಸ್

ಷೇರುಪೇಟೆ ವಹಿವಾಟು

85



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,212
ಇಂದಿನ ಅಂತ್ಯ	18,257
▲	45
ದಿನದ ಗರಿಷ್ಠ	18,272

ವಿನಿಮಯ ದರ

$ ಡಾಲರ್	73.90
£ ಪೌಂಡ್	101.63
€ ಯುರೊ	84.82
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹470
12 ಮೊಟ್ಟೆಗೆ	₹63

ಮೈಸೂರು

100 ಮೊಟ್ಟೆಗೆ	₹465

‘ಯೆಜ್ಡಿ’ಯ ಮೂರು ಹೊಸ ಬೈಕ್ ಬಿಡುಗಡೆ

ಮುಂಬೈ (ಪಿಟಿಐ): ಕ್ಲಾಸಿಕ್ ಲೆಜೆಂಡ್ಸ್ ಕಂಪನಿಯು, ಭಾರತದ ಐಕಾನಿಕ್ ದ್ವಿಚಕ್ರ ವಾಹನಗಳ ಪೈಕಿ ಒಂದಾಗಿರುವ ‘ಯೆಜ್ಡಿ’ಯನ್ನು ಮಾರುಕಟ್ಟೆಗೆ ಮತ್ತೆ ಬಿಡುಗಡೆ ಮಾಡಿದೆ. ಕಂಪನಿಯು ಮೂರು ಹೊಸ ಮಾದರಿಗಳನ್ನು ಗುರುವಾರ ಬಿಡುಗಡೆ ಮಾಡಿದೆ.

ದೆಹಲಿಯಲ್ಲಿ ಎಕ್ಸ್ ಷೋರೂಂ ಬೆಲೆಯು ₹ 1.98 ಲಕ್ಷದಿಂದ ₹ 2.09 ಲಕ್ಷದವರೆಗೆ ಇದೆ.

ಯೆಜ್ಡಿ ರೋಡ್‌ಸ್ಟರ್ ಬೆಲೆ ₹ 1.98 ಲಕ್ಷದಿಂದ, ಸ್ಕ್ರ್ಯಾಂಬ್ಲರ್ ಬೆಲೆ ₹ 2.04 ಲಕ್ಷದಿಂದ ಹಾಗೂ ಅಡ್ವೆಂಚರ್ ಬೆಲೆ ₹ 2.09 ಲಕ್ಷದಿಂದ ಆರಂಭ ಆಗುತ್ತದೆ. ಈ ಬೈಕ್‌ಗಳಿಗೆ ₹ 5 ಸಾವಿರ ಕೊಟ್ಟು ಬುಕಿಂಗ್ ಮಾಡಬಹುದು ಎಂದು ಕಂಪನಿಯು ತಿಳಿಸಿದೆ.

ಈ ಮೂರು ಬೈಕ್‌ಗಳು ಲಿಕ್ವಿಡ್ ಕೂಲ್ಡ್, ಫ್ಯೂಯೆಲ್ ಇಂಜೆಕ್ಟೆಡ್ 334 ಸಿಸಿ ಎಂಜಿನ್ ಹೊಂದಿವೆ. ಕ್ಲಾಸಿಕ್ ಲೆಜೆಂಡ್ಸ್‌ನ ಎಲ್ಲಾ ವಿತರಣಾ ಜಾಲಗಳಲ್ಲಿ ಹೊಸ ಮಾದರಿಗಳು ಖರೀದಿಗೆ ಲಭ್ಯ ಇರಲಿವೆ ಎಂದು ಕಂಪನಿ ಹೇಳಿದೆ.

ತಿಂಗಳ ಅಂತ್ಯದೊಳಗೆ ‘ಸೆಬಿ’ಗೆ ದಾಖಲೆ ಪತ್ರ ಸಲ್ಲಿಕೆ

ಮಾರ್ಚ್ ಮಧ್ಯಭಾಗದಲ್ಲಿ ಎಲ್‌ಐಸಿ ಐಪಿಒ ಸಾಧ್ಯತೆ

ಮುಂಬೈ (ರಾಯಿಟರ್ಸ್): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ತನ್ನ ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಭಾಗವಾಗಿ ಈ ತಿಂಗಳ ಅಂತ್ಯದೊಳಗೆ ‘ಸೆಬಿ’ಗೆ (ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ) ದಾಖಲೆಪತ್ರಗಳನ್ನು ಸಲ್ಲಿಸಲಿದ್ದು ಮಾರ್ಚ್ ತಿಂಗಳ ಮಧ್ಯಭಾಗದಲ್ಲಿ ಷೇರು ಹಂಚಿಕೆ ನಡೆಯುವ ನಿರೀಕ್ಷೆ ಇದೆ ಎಂದು ಸರ್ಕಾರಿ ಮತ್ತು ಬ್ಯಾಂಕಿಂಗ್ ಅಧಿಕಾರಿಗಳು ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಈ ಕಂಪನಿಯ ಮೌಲ್ಯಮಾಪನ ಮಾಡುವ ಕೆಲಸದಲ್ಲಿ ಅಧಿಕಾರಿಗಳು ತೊಡಗಿದ್ದಾರೆ. ಒಮ್ಮೆ ಅದು ಪೂರ್ಣಗೊಂಡ ನಂತರ ಎಲ್‌ಐಸಿಯು ಐಪಿಒಗೆ ಕರಡು ದಾಖಲೆ ಪತ್ರಗಳನ್ನು ಸಲ್ಲಿಸಲಿದೆ ಎಂದು ತಿಳಿಸಿದ್ದಾರೆ.

ಕಂಪನಿಯ ಮೌಲ್ಯಮಾಪನ ನಿರ್ಧಾರ ಆದ ತಕ್ಷಣವೇ ಕರಡು ದಾಖಲೆ ಪತ್ರಗಳನ್ನು ಸಲ್ಲಿಸಲಾಗುವುದು. ಈ ತಿಂಗಳ ಅಂತ್ಯದ ಒಳಗಾಗಿ ಕರಡು ದಾಖಲೆ ಪತ್ರ ಸಲ್ಲಿಸುವ ಉದ್ದೇಶದಿಂದ ಕೆಲಸ ಮಾಡಲಾಗುತ್ತಿದೆ ಎಂದು ಬ್ಯಾಂಕಿಂಗ್ ಮೂಲವೊಂದು ತಿಳಿಸಿದೆ. ಯಾವ ಕಾಲಮಿತಿಯ ಒಳಗೆ ‘ಐಪಿಒ’ ನಡೆಯಲಿದೆ ಎನ್ನುವ ಪ್ರಶ್ನೆಗೆ ಹಣಕಾಸು ಸಚಿವಾಲಯ ಮತ್ತು ಎಲ್‌ಐಸಿಯಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ದೇಶದ ಜೀವ ವಿಮಾ ಮಾರುಕಟ್ಟೆಯಲ್ಲಿ ಎಲ್‌ಐಸಿಯು ಅತಿ ಹೆಚ್ಚಿನ ಪಾಲು ಹೊಂದಿದೆ. ಇದರ ಐಪಿಒದಿಂದ ಸಿಗುವ ಬಂಡವಾಳವು ಪ್ರಸಕ್ತ ಹಣಕಾಸು ವರ್ಷದಲ್ಲಿ ವಿತ್ತೀಯ ಕೊರತೆಯ ಅಂತರವನ್ನು ಸರಿದೂಗಿಸಲು ನೆರವಾಗಲಿದೆ ಎನ್ನುವುದು ಸರ್ಕಾರದ ಭರವಸೆ ಆಗಿದೆ. ಷೇರುಪೇಟೆಗೆ ಬರುವುದರಿಂದ ಎಲ್‌ಐಸಿಯ ಕಾರ್ಯನಿರ್ವಹಣೆಯಲ್ಲಿ ಇನ್ನೂ ಹೆಚ್ಚಿನ ಪಾರದರ್ಶಕತೆ ಬರುವ ನಿರೀಕ್ಷೆ ಮಾಡಲಾಗಿದೆ.

ಐಪಿಒ ನಿರ್ವಹಣೆಗಾಗಿ ಗೋಲ್ಡ್‌ಮನ್ ಸ್ಯಾಚ್ಸ್, ಸಿಟಿಗ್ರೂಪ್ ಮತ್ತು ಎಸ್‌ಬಿಐ ಕ್ಯಾಪಿಟಲ್ ಮಾರ್ಕೆಟ್ ಸೇರಿದಂತೆ ಒಟ್ಟು 10 ಮರ್ಚೆಂಟ್ ಬ್ಯಾಂಕರ್‌ಗಳನ್ನು ಕೇಂದ್ರ ಸರ್ಕಾರವು ಕಳೆದ ವರ್ಷ ನೇಮಕ ಮಾಡಿದೆ.

ಸವಾಲುಗಳೊಂದಿಗೆ ಸರ್ಕಾರದ ಜೊತೆ ಕೆಲಸ: ಟೆಸ್ಲಾ

ನವದೆಹಲಿ (ಪಿಟಿಐ): ತಮ್ಮ ಉತ್ಪನ್ನಗಳನ್ನು ಭಾರತದ ಮಾರುಕಟ್ಟೆಗೆ ಬಿಡುಗಡೆ ಮಾಡಲು ಹಲವು ಸವಾಲುಗಳೊಂದಿಗೆ ಕೇಂದ್ರ ಸರ್ಕಾರದ ಜೊತೆ ಕೆಲಸ ಮಾಡಲಾಗುತ್ತಿದೆ ಎಂದು ಟೆಸ್ಲಾ ಕಂಪನಿಯ ಸಿಇಒ ಎಲಾನ್ ಮಸ್ಕ್ ಹೇಳಿದ್ದಾರೆ.

ಟೆಸ್ಲಾ ಕಾರುಗಳನ್ನು ಭಾರತದಲ್ಲಿ ಆರಂಭಿಸುವುದಕ್ಕೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಅವರು ಟ್ವೀಟ್ ಮೂಲಕ ಈ ಉತ್ತರ ನೀಡಿದ್ದಾರೆ. ವಿದ್ಯುತ್ ಚಾಲಿತ ಕಾರುಗಳ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡಬೇಕು ಎಂದು ಮಸ್ಕ್ ಅವರು ಹಿಂದಿನ ವರ್ಷ ಆಗ್ರಹಿಸಿದ್ದರು.

‘ಮೊದಲು ಭಾರತದಲ್ಲಿ ತಯಾರಿಕೆ ಶುರು ಮಾಡಿ. ನಂತರದಲ್ಲಿ ಸುಂಕ ವಿನಾಯಿತಿ ಬಗ್ಗೆ ಪರಿಶೀಲಿಸಬಹುದು’ ಎಂದು ಕೇಂದ್ರ ಸರ್ಕಾರವು ಆಗ ಪ್ರತಿಕ್ರಿಯಿಸಿತ್ತು.

ಸ್ಥಾನ ದುರ್ಬಳಕೆ: ಡಿಜಿಟಲ್ ಸುದ್ದಿ ಪ್ರಕಾಶಕರ ಸಂಘದ ದೂರು

ಗೂಗಲ್ ವಿರುದ್ಧ ತನಿಖೆಗೆ ಸಿಸಿಐ ಆದೇಶ

ನವದೆಹಲಿ (ಪಿಟಿಐ): ಗೂಗಲ್ ಕಂಪನಿಯು ತನ್ನ ಸ್ಥಾನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬ ದೂರಿನ ಕುರಿತು ತನಿಖೆ ನಡೆಸುವಂತೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಆದೇಶಿಸಿದೆ.

‘ಒಳ್ಳೆಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸುದ್ದಿ ಮಾಧ್ಯಮಗಳ ಪಾತ್ರವನ್ನು ಕಡೆಗಣಿಸಲು ಆಗದು. ಜನರಿಗೆ ಯಾವ ಮಾಹಿತಿ ತಲುಪಬೇಕು ಎಂಬುದನ್ನು ತೀರ್ಮಾನಿಸುವ ಡಿಜಿಟಲ್ ಕಂಪನಿಗಳು ತಮ್ಮ ಪ್ರಬಲ ಸ್ಥಾನವನ್ನು ಆದಾಯದ ನ್ಯಾಯಬದ್ಧ ಹಂಚಿಕೆಯ ಪ್ರಕ್ರಿಯೆಯನ್ನು ಹಾಳುಗೆಡವದಂತೆ ನೋಡಿಕೊಳ್ಳಬೇಕು’ ಎಂದು ಸಿಸಿಐ ಹೇಳಿದೆ. ಗೂಗಲ್ ಕಂಪನಿಯು ಸ್ಪರ್ಧಾ ಕಾಯ್ದೆಯ ಸೆಕ್ಷನ್ 4ನ್ನು ಉಲ್ಲಂಘಿಸಿದೆ ಎಂದು ಮೇಲ್ನೋಟಕ್ಕೆ ಅನ್ನಿಸುತ್ತಿದೆ ಎಂದು ಅದು ಈಚೆಗೆ ನೀಡಿರುವ ಆದೇಶದಲ್ಲಿ ಹೇಳಿದೆ.

ಡಿಜಿಟಲ್ ಸುದ್ದಿ ಪ್ರಕಾಶಕರ ಸಂಘ (ಡಿಎನ್‌ಪಿಎ) ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಸಿಸಿಐ ನೀಡಿರುವ ತನಿಖೆ ಆದೇಶದಲ್ಲಿ ಈ ಮಾತು ಹೇಳಲಾಗಿದೆ. ಡಿಎನ್‌ಪಿಎ ಒಂದು ಖಾಸಗಿ ಕಂಪನಿ. ಸುದ್ದಿ ವೆಬ್‌ಸೈಟ್‌ಗಳಿಗೆ ಬಹುಪಾಲು ಓದುಗರು ಬರುವುದು ಸರ್ಚ್ ಎಂಜಿನ್‌ಗಳ ಮೂಲಕ. ಗೂಗಲ್ ತನ್ನನ್ನು ತಾನು ಅತ್ಯಂತ ಪ್ರಬಲ ಸರ್ಚ್ ಎಂಜಿನ್ ಎಂದು ಹೇಳಿಕೊಳ್ಳುತ್ತದೆ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಸುದ್ದಿ ವೆಬ್‌ಸೈಟ್‌ಗಳಿಗೆ ಭೇಟಿ ನೀಡುವವರ ಪೈಕಿ ಶೇಕಡ 50ಕ್ಕಿಂತ ಹೆಚ್ಚಿನವರು ಗೂಗಲ್ ಮೂಲಕ ಬರುತ್ತಾರೆ. ಆದರೆ, ಸರ್ಚ್ ವೇಳೆ ಯಾವ ಸುದ್ದಿ ವೆಬ್‌ಸೈಟ್ ಕಾಣಿಸಿಕೊಳ್ಳಬೇಕು ಎಂಬುದನ್ನು ಪ್ರಬಲ ಕಂಪನಿಯಾಗಿರುವ ಗೂಗಲ್ ತೀರ್ಮಾನಿಸುತ್ತಿದೆ. ಡಿಜಿಟಲ್ ಜಾಹೀರಾತು ಪ್ರಪಂಚದಲ್ಲಿ ಗೂಗಲ್‌ಗೆ ದೊಡ್ಡ ಪಾಲು ಇದೆ. ಪ್ರಕಾಶಕರಿಗೆ ಅವರು ಸೃಷ್ಟಿಸುವ ವಸ್ತು–ವಿಷಯಗಳಿಗೆ ಎಷ್ಟು ಸಂಭಾವನೆ ಪಾವತಿಸಬೇಕು ಎಂಬುದನ್ನು, ಯಾವ ನಿಯಮಗಳಿಗೆ ಅನುಗುಣವಾಗಿ ಸಂಭಾವನೆ ಪಾವತಿಯಾಗಬೇಕು ಎಂಬುದನ್ನು ಗೂಗಲ್ ಕಂಪನಿಯೇ ಏಕಪಕ್ಷೀಯವಾಗಿ ತೀರ್ಮಾನಿಸುತ್ತಿದೆ ಎಂದು ದೂರಿನಲ್ಲಿ ಹೇಳಲಾಗಿದೆ.

‘ಸುದ್ದಿ ಪ್ರಕಟಿಸುವವರ ವೆಬ್‌ಸೈಟ್‌ಗಳಿಗೆ ಓದುಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವಂತೆ ಆಗುವಲ್ಲಿ ಗೂಗಲ್ ಪಾತ್ರವೂ ಇದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಜಾಹೀರಾತು ಆದಾಯದಲ್ಲಿ ನ್ಯಾಯಬದ್ಧ ಹಂಚಿಕೆಯನ್ನು ನಿರಾಕರಿಸಲಾಗುತ್ತಿದೆ ಎಂದು ದೂರುದಾರರು ಹೇಳಿರುವುದರ ಬಗ್ಗೆ ವಿಸ್ತೃತ ತನಿಖೆಗೆ ಅಗತ್ಯವಿದೆ’ ಎಂದು ಸಿಸಿಐ ಆದೇಶದಲ್ಲಿ ಹೇಳಲಾಗಿದೆ.

50 ಮಂದಿ ಎಎಪಿ ಮುಖಂಡರ ವಿರುದ್ಧ ಪ್ರಕರಣ

ಹೊಸಪೇಟೆ (ವಿಜಯನಗರ): ಕೋವಿಡ್ ನಿಯಮ ಉಲ್ಲಂಘನೆಯ ಆರೋಪದ ಮೇರೆಗೆ ಆಮ್ ಆದ್ಮಿ ಪಕ್ಷದ 50 ಜನ ಮುಖಂಡರು, ಕಾರ್ಯಕರ್ತರ ವಿರುದ್ಧ ಪೊಲೀಸರು ಬುಧವಾರ ತಡರಾತ್ರಿ ಪ್ರಕರಣ ದಾಖಲಿಸಿದ್ದಾರೆ.

‘ಎಎಪಿಯಿಂದ ಗೆದ್ದು ಬಿಜೆಪಿ ಸೇರಿದ ನಗರಸಭೆ ಸದಸ್ಯ ಶೇಕ್ ಷಾ ವಲಿ ವಿರುದ್ಧ ನಗರದ ಜಂಬುನಾಥಹಳ್ಳಿ ರಸ್ತೆ ಹಾಗೂ ಅವರ ಮನೆ ಬಳಿ ಎಎಪಿ ಮುಖಂಡರು, ಕಾರ್ಯಕರ್ತರು ಕೋವಿಡ್ ನಿಯಮ ಉಲ್ಲಂಘಿಸಿ ಗುಂಪುಗೂಡಿ ಪ್ರತಿಭಟನೆ ನಡೆಸಿದ್ದಾರೆ. ಎಎಪಿ ಮುಖಂಡ ಜಗದೀಶ ಸೇರಿದಂತೆ ಎಲ್ಲರ ವಿರುದ್ಧ ಪ್ರಕರಣ ದಾಖಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ತಿಳಿಸಿದ್ದಾರೆ.

15–18 ವರ್ಷದೊಳಗಿನವರಿಗೆ 3 ಕೋಟಿ ಡೋಸ್ ಲಸಿಕೆ

‘ಅರ್ಹ ಯುವ ಸ್ನೇಹಿತರು ಬೇಗನೆ ಲಸಿಕೆ ಪಡೆಯಿರಿ’

ನವದೆಹಲಿ (ಪಿಟಿಐ): ‘ದೇಶದಲ್ಲಿ 15-18 ವಯೋಮಾನದ ಮೂರು ಕೋಟಿ ಯುವ ಸಮುದಾಯ ಕೋವಿಡ್–19ರ ಲಸಿಕೆಯ ಮೊದಲ ಡೋಸ್ ಪಡೆದಿದ್ದಾರೆ’ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಗುರುವಾರ ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮೂಲಕ ಮಾಹಿತಿ ನೀಡಿರುವ ಅವರು, ‘ಯುವ ಭಾರತದಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಉತ್ಸಾಹ ಕಾಣುತ್ತಿದೆ’ ಎಂದಿದ್ದಾರೆ. ‘ದೇಶದ ಎಲ್ಲ ಯುವ ಅರ್ಹ ಸ್ನೇಹಿತರು ಆದಷ್ಟು ಬೇಗ ಲಸಿಕೆ ಹಾಕಿ ಹಾಕಿಸಿಕೊಳ್ಳಿ’ ಎಂದು ಅವರು ಮನವಿ ಮಾಡಿದ್ದಾರೆ.

ದೆಹಲಿ ಪಾಸಿಟಿವಿಟಿ ದರ ಶೇ 26.66ಕ್ಕೆ ಏರಿಕೆ: ರಾಷ್ಟ್ರ ರಾಜಧಾನಿ ದಹಲಿಯಲ್ಲಿ ಒಂದೇ ದಿನದಲ್ಲಿ 27,561 ಪ್ರಕರಣಗಳು ದಾಖಲಾಗಿದ್ದು, ಇಲ್ಲಿ ಪಾಸಿಟಿವಿಟಿ ದರ ಶೇ 26.22ಕ್ಕೆ ಏರಿದೆ. ಕೋವಿಡ್‌ನಿಂದಾಗಿ ಬುಧವಾರ ಒಂದೇ ದಿನ ಇಲ್ಲಿ 40 ಜನರು ಮೃತಪಟ್ಟಿದ್ದಾರೆ. ಆದರೆ ಕೋವಿಡ್ ಕಾರಣದಿಂದ ಆಸ್ಪತ್ರೆಗೆ ಸೇರುವವರ ಸಂಖ್ಯೆಯಲ್ಲಿ ಏರಿಕೆ ದಾಖಲಾಗಿಲ್ಲ ಎಂದು ದೆಹಲಿ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಗುರುವಾರ ಹೇಳಿದ್ದಾರೆ.

ಸಂಸತ್ ಭವನ; 700 ಗಡಿ ದಾಟಿದ ಸೋಂಕಿತರ ಸಂಖ್ಯೆ: ಜನವರಿ 9 ಮತ್ತು 12ರ ನಡುವೆ ಸಂಸತ್‌ನ 300ಕ್ಕೂ ಹೆಚ್ಚು ಸಿಬ್ಬಂದಿಗೆ ಕೋವಿಡ್ ದೃಢಪಟ್ಟಿದೆ ಎಂದು ಮೂಲಗಳು ತಿಳಿಸಿವೆ. ಇದಕ್ಕೂ ಹಿಂದೆ, 400ಕ್ಕೂ ಹೆಚ್ಚು ಸಿಬ್ಬಂದಿ ಸೋಂಕಿತರಾಗಿದ್ದ ವಿಚಾರ ಜನವರಿ 9ರಂದು ಬಹಿರಂಗವಾಗಿತ್ತು.

ಎಫ್‌ಐಆರ್; ಸಚಿವರು, ಮಾಜಿ ಸಚಿವರ ಹೆಸರಿಲ್ಲ!

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕೋವಿಡ್ ಮೂರನೇ ಅಲೆ ಸಮುದಾಯಕ್ಕೆ ಹರಡದಂತೆ ತಡೆಯಲು ರಾಜ್ಯ ಸರ್ಕಾರ ಮತ್ತು ಬಳ್ಳಾರಿ ಜಿಲ್ಲಾಧಿಕಾರಿಗಳು ಹೊರಡಿಸಿರುವ ಆದೇಶ ಉಲ್ಲಂಘಿಸಿ ಮಂಗಳವಾರ ಏರ್ಪಡಿಸಿದ್ದ ಮಾಜಿ ಸಚಿವ ಜನಾರ್ದನರೆಡ್ಡಿ ಹುಟ್ಟುಹಬ್ಬದ ಸಂಬಂಧ ಇಲ್ಲಿನ ಗಾಂಧಿನಗರ ಮತ್ತು ಎಪಿಎಂಸಿ ಮಾರುಕಟ್ಟೆ ಪೊಲೀಸ್ ಠಾಣೆಗಳಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ.

ಎಪಿಎಂಸಿ ಠಾಣೆಯಲ್ಲಿ (0003/2022) ದಾಖಲಾಗಿರುವ ಎಫ್‌ಐಆರ್‌ನಲ್ಲಿ ಮಲ್ಲಿಕಾರ್ಜುನ, ನಾಗೇಂದ್ರ ಬಿ ಹಾಗೂ ಪ್ರಭಾಕರ್ ಮತ್ತು ಗಾಂಧಿನಗರದಲ್ಲಿ ಗಾದೆಪ್ಪ, ಮಾರುತಿ ಪ್ರಸಾದ್ ಹಾಗೂ ಅಶೋಕ್ ಎಂಬುವರ ವಿರುದ್ಧ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ, ಸಾಂಕ್ರಾಮಿಕ ರೋಗ ನಿಯಂತ್ರಣ ಕಾಯ್ದೆ ಹಾಗೂ ಭಾರತ ದಂಡ ಸಂಹಿತೆ ಅಡಿ ಪ್ರಕರಣ ದಾಖಲಿಸಲಾಗಿದೆ. ಆದರೆ, ಹುಟ್ಟುಹಬ್ಬದ ಪ್ರಮುಖ ಆಕರ್ಷಣೆ ಆಗಿದ್ದ ಜನಾರ್ದನರೆಡ್ಡಿ, ಸಾರಿಗೆ ಸಚಿವ ಶ್ರೀರಾಮುಲು ಸೇರಿದಂತೆ ಅನೇಕ ಗಣ್ಯರ ಹೆಸರನ್ನು ಎಫ್‌ಐಆರ್‌ಗಳಲ್ಲಿ ಸೇರ್ಪಡೆ ಮಾಡದಿರುವ ಬಗ್ಗೆ ಪೊಲೀಸ್ ಇಲಾಖೆ ವಿರುದ್ಧ ಟೀಕೆಗಳು ವ್ಯಕ್ತವಾಗುತ್ತಿವೆ.

ಗುಂಪಿನಲ್ಲಿದ್ದರೆ ಕ್ರಮ: ‘ಮಾಜಿ ಸಚಿವ ಜನಾರ್ದನರೆಡ್ಡಿ, ಸಾರಿಗೆ ಸಚಿವ ಬಿ. ಶ್ರೀರಾಮುಲು ಮತ್ತಿತರರು ಗುಂಪಿನ ಭಾಗವಾಗಿದ್ದರೆ ಕ್ರಮ ಕೈಗೊಳ್ಳಲಾಗುವುದು, ಅನಂತರ ಹೆಸರು ಸೇರ್ಪಡೆ ಮಾಡಲಾಗುವುದು’ ಎಂದು ಎಸ್‌ಪಿ ಸೈದುಲು ಅಡಾವತ್ ತಿಳಿಸಿದ್ದಾರೆ.

ಬೆಳಕವಾಡಿಯಲ್ಲಿ 20 ವಿದ್ಯಾರ್ಥಿಗಳಿಗೆ ಸೋಂಕು (ಮಂಡ್ಯ ವರದಿ): ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ 18 ವಿದ್ಯಾರ್ಥಿಗಳು, ಒಬ್ಬರು ಅಡುಗೆ ಸಿಬ್ಬಂದಿಗೆ ಕೋವಿಡ್ ದೃಢಪಟ್ಟಿದೆ. ಕೆಐಬಿ ಶಾಲೆಯ ಇಬ್ಬರು ವಿದ್ಯಾರ್ಥಿಗಳಲ್ಲೂ ಸೋಂಕು ಕಾಣಿಸಿಕೊಂಡಿದೆ.

ಒತ್ತಡಕ್ಕೆ ಮಣಿದರೆ?


‘ಜನಾರ್ದನರೆಡ್ಡಿ ಹುಟ್ಟುಹಬ್ಬದ ವೇಳೆ ಮಾಡಿದ ಭಾಷಣವನ್ನು ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಅವರಿಗೆ ಬಳ್ಳಾರಿಗೆ ಬರಲು ಅನುಮತಿ ನೀಡುವಾಗ, ಕೋರ್ಟ್ ಕೆಲವು ಕಟ್ಟುಪಾಡುಗಳನ್ನು ವಿಧಿಸಿದೆ. ಅವರ ವಿರುದ್ಧ ಪ್ರಕರಣ ದಾಖಲಾದರೆ ಅನುಮತಿ ರದ್ದಾಗಬಹುದೆಂಬ ಕಾರಣಕ್ಕೆ ಎಫ್‌ಐಆರ್ ಹಾಕಿಲ್ಲ. ಪೊಲೀಸರು ಒತ್ತಡಕ್ಕೆ ಮಣಿದಂತಿದೆ’ ಎಂದು ಅಕ್ರಮ ಗಣಿಗಾರಿಕೆ ವಿರುದ್ಧ ಹೋರಾಡುತ್ತಿರುವ ಉದ್ಯಮಿ ಟಪಾಲ್ ಗಣೇಶ್ ಆರೋಪಿಸಿದ್ದಾರೆ.

ಕಡಾಡಿಗೆ ಕೋವಿಡ್

ಬೆಳಗಾವಿ: ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಅವರಿಗೆ ಗುರುವಾರ ಕೋವಿಡ್–19 ದೃಢಪಟ್ಟಿದೆ. ಈ ಬಗ್ಗೆ ಅವರು ಟ್ವೀಟ್ ಮಾಡಿದ್ದಾರೆ.

ಕಾಗ ವಾಡ ಬಿಜೆಪಿ ಶಾಸಕ ಶ್ರೀಮಂತ ಪಾಟೀಲ ಅವರಿಗೂ ಕೋವಿಡ್ ದೃಢಪಟ್ಟಿದೆ.

ಖರ್ಗೆಗೆ ಕೋವಿಡ್



ಖರ್ಗೆ

ಕಲಬುರಗಿ: ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕೋವಿಡ್ ದೃಢಪಟ್ಟಿದೆ. ಹೆಚ್ಚಿನ ಲಕ್ಷಣಗಳಿಲ್ಲದೇ ಇರುವುದರಿಂದ ಸದ್ಯ ಬೆಂಗಳೂರಿನ ಮನೆಯಲ್ಲಿ ಇದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಎರಡು ದಿನಕ್ಕೊಮ್ಮೆ ದುಪ್ಪಟ್ಟು

ಒಂದನೇ ಪುಟದಿಂದ

ಕೋವಿಡ್ ಎದುರಿಸಲು ಸಿದ್ಧತೆ: ಪ್ರತಿ ದಿನ 2 ಲಕ್ಷ ಕೋವಿಡ್ ಪರೀಕ್ಷೆಯ ಗುರಿಯನ್ನು ನೀಡಲಾಗಿದ್ದು, ಆ ಸಂಖ್ಯೆಯನ್ನು ಇನ್ನು ಹೆಚ್ಚಿಸಲು ಕ್ರಮವಹಿಸಲಾಗಿದೆ. ಬೆಂಗಳೂರಿನಲ್ಲಿ ಈಗ 1 ಲಕ್ಷ ಪರೀಕ್ಷೆ ಮಾಡಲಾಗುತ್ತಿದೆ. ರಾಜ್ಯದಲ್ಲಿ 265 ಪರೀಕ್ಷೆ ಪ್ರಯೋಗಾಲಯ ಸ್ಥಾಪಿಸಿದ್ದು, ಮೊದಲ ಬಾರಿಗೆ 5 ವಂಶವಾಹಿ ಅನುಕ್ರಮಣಿಕೆ ಪರೀಕ್ಷೆಯ ಪ್ರಯೋಗಾಲಯ ಆರಂಭಿಸಲಾಗಿದ್ದು, ಕೇಂದ್ರ ಸರ್ಕಾರ ಈ ರೀತಿಯ 4 ಪ್ರಯೋಗಾಲಯ ಸ್ಥಾಪಿಸಿದೆ. ಒಂದು ಬ್ಯಾಚ್‌ನಲ್ಲಿ 1,875 ಮಾದರಿಗಳನ್ನು ಅನುಕ್ರಮಣಿಕೆ ಮಾಡುವ ಸೌಲಭ್ಯವಿದೆ ಎಂದರು.

ಮೂರನೇ ಅಲೆಯನ್ನು ನಿಭಾಯಿಸಲು ₹243 ಕೋಟಿ ವೆಚ್ಚದಲ್ಲಿ 147 ತಾಲ್ಲೂಕು ಆಸ್ಪತ್ರೆಗಳಲ್ಲಿ 6,386 ಆಮ್ಲಜನಕಯುಕ್ತ ಹಾಸಿಗೆಗಳು, 2,928 ಐಸಿಯು ಹಾಸಿಗೆಗಳನ್ನು ಹೆಚ್ಚುವರಿಯಾಗಿ ಅಳವಡಿಸಲಾಗಿದೆ. 19 ಜಿಲ್ಲಾ ಆಸ್ಪತ್ರೆಗಳಲ್ಲಿ 665 ಆಮ್ಲಜನಕಯುಕ್ತ ಹಾಸಿಗೆಗಳು, 263 ಐಸಿಯು ಹಾಸಿಗೆಗಳನ್ನು ₹25 ಕೋಟಿ ವೆಚ್ಚದಲ್ಲಿ ಅಳವಡಿಸಲಾಗಿದೆ. ಆಮ್ಲಜನಕ ಉತ್ಪಾದನಾ ಘಟಕ ರಾಜ್ಯಕ್ಕೆ ದೊರೆತಿದ್ದು, 217 ಕಾರ್ಯಾರಂಭ ಮಾಡಿವೆ. 3,460 ವೆಂಟಿಲೇಟರ್‌ಗಳು ಮತ್ತು 8,100 ಆಮ್ಲಜನಕ ಸಾಂದ್ರಕ ಲಭ್ಯವಿದೆ ಎಂದು ಸುಧಾಕರ್ ಹೇಳಿದರು.

ಕೇಂದ್ರದ ನೆರವು ಕೋರಿದ ಬೊಮ್ಮಾಯಿ: ‘ಕೋವಿಡ್ ಮೂರನೇ ಅಲೆಯನ್ನು ಸಮರ್ಥವಾಗಿ ಎದುರಿಸಲು ರಾಜ್ಯದಲ್ಲಿ ಆಮ್ಲಜನಕ ವ್ಯವಸ್ಥೆ ಇರುವ ಹಾಸಿಗೆಗಳು ಮತ್ತು ಆಮ್ಲಜನಕ ಉತ್ಪಾದನಾ ಘಟಕಗಳ ಸಂಖ್ಯೆ ಇನ್ನಷ್ಟು ಹೆಚ್ಚಿಸಲು ಕೇಂದ್ರದ ಸರ್ಕಾರದ ನೆರವು ಕೋರಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ನಡೆಸಿದ ವರ್ಚುವಲ್ ಸಭೆಯಲ್ಲಿ ಬೊಮ್ಮಾಯಿ ಈ ಕುರಿತು ಪ್ರಸ್ತಾವ ಮಂಡಿಸಿದರು.

ರಾಜ್ಯ ಕೋವಿಡ್ ಅಂಕಿ-ಅಂಶ

31,24,524 ▲	ಒಟ್ಟು ಸೋಂಕಿತರು (30,99,519 ನಿನ್ನೆಯ ವಿವರ)
1,15,733 ▲	ಸಕ್ರಿಯ ಪ್ರಕರಣಗಳು
29,70,365 ▲	ಗುಣಮುಖರಾದವರು
38,397 ▲	ಒಟ್ಟು ಸಾವು

ದಿನದ ವರದಿ

ಹೊಸ ಪ್ರಕರಣ	25,005
ಗುಣಮುಖ	2,363
ಸಾವು	08

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಕುತೂಹಲ ಘಟ್ಟದಲ್ಲಿ ನ್ಯೂಲ್ಯಾಂಡ್ಸ್ ಟೆಸ್ಟ್: ಭಾರತಕ್ಕೆ ಕೀಗನ್ ಪೀಟರ್ಸನ್ ತಡೆಗೋಡೆ

ಪಂತ್ ಶತಕಕ್ಕೆ ಒಲಿಯುವುದೇ ಜಯ?

ಕೇಪ್‌ಟೌನ್ (ಪಿಟಿಐ/ರಾಯಿಟರ್ಸ್): ದೆಹಲಿ ಹುಡುಗ ರಿಷಭ್ ಪಂತ್ ಭಾರತ ತಂಡದ ಪಾಲಿಗೆ ಮತ್ತೊಮ್ಮೆ ಆಪದ್ಬಾಂಧವನಾದರು. ನ್ಯೂಲ್ಯಾಂಡ್ಸ್ ಕ್ರೀಡಾಂಗಣದ ಪಿಚ್‌ನಲ್ಲಿ ನಡೆಯುತ್ತಿರುವ ಮೂರನೇ ಟೆಸ್ಟ್‌ನಲ್ಲಿ ದಕ್ಷಿಣ ಆಫ್ರಿಕಾದ ಬೌಲರ್‌ಗಳ ಶಿಸ್ತಿನ ದಾಳಿಯ ಮುಂದೆ ಅಜೇಯ ಶತಕ ಹೊಡೆದರು.


ಲಭಿಸಿದ ಎರಡು ಜೀವದಾನಗಳನ್ನು ಸಮರ್ಥವಾಗಿ ಬಳಸಿಕೊಂಡ ಪಂತ್ ಸಾಹಸದಿಂದಾಗಿ ಆತಿಥೇಯರಿಗೆ 212 ರನ್‌ಗಳ ಗುರಿ ಒಡ್ಡಲು ಸಾಧ್ಯವಾಯಿತು. ಆದರೆ, ಎರಡನೇ ಇನಿಂಗ್ಸ್ ಆರಂಭಿಸಿರುವ ಆತಿಥೇಯ ತಂಡವು ಈ ಮೊತ್ತದ ಬಹುತೇಕ ಅರ್ಧಹಾದಿ ಸವೆಸಿದೆ. ಮೂರನೇ ದಿನದಾಟದ ಮುಕ್ತಾಯಕ್ಕೆ 29.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 101 ರನ್ ಗಳಿಸಿದೆ. ಕೀಗನ್ ಪೀಟರ್ಸನ್ (ಬ್ಯಾಟಿಂಗ್ 48; 61ಎ) ಕ್ರೀಸ್‌ನಲ್ಲಿದ್ದಾರೆ. ಕೀಗನ್ ಮತ್ತು ಡೀನ ಎಲ್ಗರ್ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 78 ರನ್ ಸೇರಿಸಿದರು. ಜಸ್‌ಪ್ರೀತ್ ಬೂಮ್ರಾ ಬೌಲಿಂಗ್‌ನಲ್ಲಿ ಎಲ್ಗರ್ ಔಟಾಗುವುದರೊಂದಿಗೆ ದಿನದಾಟ ಮತ್ತು ಜೊತೆಯಾಟಕ್ಕೆ ತೆರೆಬಿತ್ತು. ಇನಿಂಗ್ಸ್‌ನ ಎಂಟನೆ ಓವರ್‌ನಲ್ಲಿಯೇ ಮೊಹಮ್ಮದ್ ಶಮಿ ಬೌಲಿಂಗ್‌ನಲ್ಲಿ ಏಡನ್ ಮರ್ಕರಂ ಔಟಾಗಿದ್ದರು.

ಪಂತ್ ದಿಟ್ಟ ಬ್ಯಾಟಿಂಗ್: ಮೊದಲ ಇನಿಂಗ್ಸ್‌ನಲ್ಲಿ 13 ರನ್‌ಗಳ ಅಲ್ಪ ಮುನ್ನಡೆ ಗಳಿಸಿದ್ದ ಪ್ರವಾಸಿ ಬಳಗವು ವೇಗಿ ಮಾರ್ಕೊ ಜ್ಯಾನ್ಸನ್, ಲುಂಗಿ ಗಿಡಿ ಮತ್ತು ಕಗಿಸೊ ರಬಾಡ ದಾಳಿಗೆ ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತ್ತು. 58 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ಕ್ರೀಸ್‌ನಲ್ಲಿದ್ದ ನಾಯಕ ವಿರಾಟ್ ಆಸರೆ ನೀಡಲು ಹರಸಾಹಸ ನಡೆಸಿದ್ದರು. ತಮ್ಮ ಆಕ್ರಮಣಶೈಲಿಯನ್ನು ಕೈಬಿಟ್ಟು ಅಪಾರ ತಾಳ್ಮೆಯಿಂದ ಬ್ಯಾಟಿಂಗ್ ಮಾಡುತ್ತಿದ್ದರು. 40 ಎಸೆತಗಳಲ್ಲಿ 14 ರನ್ ಗಳಿಸಿದ್ದ ಅವರೊಂದಿಗೆ ಸೇರಿದ ಪಂತ್ ಎಸೆತಗಳನ್ನು ಚುರುಕಾಗಿ ಬೌಂಡರಿಯತ್ತ ಹೊಡೆದರು. ಕೊಹ್ಲಿ ಮತ್ತಷ್ಟು ರಕ್ಷಣಾತ್ಮಕವಾಗಿ ಆಡಿ, ರಿಷಭ್‌ಗೆ ಅವಕಾಶ ಕೊಟ್ಟರು.

ಇದರಿಂದಾಗಿ ಸ್ಕೋರ್‌ಬೋರ್ಡ್‌ನಲ್ಲಿ ರನ್‌ಗಳು ಪಟಪಟನೆ ಸೇರತೊಡಗಿದವು. ಐದನೇ ವಿಕೆಟ್ ಜೊತೆಯಾದಲ್ಲಿ 94 ರನ್ ಸೇರಿದವು. ಆದರೆ, 49ನೇ ಓವರ್‌ನಲ್ಲಿ ಲುಂಗಿ ಗಿಡಿ ಎಸೆತದಲ್ಲಿ ಕೆಟ್ಟ ಹೊಡೆತವಾಡಿದ ಕೊಹ್ಲಿ ದಂಡ ತೆತ್ತರು. ಜೊತೆಯಾಟ ಮುರಿದುಬಿತ್ತು. ನಂತರ ಬಂದ ಬ್ಯಾಟ್ಸ್‌ಮನ್‌ಗಳು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲು ಸಾಧ್ಯವಾಗಲಿಲ್ಲ

ಆದರೆ, ರಿಷಭ್ ಸಿಕ್ಕ ಅವಕಾಶದಲ್ಲಿಯೇ ಶತಕದ ಗಡಿ ಮುಟ್ಟಿದರು. ದಕ್ಷಿಣ ಆಫ್ರಿಕಾದಲ್ಲಿ ಈ ಸಾಧನೆ ಮಾಡಿದ ಭಾರತದ ಮೊದಲ ವಿಕೆಟ್‌ಕೀಪರ್ ಹೆಗ್ಗಳಿಕೆಗೆ ಪಾತ್ರರಾದರು. ಒಂದೆಡೆ ವಿಕೆಟ್ ಪತನವಾಗುತ್ತಿದ್ದರೂ ತಂಡದ ಮೊತ್ತವು ಹೆಚ್ಚುವಂತೆ ನೋಡಿಕೊಂಡರು. ಭಾರತವು 67.3 ಓವರ್‌ಗಳಲ್ಲಿ 198 ರನ್ ಗಳಿಸಿ ಆಲೌಟ್ ಆಯಿತು. ಅಗ್ರಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದಾಗಿ ನಿರೀಕ್ಷಿತ ಗುರಿ ನೀಡಲು ವಿರಾಟ್ ಬಳಗಕ್ಕೆ ಸಾಧ್ಯವಾಗಿಲ್ಲ.

ಆದ್ದರಿಂದ ನಾಲ್ಕನೇ ದಿನದಾಟದಲ್ಲಿ ಭಾರತಕ್ಕೆ ಗೆಲುವಿನ ಹಾದಿ ಕಠಿಣವಾಗಲಿದೆ. ಸರಣಿ ಜಯದ ಇತಿಹಾಸ ನಿರ್ಮಿಸಲು ಇನ್ನೂ ಎಂಟು ವಿಕೆಟ್‌ಗಳನ್ನು ಭಾರತ ಗಳಿಸಬೇಕಿದೆ. ನಾಲ್ಕನೇ ದಿನದ ಮೊದಲ ಅವಧಿಯ ಆಟವು ನಿರ್ಣಾಯಕವಾಗುವ ಸಾಧ್ಯತೆ ಇದೆ.



ಭಾರತದ ರಿಷಭ್ ಪಂತ್ ಬ್ಯಾಟಿಂಗ್ ಪರಿ– ಎಪಿ ಚಿತ್ರ

ಪ್ರಮುಖ ಅಂಶಗಳು

4	ರಿಷಭ್ ಪಂತ್‌ಗೆ ಟೆಸ್ಟ್‌ನಲ್ಲಿ ಇದು ನಾಲ್ಕನೇ ಶತಕ. ಆಸ್ಟ್ರೇಲಿಯಾ, ಇಂಗ್ಲೆಂಡ್, ಭಾರತ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಶತಕ ಸಾಧನೆ
1	ದಕ್ಷಿಣ ಆಫ್ರಿಕಾದಲ್ಲಿ ಶತಕ ದಾಖಲಿಸಿದ ಭಾರತದ ಮೊದಲ ವಿಕೆಟ್‌ಕೀಪರ್–ಬ್ಯಾಟರ್ ಪಂತ್. 2010ರಲ್ಲಿ ಮಹೇಂದ್ರಸಿಂಗ್ ಧೋನಿ ಸೆಂಚುರಿಯನ್‌ನಲ್ಲಿ 90 ರನ್ ಗಳಿಸಿದ್ದರು
20	ಭಾರತದ ಎರಡೂ ಇನಿಂಗ್ಸ್‌ಗಳಲ್ಲಿ ಎಲ್ಲ ಬ್ಯಾಟ್ಸ್‌ಮನ್‌ಗಳೂ ಕ್ಯಾಚ್ ಔಟ್ ಆದರು. ಈ ರೀತಿ ಇದೇ ಮೊದಲ ಸಲ ಆಗಿದೆ.
100	ವಿರಾಟ್ ಕೊಹ್ಲಿ ಮೊದಲ ಇನಿಂಗ್ಸ್‌ನಲ್ಲಿ ತೆಂಬಾ ಬವುಮಾ ಅವರನ್ನು ಕ್ಯಾಚ್ ಮಾಡುವ ಮೂಲಕ 'ಶತಕ' ದಾಖಲಿಸಿದರು. ನೂರು ಕ್ಯಾಚ್ ಪಡೆದ ಭಾರತದ ಆರನೇ ಆಟಗಾರನಾದರು. ರಾಹುಲ್ ದ್ರಾವಿಡ್ (210), ವಿವಿಎಸ್ ಲಕ್ಷ್ಮಣ್ (135), ಸಚಿನ್ ತೆಂಡೂಲ್ಕರ್ (115), ಸುನಿಲ್ ಗಾವಸ್ಕರ್ (108) ಮತ್ತು ಮೊಹಮ್ಮದ್ ಅಜರುದ್ದೀನ್ (105).

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 223 (77.3 ಓವರ್‌ಗಳಲ್ಲಿ)
ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್ 210 (76.3 ಓವರ್)
ಭಾರತ ಎರಡನೇ ಇನಿಂಗ್ಸ್ 198 (67.3 ಓವರ್)
(ಬುಧವಾರ 17 ಓವರ್‌ಗಳಲ್ಲಿ 2 ವಿಕೆಟ್‌ಗೆ 57)
ಚೇತೇಶ್ವರ್ ಸಿ ಪೀಟರ್ಸನ್ ಬಿ ಜ್ಯಾನ್ಸೆನ್ 9 (33ಎ, 4X2), ಕೊಹ್ಲಿ ಸಿ ಮರ್ಕರಂ ಬಿ ಗಿಡಿ 29 (143ಎ, 4X4), ರಹಾನೆ ಸಿ ಎಲ್ಗರ್ ಬಿ ರಬಾಡ 1 (9ಎ), ಪಂತ್ ಔಟಾಗದೆ 100 (139ಎ, 4X6, 6X4), ಅಶ್ವಿನ್ ಸಿ ಜ್ಯಾನ್ಸೆನ್ ಬಿ ಗಿಡಿ 7 (15ಎ, 4X1), ಶಾರ್ದೂಲ್ ಸಿ ವೆರೆಯನ್ ಬಿ ಗಿಡಿ 5 (13ಎ, 4X1), ಉಮೇಶ್ ಸಿ ವೆರೆಯನ್ ಬಿ ರಬಾಡ 0 (10ಎ), ಶಮಿ ಸಿ ಡಸೆ ಬಿ ಜ್ಯಾನ್ಸೆನ್ 0 (10ಎ), ಬೂಮ್ರಾ ಸಿ ಬವುಮಾ ಬಿ ಜ್ಯಾನ್ಸೆನ್ 2 (5ಎ)
ಇತರೆ (ಬೈ 8, ಲೆಗ್‌ಬೈ 9, ನೋಬಾಲ್ 9, ವೈಡ್ 2) 28
ವಿಕೆಟ್ ಪತನ: 3–57 (ಚೇತೇಶ್ವರ್ ಪೂಜಾರ, 17.2), 4–58 (ಅಜಿಂಕ್ಯ ರಹಾನೆ, 18.6), 5-152 (ವಿರಾಟ್ ಕೊಹ್ಲಿ, 48.2), 6-162 (ರವಿಚಂದ್ರನ್ ಅಶ್ವಿನ್, 52.3), 7-170 (ಶಾರ್ದೂಲ್ ಠಾಕೂರ್, 56.1), 8-180 (ಉಮೇಶ್ ಯಾದವ್, 58.5), 9-189 (ಮೊಹಮ್ಮದ್ ಶಮಿ, 63.6), 10-198 (ಜಸ್‌ಪ್ರೀತ್ ಬೂಮ್ರಾ, 67.3)
ಬೌಲಿಂಗ್: ಕಗಿಸೊ ರಬಾಡ 17–5–53–3, ಡುವೆನ್ ಒಲಿವಿಯರ್ 10–1–38–0, ಮಾರ್ಕೊ ಜ್ಯಾನ್ಸೆನ್ 19.3–6–36–4, ಲುಂಗಿ ಗಿಡಿ 14–5–21–3, ಕೇಶವ್ ಮಹಾರಾಜ್ 7–1–33–0
ದಕ್ಷಿಣ ಆಫ್ರಿಕಾ ಎರಡನೇ ಇನಿಂಗ್ಸ್ 2ಕ್ಕೆ 101 (29.4 ಓವರ್)
ಮರ್ಕರಂ ಸಿ ರಾಹುಲ್ ಬಿ ಶಮಿ 16 (22ಎ, 4X4), ಎಲ್ಗರ್ ಸಿ ಪಂತ್ ಬಿ ಬೂಮ್ರಾ 30 (96ಎ, 4X3), ಪೀಟರ್ಸನ್ ಬ್ಯಾಟಿಂಗ್ 48 (61ಎ, 4X7)
ಇತರೆ (ಲೆಗ್‌ಬೈ 6, ನೋಬಾಲ್ 1) 7
ವಿಕೆಟ್ ಪತನ: 1–23 (ಏಡನ್ ಮರ್ಕರಂ, 7.3), 2–101 (ಡೀನ್ ಎಲ್ಗರ್, 29.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 9.4–3–29–1, ಮೊಹಮ್ಮದ್ ಶಮಿ 7–0–22–1, ಉಮೇಶ್ ಯಾದವ್ 2–0–5–0, ಶಾರ್ದೂಲ್ ಠಾಕೂರ್ 5–1–17–0, ರವಿಚಂದ್ರನ್ ಅಶ್ವಿನ್ 6–1–22–0

ಕಬಡ್ಡಿ: ಪುಣೇರಿ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ನಿತಿನ್ ತೋಮರ್ ಅವರ ಮಿಂಚಿನ ವೇಗದ ದಾಳಿಯ ನೆರವಿನಿಂದ ಪುಣೇರಿ ಪಲ್ಟನ್ ತಂಡವು ಗುರುವಾರ ಪ್ರೊ ಕಬಡ್ಡಿ ಪಂದ್ಯದಲ್ಲಿ ಜಯಿಸಿತು.

ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಪುಣೇರಿ ತಂಡವು 42–23ರ ಭಾರಿ ಅಂತರದಿಂದ ಯು ಮುಂಬಾ ಎದುರು ಜಯಿಸಿತು.

ನಾಯಕ ನಿತಿನ್ ತೋಮರ್ 9 ಅಂಕಗಳನ್ನು ಗಳಿಸಿದರು. ರಕ್ಷಣಾ ಆಗಾರ ಅಭಿನೇಶ್ ನಾಲ್ಕು ಅಂಕ ಮತ್ತು ರೇಡಿಂಗ್‌ನಲ್ಲಿ ಅಸ್ಲಂ ಇನಾಮದಾರ್ ಏಳು ಅಂಕ ಗಳಿಸಿ ನಾಯಕನಿಗೆ ಉತ್ತಮ ಜೊತೆ ನೀಡಿದರು. ಮೋಹಿತ್ ಗೋಯತ್ (5) ಕೂಡ ಮಿಂಚಿದರು.

ಬೆಂಗಾಲ್ ಜಯಭೇರಿ: ನಾಯಕನಿಗೆ ತಕ್ಕ ಆಟವಾಡಿದ ಮಣಿಂದರ್ ಸಿಂಗ್ 12 ಅಂಕ ಗಳಿಸುವ ಮೂಲಕ ಬೆಂಗಾಲ್ ವಾರಿಯರ್ಸ್ ತಂಡದ ಗೆಲುವಿಗೆ ಕಾರಣರಾದರು. ತಂಡವು 37 –28ರಿಂದ ತಮಿಳ್ ತಲೈವಾಸ್ ವಿರುದ್ಧ ಗೆದ್ದಿತು. ಮೊದಲಾರ್ಧದಲ್ಲಿಯೇ ಬೆಂಗಾಲ್ 20–16ರಿಂದ ಮುನ್ನಡೆ ಗಳಿಸಿತ್ತು. ವಿರಾಮದ ನಂತರವೂ ಮೇಲುಗೈ ಸಾಧಿಸಿತು. ಬೆಂಗಾಲ್ ಆಟಗಾರರು ಚುರುಕಾದ ರೇಡಿಂಗ್ ಮತ್ತು ರಕ್ಷಣಾ ತಂತ್ರಗಳ ಮೂಲಕ ಎದುರಾಳಿಯನ್ನು ಕಟ್ಟಿಹಾಕಿದರು.


ಯು ಮುಂಬಾ ತಂಡದ ಅಭಿಷೇಕ್ ಸಿಂಗ್ ಅವರನ್ನು ಟ್ಯಾಕಲ್ ಮಾಡಿದ ಪುಣೇರಿ ಪಲ್ಟನ್ ಆಟಗಾರರು

ಇಂದಿನ ಪಂದ್ಯ (ರಾತ್ರಿ)
ಜೈಪುರ ಪಿಂಕ್ ಪ್ಯಾಂಥರ್ಸ್ Vs ಪಟ್ನಾ ಪೈರೇಟ್ಸ್ 7.30
ಗುಜರಾತ್ ಜೈಂಟ್ಸ್ – ಬೆಂಗಳೂರು ಬುಲ್ಸ್ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	8	6	1	1	34
ಬೆಂಗಳೂರು ಬುಲ್ಸ್	9	6	2	1	33
ದಬಂಗ್ ಡೆಲ್ಲಿ	9	5	2	2	32
ತಮಿಳ್ ತಲೈವಾಸ್	9	3	2	4	27
ಯು ಮುಂಬಾ	9	3	3	3	25
ಯುಪಿ ಯೋಧಾ	9	2	4	3	23
ಜೈಪುರ್ ಪಿಂಕ್ ಪ್ಯಾಂಥರ್ಸ್	8	4	4	-	23
ಹರಿಯಾಣ ಸ್ಟೀಲರ್ಸ್	9	3	4	2	23
ಬೆಂಗಾಲ್ ವಾರಿಯರ್ಸ್	9	4	5	-	22
ಪುಣೇರಿ ಪಲ್ಟನ್	9	4	5	-	21
ಗುಜರಾತ್ ಜೈಂಟ್ಸ್	8	2	4	2	20
ತೆಲುಗು ಟೈಟನ್ಸ್	8	-	6	2	10

(ಗುರುವಾರದ ಪಂದ್ಯಗಳ ಅಂತ್ಯಕ್ಕೆ)

19 ವರ್ಷದೊಳಗಿನವರ ವಿಶ್ವಕಪ್: ಭಾರತ 'ಫೇವರೀಟ್'

ವೆಸ್ಟ್ ಇಂಡೀಸ್‌ಗೆ ಆಸ್ಟ್ರೇಲಿಯಾ ಸವಾಲು

ಜಾರ್ಜ್‌ಟೌನ್, ಗಯಾನ (ಪಿಟಿಐ): ಕ್ರಿಕೆಟ್ ರಂಗದ ಭವಿಷ್ಯದ ತಾರೆಗಳು ಉದಯಿಸುವ ಐಸಿಸಿ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯು ಗುರುವಾರ ಆರಂಭವಾಗಲಿದೆ.

ಇದೇ ಮೊದಲ ಬಾರಿ ವೆಸ್ಟ್ ಇಂಡೀಸ್ ಆತಿಥ್ಯದಲ್ಲಿ ನಡೆಯಲಿರುವ ಟೂರ್ನಿಯಲ್ಲಿ 16 ತಂಡಗಳು ಸ್ಪರ್ಧಿಸಲಿವೆ.ಮೊದಲ ದಿನದ ಪಂದ್ಯಗಳಲ್ಲಿ ಆತಿಥೇಯ ವೆಸ್ಟ್ ಇಂಡೀಸ್ ಮತ್ತು ಆಸ್ಟ್ರೇಲಿಯಾ, ಶ್ರೀಲಂಕಾ ಹಾಗೂ ಸ್ಕಾಟ್ಲೆಂಡ್ ಮುಖಾಮುಖಿಯಾಗಲಿವೆ. ನಾಲ್ಕು ಬಾರಿ ಪ್ರಶಸ್ತಿ ಗೆದ್ದಿರುವ ಭಾರತ ತಂಡವು ಬಿ ಗುಂಪಿನಲ್ಲಿ ಕಣಕ್ಕಿಳಿಯಲಿದೆ. ಮೂರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಡಿ ಗುಂಪಿನಲ್ಲಿ ಆಡಲಿದೆ.

ಎರಡು ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ಭಾರತ ತಂಡಕ್ಕೆ ಆಘಾತ ನೀಡಿ ಪ್ರಶಸ್ತಿ ಜಯಿಸಿದ್ದ ಬಾಂಗ್ಲಾ ದೇಶ ತಂಡವು ಎ ಗುಂಪಿನಲ್ಲಿದೆ. ಪಾಕಿಸ್ತಾನ ಸಿ ಗುಂಪಿನಲ್ಲಿ ಆಡಲಿದೆ.

ವೀಸಾ ನೀಡುವಿಕೆಯಲ್ಲಿ ಆದ ತೊಂದರೆಗಳಿಂದಾಗಿ ತಡವಾಗಿ ಪ್ರವೇಶ ಖಚಿತಪಡಿಸಿಕೊಂಡು ಬಂದಿರುವ ಅಫ್ಗಾನಿಸ್ತಾನವೂ ಇದೇ ಗುಂಪಿನಲ್ಲಿದೆ.

ನ್ಯೂಜಿಲೆಂಡ್ ತಂಡವು ಕ್ವಾರಂಟೈನ್ ನಿಯಮಗಳನ್ನು ತಿರಸ್ಕರಿಸಿ ಟೂರ್ನಿಯಿಂದ ಹಿಂದೆ ಸರಿದ ಕಾರಣ ಸ್ಕಾಟ್ಲೆಂಡ್ ತಂಡಕ್ಕೆ ಅವಕಾಶ ಲಭಿಸಿದೆ.

ಈಚೆಗೆ ಏಷ್ಯಾ ಕಪ್ ಗೆದ್ದಿರುವ ಆತ್ಮವಿಶ್ವಾಸದಲ್ಲಿರುವ ಯಶ್ ಧುಳ್ ಪಡೆಯು ಕೆರಿಬಿಯನ್ ನಾಡಿನಲ್ಲಿಯೂ ಪ್ರಶಸ್ತಿ ಜಯಿಸುವ ನೆಚ್ಚಿನ ತಂಡವಾಗಿ ಕಣಕ್ಕಿಳಿಯಲಿದೆ. ಅಭ್ಯಾಸ ಪಂದ್ಯದಲ್ಲಿ ಆಸ್ಟ್ರೇಲಿಯಾವನ್ನು ಮಣಿಸಿರುವ ತಂಡದ ಬ್ಯಾಟರ್ ಹರ್ನೂರ್ ಸಿಂಗ್ ಅಮೋಘ ಲಯದಲ್ಲಿದ್ದಾರೆ.

ಬೌಲರ್ ಶೇಖ್ ರಶೀದ್ ಮತ್ತು ರಾಜ್ಯವರ್ಧನ್ ಹಂಗರೇಕರ್ ಕೂಡ ಈಚೆಗಿನ ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದರು. ಆಸ್ಟ್ರೇಲಿಯಾ ತಂಡದ ನಾಯಕ ಆಲ್‌ರೌಂಡರ್ ಕೂಪರ್ ಕಾನ್ಲೆ ಉತ್ತಮ ಲಯದಲ್ಲಿದ್ದಾರೆ.


ಭಾರತ 19 ವರ್ಷದೊಳಗಿನವರ ಕ್ರಿಕೆಟ್ ತಂಡದ ನಾಯಕ ಯಶ್ ಧುಳ್

ಕ್ವಾರ್ಟರ್‌ಗೆ ಸಿಂಧು; ಸೈನಾಗೆ ಆಘಾತ

ಇಂಡಿಯಾ ಓಪನ್ ಬ್ಯಾಡ್ಮಿಂಟನ್: ಎಚ್‌.ಎಸ್‌. ಪ್ರಣಯ್ ಎಂಟರಘಟ್ಟಕ್ಕೆ

ನವದೆಹಲಿ (ಪಿಟಿಐ): ಸುಲಭ ಜಯ ಸಂಪಾದಿಸಿದ ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ, ಭಾರತದ ಪಿ.ವಿ.ಸಿಂಧು ಅವರು ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ. ಆದರೆ ಭರವಸೆಯ ಆಟಗಾರ್ತಿ ಮಾಳವಿಕಾ ಬಾನ್ಸೋದ್ ಅವರಿಗೆ ಮಣಿದ ಸೈನಾ ನೆಹ್ವಾಲ್ ಅಭಿಯಾನ ಟೂರ್ನಿಯಲ್ಲಿ ಗುರುವಾರ ಅಂತ್ಯವಾಯಿತು.


ಮಾಳವಿಕಾ ಬಾನ್ಸೋದ್

ಅಗ್ರಶ್ರೇಯಾಂಕದ ಸಿಂಧು ಮಹಿಳಾ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ 21–10, 21–10ರಿಂದ ಭಾರತದವರೇ ಆದ ಇರಾ ಶರ್ಮಾ ಅವರನ್ನು ಮಣಿಸಿದರು.

ಸಿಂಧು ಅವರು ಎಂಟರಘಟ್ಟದ ಪಂದ್ಯದಲ್ಲಿ ಭಾರತದವರೇ ಆದ ಅಸ್ಮಿತಾ ಚಲಿಹಾ ಅವರನ್ನು ಎದುರಿಸುವರು. ಎರಡನೇ ಸುತ್ತಿನ ಇನ್ನೊಂದು ಹಣಾಹಣಿಯಲ್ಲಿ ಅಸ್ಮಿತಾ 21-17, 21-14ರಿಂದ ಫ್ರಾನ್ಸ್‌ನ ಯೆಲ್ಲೆ ಹೊಯಾಕ್ಸ್ ಅವರನ್ನು ಮಣಿಸಿದರು.

ಮಾಜಿ ಚಾಂಪಿಯನ್ ಹಾಗೂ 2012ರ ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ 17–21, 9–21ರಿಂದ ಭಾರತದ ಮಾಳವಿಕಾ ಎದುರು ಎಡವಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 111ನೇ ಸ್ಥಾನದಲ್ಲಿರುವ 20 ವರ್ಷದ ಮಾಳವಿಕಾ, ವಿಶ್ವದ ಮಾಜಿ ಅಗ್ರಕ್ರಮಾಂಕದ ಆಟಗಾರ್ತಿಯನ್ನು ಮಣಿಸಲು ಕೇವಲ 34 ನಿಮಿಷ ತೆಗೆದುಕೊಂಡರು.

'ಸೈನಾ ಎದುರು ಮೊದಲ ಬಾರಿ ಕಣಕ್ಕಿಳಿದಿದ್ದೆ. ಬ್ಯಾಡ್ಮಿಂಟನ್ ಆಡಲು ಆರಂಭಿಸಿದಾಗಿನಿಂದ ಅವರು ನನ್ನ ಆದರ್ಶವಾಗಿದ್ದಾರೆ. ಅವರ ಎದುರು ಆಡುವುದು ಜೀವನದ ಬಹುದೊಡ್ಡ ಕನಸಾಗಿತ್ತು. ಇಂಡಿಯಾ ಓಪನ್‌ನಂತಹ ದೊಡ್ಡ ವೇದಿಕೆಯಲ್ಲಿ ಅದು ನನಸಾಯಿತು. ಈ ಗೆಲುವು ನನ್ನ ಬದುಕಿನ ಮಹತ್ವದ ಸಾಧನೆ' ಎಂದು ಗೆಲುವಿನ ಬಳಿಕ ಮಾಳವಿಕಾ ನುಡಿದರು.

ಗಾಯಗಳಿಂದ ಚೇತರಿಸಿಕೊಂಡು ಟೂರ್ನಿಯಲ್ಲಿ ಕಣಕ್ಕಿಳಿದಿದ್ದ ಸೈನಾ, ಮಂಗಳವಾರ ಮೊದಲ ಸುತ್ತಿನ ತಡೆ ದಾಟಿದ್ದರು. ಅಂಗಣದಲ್ಲಿ ತೋರಿದ ಸಾಮರ್ಥ್ಯದ ಬಗ್ಗೆ ಅವರಿಗೆ ಸಂತಸವಿದೆ. ಆದರೆ ತಾನು ಇನ್ನಷ್ಟು ಫಿಟ್ ಆಗಬೇಕಿತ್ತು ಎಂದು ಅವರು ಹೇಳಿದ್ದಾರೆ.

'ರ‍್ಯಾಲಿಗಳಲ್ಲಿ ಮಾಳವಿಕಾ ಅದ್ಭುತವಾಗಿ ಆಡಿದರು. ಅವರಿಗೆ ಉತ್ತಮ ಭವಿಷ್ಯವಿದೆ' ಎಂದು ಸೈನಾ ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಳವಿಕಾ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಆಕರ್ಷಿ ಕಶ್ಯಪ್ ಅವರಿಗೆ ಮುಖಾಮುಖಿಯಾಗಲಿದ್ದಾರೆ. ಇನ್ನೊಂದು ಪಂದ್ಯದಲ್ಲಿ ಆಕರ್ಷಿ 21-10, 21-10ರಿಂದ ಭಾರತದವರೇ ಆದ ಕೆಯುರಾ ಮೊಪಾತಿನ್ ಎದುರು ಜಯಿಸಿದರು.

ಪ್ರಣಯ್‌ಗೆ ವಾಕ್‌ಓವರ್: ಪುರುಷರ ಸಿಂಗಲ್ಸ್‌ನಲ್ಲಿ ಎಚ್‌.ಎಸ್‌. ಪ್ರಣಯ್ ಅವರಿಗೆ ವಾಕ್ ಓವರ್ ಲಭಿಸಿತು. ಕೊರೊನಾ ಸೋಂಕಿತ ಮಿಥುನ್ ಮಂಜುನಾಥ್ ಹಿಂದೆ ಸರಿದ ಕಾರಣ ಅವರಿಗೆ ಈ ಅವಕಾಶ ಸಿಕ್ಕಿತು. ಸಮೀರ್ ವರ್ಮಾ ಅವರ ಅಭಿಯಾನ ಕೊನೆಗೊಂಡಿತು. ಮೊಣಕಾಲು ನೋವಿನಿಂದ ಬಳಲಿದ ಅವರು ಕೆನಡಾದ ಬ್ರೇನ್ ಯಾಂಗ್ ಎದುರಿನ ಎರಡನೇ ಸುತ್ತಿನ ಪಂದ್ಯದ ನಡುವೆಯೇ ಹಿಂದೆ ಸರಿದರು.

ಪುರುಷರ ಡಬಲ್ಸ್‌ನ ಎರಡನೇ ಸುತ್ತಿನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್‌ಶೆಟ್ಟಿ ಜೋಡಿಯು 21-9, 21-18ರಿಂದ ಭಾರತದ ಶ್ಯಾಮ್ ಪ್ರಸಾದ್– ಎಸ್. ಸಂಜಿತ್ ಅವರನ್ನು ಮಣಿಸಿದರು.



ಶಟಲ್ ಹಿಂದಿರುಗಿಸಲು ಯತ್ನಿಸಿದ ಪಿ.ವಿ. ಸಿಂಧು– ಪಿಟಿಐ ಚಿತ್ರ

ಶ್ರೀಕಾಂತ್ ಸೇರಿ 7 ಮಂದಿಗೆ ಕೋವಿಡ್

ನವದೆಹಲಿ (ಪಿಟಿಐ): ಆತಿಥೇಯ ಭಾರತದ ಕಿದಂಬಿ ಶ್ರೀಕಾಂತ್ ಸೇರಿದಂತೆ ಏಳು ಮಂದಿ ಬ್ಯಾಡ್ಮಿಂಟನ್ ಆಟಗಾರರಿಗೆ ಕೋವಿಡ್ ಇರುವುದು ಖಚಿತವಾಗಿದೆ. ಅದರಿಂದಾಗಿ ಅವರು ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಶ್ರೀಕಾಂತ್, ಡಬಲ್ಸ್ ಆಟಗಾರ್ತಿ ಅಶ್ವಿನಿ ಪೊನ್ನಪ್ಪ, ರಿತಿಕಾ ರಾಹುಲ್ ಠಕ್ಕರ್, ತ್ರಿಷಾ ಜೋಲಿ, ಮಿಥುನ್ ಮಂಜುನಾಥ್, ಸಿಮ್ರನ್ ಸಿಂಘಿ ಹಾಗೂ ಖುಷಿ ಗುಪ್ತಾ ಅವರಿಗೆ ಕೊರೊನಾ ಸೋಂಕು ತಗುಲಿದೆ.

ಕೋವಿಡ್ ನಿಯಮಾವಳಿಯಂತೆ ಎಲ್ಲ ಆಟಗಾರರನ್ನೂ ಪ್ರತ್ಯೇಕವಾಸದಲ್ಲಿರುವಂತೆ ಸೂಚಿಸಲಾಗಿದೆ. ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ 'ನೆಗೆಟಿವ್' ಬಂದ ಬಳಿಕ ನವದೆಹಲಿಯಿಂದ ತಮ್ಮ ನಗರಗಳಿಗೆ ಹಿಂತಿರುಗಲು ಅನುಮತಿ ನೀಡಲಾಗುತ್ತದೆ.

ಕ್ರೀಡಾಪಟುಗಳಲ್ಲಿ ಕೋವಿಡ್ ದೃಢಪಟ್ಟಿರುವ ಹೊರತಾಗಿಯೂ, ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಟೂರ್ ಸೂಪರ್ 500 ಚಾಂಪಿಯನ್‌ಷಿಪ್ ಅನ್ನು ನಿಗದಿತ ವೇಳಾಪಟ್ಟಿಯಂತೆ ಮುಂದುವರಿಸಲು ಸಂಘಟಕರು ನಿರ್ಧರಿಸಿದ್ದಾರೆ. ಟೂರ್ನಿಯಿಂದ ಹಿಂದೆ ಸರಿದಿರುವವರ ಸ್ಥಾನಕ್ಕೆ ಯಾವ ಆಟಗಾರರನ್ನು ಪ್ರಕಟಿಸಿಲ್ಲ. ಅವರ ಎದುರಾಳಿಗಳಿಗೆ ಮುಂದಿನ ಸುತ್ತಿಗೆ ವಾಕ್‌ಓವರ್ ಲಭಿಸಿದೆ.

ಆಸ್ಟ್ರೇಲಿಯಾ ಓಪನ್: ಮುಖ್ಯ ಸುತ್ತಿನಲ್ಲಿ ಜೊಕೊವಿಚ್

ಮೆಲ್ಬರ್ನ್(ಎಪಿ): ವಿಶ್ವದ ಅಗ್ರಕ್ರಮಾಂಕದ ಟೆನಿಸ್ ಆಟಗಾರ ನೊವಾಕ್ ಜೊಕೊವಿಚ್ ಅವರು ಆಸ್ಟ್ರೇಲಿಯಾ ಓಪನ್ ಮುಖ್ಯ ಸುತ್ತಿನಲ್ಲಿ ಆಡುವ ಅವಕಾಶ ಪಡೆದಿದ್ದಾರೆ. ಸರ್ಬಿಯಾದ ಆಟಗಾರ ಮೊದಲ ಸುತ್ತಿನಲ್ಲಿ ತಮ್ಮದೇ ದೇಶದ ಮಿಯೊ ಮಿರ್ ಕೆಸ್ಮೊನೊವಿಚ್ ಅವರನ್ನು ಎದುರಿಸಲಿದ್ದಾರೆ.

ಟೂರ್ನಿಯ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಡ್ರಾಗಳನ್ನು ನಿರ್ಧರಿಸುವುದನ್ನು 75 ನಿಮಿಷಗಳ ಕಾಲ ಮುಂದೂಡಲಾಗಿತ್ತು. ಡ್ರಾ ಪ್ರಕಟವಾಗುವ ಕೊನೆಯ ಕ್ಷಣದವರೆಗೂ ಜೊಕೊವಿಕ್ ಅವರ ವೀಸಾ ಸಂಗತಿಯೇ ಎಲ್ಲರ ಗಮನಸೆಳೆದಿತ್ತು. ಇದಾದ ಬಳಿಕವೂ ಜೊಕೊವಿಚ್ ಇನ್ನೂ ಅತಂತ್ರ ಸ್ಥಿತಿಯಲ್ಲೇ ಇದ್ದಾರೆ. ಕೋವಿಡ್ ಲಸಿಕೆ ತೆಗೆದು ಕೊಳ್ಳದ, ನೊವಾಕ್ ಅವರನ್ನು ಗಡಿ ಪಾರು ಮಾಡಬೇಕೇ ಎಂಬ ವಿಷಯ ಇನ್ನೂ ಪರಿಗಣನೆಯಲ್ಲಿದೆ ಎಂದು ಆಸ್ಟ್ರೇಲಿಯಾದ ಇಮಿಗ್ರೇಷನ್ ಸಚಿವರು ಹೇಳಿದ್ದಾರೆ.

ಎನ್‌ಐಎಸ್: ಎಂಟು ಬಾಕ್ಸರ್‌ಗಳಿಗೆ ಕೋವಿಡ್

ನವದೆಹಲಿ (ಪಿಟಿಐ): ಪಟಿಯಾಲಾದಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ (ಎನ್‌ಐಎಸ್) ಕೇಂದ್ರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಶಿಬಿರದಲ್ಲಿ ಮತ್ತೆ ಎಂಟು ಮಂದಿ ಬಾಕ್ಸರ್‌ಗಳಿಗೆ ಕೋವಿಡ್ ಖಚಿತಪಟ್ಟಿದೆ. ಇದರೊಂದಿಗೆ ಪ್ರಕರಣಗಳ ಸಂಖ್ಯೆ 26ಕ್ಕೆ ತಲುಪಿದೆ. ಆದರೆ ಸೋಂಕಿತರೆಲ್ಲರಿಗೂ ಲಕ್ಷಣಗಳು ತೀವ್ರವಾಗಿಲ್ಲ. ಬುಧವಾರ 12 ಮಂದಿ ಬಾಕ್ಸರ್‌ಗಳು ಮತ್ತು 6 ಮಂದಿ ನೆರವು ಸಿಬ್ಬಂದಿಗೆ ಸೋಂಕು ದೃಢಪಟ್ಟಿತ್ತು. ಸದ್ಯ ಸೋಂಕಿತ ಬಾಕ್ಸರ್‌ಗಳ ಸಂಖ್ಯೆ 20ಕ್ಕೆ ಏರಿದೆ. ಶಿಬಿರ ಮುಂದುವರಿಯಲಿದೆ ಎಂದು ಮೂಲಗಳು ಹೇಳಿವೆ.

ಫುಟ್‌ಬಾಲ್: ಬೆಂಗಳೂರು ಬ್ರೇವ್ಸ್ ಜಯಭೇರಿ

ಬೆಂಗಳೂರು: ಲಾಲ್‌ರಾಮ್ದಿನ್‌ತ್ಲುವಾಂಗಿ ಗಳಿಸಿದ ಅಮೋಘ ಐದು ಗೋಲುಗಳ ಬಲದಿಂದ ಬೆಂಗಳೂರು ಬ್ರೇವ್ಸ್ ಎಫ್‌ಸಿ ಭರ್ಜರಿ ಜಯ ಗಳಿಸಿತು.

ಕೆಎಸ್‌ಎಫ್‌ಎ ವಿಮೆನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಗುರುವಾರ 8–1ರಿಂದ ಬೆಂಗಳೂರು ಸಾಕರ್ ಗೆಲಾಕ್ಸಿ ತಂಡವನ್ನು ಮಣಿಸಿತು. ಲಾಲ್‌ರಾಮ್ದಿನ್‌ತ್ಲುವಾಂಗಿ 46, 50, 81, 85 ಮತ್ತು 90ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರು. ವಿಜೇತ ತಂಡದ ಪರ ಲಲ್ಲುಂಗ್ವಾನಿ (42 ಮತ್ತು 49ನೇ ನಿ.) ಮತ್ತು ಮಾಳವಿಕಾ (39ನೇ ನಿ.) ಮಿಂಚಿದರು. ಎದುರಾಳಿ ತಂಡದ ಏಕೈಕ ಗೋಲನ್ನು ಮರಿಯಂ ಖತುನ್ (74ನೇ ನಿ.) ದಾಖಲಿಸಿದರು.

ಇನ್ನುಳಿದ ಪಂದ್ಯಗಳಲ್ಲಿ ಪರಿಕ್ರಮ ಎಫ್‌ಸಿ 4–0ಯಿಂದ ಸ್ಲ್ಯಾಮ್‌ಜರ್ ಬೆಳಗಾವಿ ಎದುರು, ರೆಬೆಲ್ಸ್ ವಿಮೆನ್ಸ್ ಎಫ್‌ಸಿ 1–0ಯಿಂದ ಮಾತೃ ಪ್ರತಿಷ್ಠಾನ ಎಫ್‌ಸಿ ಎದುರು, ಕಿಕ್‌ಸ್ಟಾರ್ಟ್ ಎಫ್‌ಸಿ 3–0ಯಿಂದ ಬೆಂಗಳೂರು ಯುನೈಟೆಡ್ ಎಫ್‌ಸಿ ಎದುರು ಜಯ ಗಳಿಸಿದವು.

ಐಎಸ್‌ಎಲ್: ಡ್ರಾ ಪಂದ್ಯದಲ್ಲಿ ಎಚ್‌ಎಫ್‌ಸಿ– ಸಿಎಫ್‌ಸಿ

ಮಡಗಾಂವ್ (ಪಿಟಿಐ): ಮುನ್ನಡೆಯನ್ನು ಉಳಿಸಿಕೊಳ್ಳಲಾದ ಚೆನ್ನೈಯಿನ್ ಎಫ್‌ಸಿ (ಸಿಎಫ್‌ಸಿ),ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿ ಯಲ್ಲಿ ಗುರುವಾರ ಹೈದರಾಬಾದ್ ಎಫ್‌ಸಿಯೊಡನೆ (ಸಿಎಫ್‌ಸಿ) 1–1ರ ಡ್ರಾ ಸಾಧಿಸಿತು.

ಈ ಫಲಿತಾಂಶದೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರ ನಾಲ್ಕರಲ್ಲಿ ಸ್ಥಾನ ಪಡೆಯುವ ಚೆನ್ನೈ ತಂಡದ ಆಸೆ ಈಡೇರಲಿಲ್ಲ. ತಂಡಕ್ಕೆ ಮೊಹಮ್ಮದ್ ಸಾಜಿದ್ ಧೋತ್ ಅವರು 13ನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆ ಒದಗಿಸಿಕೊಟ್ಟಿದ್ದರು. ಆದರೆ 45ನೇ ನಿಮಿಷದಲ್ಲಿ ಎಚ್‌ಎಫ್‌ಸಿಯ ಜೇವಿಯರ್ ಸಿವೆರಿಯೊ ಸಮಬಲದ ಗೋಲು ದಾಖಲಿಸಿದರು.

ಗೋವಾ– ನಾರ್ತ್‌ಈಸ್ಟ್ ಸೆಣಸು: ಶುಕ್ರವಾರ ಬ್ಯಾಂಬೊಲಿಮ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಎಫ್‌ಸಿ ಗೋವಾ ಮತ್ತು ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ. ಗೋವಾ ತಂಡವು 10 ಪಂದ್ಯಗಳಿಂದ 12 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿದೆ. ಈ ಪಂದ್ಯ ಗೆದ್ದು ಮುನ್ನಡೆಯುವ ಛಲದಲ್ಲಿದೆ. ನಾರ್ತ್‌ಈಸ್ಟ್, ಸದ್ಯ ಪಾಯಿಂಟ್ಸ್ ಪಟ್ಟಿಯಲ್ಲಿ 10ನೇ ಸ್ಥಾನದಲ್ಲಿದ್ದಾರೆ.


ಬೆಂಗಳೂರಿಗೆ ಗುರುವಾರ ಆಗಮಿಸಿದ 2022ರ ಕಾಮನ್‌ವೆಲ್ತ್ ಗೇಮ್ಸ್ ಕ್ವೀನ್ಸ್ ಬೇಟನ್ ರಿಲೇಯನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) ಅಧ್ಯಕ್ಷ ಕೆ.ಗೋವಿಂದರಾಜು (ಎಡದಿಂದ ಮೂರನೆಯವರು) ಸ್ವೀಕರಿಸಿದರು. ಈ ಸಂದರ್ಭದಲ್ಲಿ ಕೆಒಎ ಪ್ರಧಾನ ಕಾರ್ಯದರ್ಶಿ ಟಿ.ಅನಂತರಾಜು, ಐಒಎ ಸದಸ್ಯ ಹರಿ ಓಂ ಮತ್ತು ರಾಜ್ಯ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಎಚ್‌. ಆರ್‌. ಗೋಪಾಲಕೃಷ್ಣ ಇದ್ದರು.

ಟೆನಿಸ್: ಯೂಕಿಗೆ ನಿರಾಸೆ

ಮೆಲ್ಬರ್ನ್ (ಪಿಟಿಐ): ಯೂಕಿ ಭಾಂಬ್ರಿ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ನಿರಾಸೆ ಅನುಭವಿಸಿದರು. ಅವರ ಸೋಲಿನೊಂದಿಗೆ ಈ ವರ್ಷದ ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಪ್ರಧಾನ ಸುತ್ತಿನ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಯಾವ ಆಟಗಾರನೂ ಇಲ್ಲದಂತಾಗಿದೆ.

ಅರ್ಹತಾ ಸುತ್ತಿನ ಎರಡನೇ ಪಂದ್ಯದಲ್ಲಿ ಯೂಕಿ 1-6, 3-6ರಿಂದ ಜೆಕ್ ಗಣರಾಜ್ಯದ ಥಾಮಸ್ ಮಚಾಕ್ ವಿರುದ್ಧ ಸೋತರು.


ಯೂಕಿ ಭಾಂಬ್ರಿ

ದೀರ್ಘ ಕಾಲದ ನಂತರ ಗ್ರ್ಯಾನ್‌ಸ್ಲಾಂ ಕಣಕ್ಕೆ ಮರಳಿದ್ದ ಭಾರತದ ಆಟಗಾರ ಮಂಗಳವಾರ ನಡೆದ ಮೊದಲ ಸುತ್ತಿನಲ್ಲಿ ಜಯ ಗಳಿಸಿ ಭರವಸೆ ಮೂಡಿಸಿದ್ದರು.

ರಾಮ್‌ಕುಮಾರ್ ರಾಮನಾಥನ್ ಮತ್ತು ಅಂಕಿತಾ ರೈನಾ ಈಗಾಗಲೇ ಸೋತು ನಿರ್ಗಮಿಸಿದ್ದಾರೆ.

ಬಾಲ್ ಬ್ಯಾಡ್ಮಿಂಟನ್: ಕರ್ನಾಟಕಕ್ಕೆ 3ನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬಾಲಕ ಹಾಗೂ ಬಾಲಕಿಯರ ತಂಡಗಳು ಇತ್ತೀಚೆಗೆ ಕೊನೆಗೊಂಡ ರಾಷ್ಟ್ರೀಯ ಸಬ್‌ಜೂನಿಯರ್ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಉತ್ತಮ ಸಾಧನೆ ಮಾಡಿವೆ.

ಆಂಧ್ರಪ್ರದೇಶದ ಶ್ರೀಕಾಕುಳಂನಲ್ಲಿ ನಡೆದ ಟೂರ್ನಿಯಲ್ಲಿ ಬಾಲಕರ ತಂಡವು 3–2ರಿಂದ ಮಹಾರಾಷ್ಟ್ರ ತಂಡವನ್ನು ಸೋಲಿಸಿ ಮೂರನೇ ಸ್ಥಾನ ಗಳಿಸಿತು. ರಾಜ್ಯದ ಬಾಲಕಿಯರ ತಂಡವು ನಾಲ್ಕನೇ ಸ್ಥಾನ ತನ್ನದಾಗಿಸಿಕೊಂಡಿತು. ಈ ತಂಡಗಳಿಗೆ ಕುಮಾರಸ್ವಾಮಿ ಅವರು ತರಬೇತಿ ನೀಡಿದ್ದರು. ನಾರಾಯಣಸ್ವಾಮಿ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಿದ್ದರು.